ಉಪನ್ಯಾಸ ಗ್ರಂಥಮಾಲೆ

೧೩೫

ಸಾವಿತ್ರಿ

ಪ್ರಹ್ಲಾದ ನರೇಗಲ್ಲ, ಎಂ. ಎ., ಬಿ. ಟಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಡಿಸೆಂಬರ ೧೯೭೧

ಸಾವಿತ್ರಿ

ಉಪನ್ಯಾಸ ಗ್ರಂಥಮಾಲೆ

೧೩೫

ಶ್ರೀ ಅರವಿಂದರ ಮಹಾಕಾವ್ಯ

ಸಾವಿತ್ರಿ

ಪ್ರಹ್ಲಾದ ನರೇಗಲ್ಲ, ಎಂ. ಎ., ಬಿ. ಟಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಡಿಶೆಂಬರ ೧೯೭೧

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ ಎ., ಎಲ್ಎಲ್. ಬಿ.
ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ಡಿಶಂಬರ, ೧೯೭೧

೫,೦೦೦ ಪ್ರತಿಗಳು

ಬೆಲೆ: ೭೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ-೩

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೧೩೩ ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ,

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೮-೧೧-೧೯೭೧

ಎ. ಎಸ್. ಅಡಕೆ
ಉಪಕುಲಪತಿ

ಉಪಕಾರ ಸ್ಮರಣೆ

ಇದೇ ವಿರೋಧಿಕೃತ್ ಸಂವತ್ಸರದ ಚೈತ್ರ ಶುದ್ಧ ೨ ಮತ್ತು ೩ ರಂದು– ದಿನಾಂಕ ೨೮, ೨೯ ಮಾರ್ಚ ೧೯೭೧ ರಂದು ಹುಲಿಗಿ (ಮುನಿರಾಬಾದ) ಗ್ರಾಮದಲ್ಲಿ ಸ್ಥಳೀಯ 'ತರುಣ ಸಂಘ'ದ ಸಹಕಾರದೊಂದಿಗೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯದ ೪೧೩ ನೇ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರವು ನೆರೆಯಿತಷ್ಟೆ. ಮೊದಲನೆದಿನ ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'ಯನ್ನು ಕುರಿತು ಉಪನ್ಯಾಸ-ವೀಯುವ ಸದವಕಾಶವು ನನಗೆ ದೊರೆತಿತ್ತು; ಮುಂದೆ ಪುಸ್ತಕರೂಪದಲ್ಲಿ ಈ ಕಾವ್ಯದ ಪ್ರಾಥಮಿಕ ಪರಿಚಯವನ್ನು ಅಣಿಗೊಳಿಸಲು ನಮ್ಮ ವಿಶ್ವವಿದ್ಯಾಲಯದ ಸಂಚಾಲಕರು ಅಪ್ಪಣೆಯಿತ್ತುದಕ್ಕಾಗಿ ಅವರಿಗೆಲ್ಲಾ ನಾನು ಅತ್ಯಂತ ಉಪ ಕೃತನಾಗಿದ್ದೇನೆ.

ಈ ಪುಸ್ತಕವನ್ನು ರಚಿಸುವಾಗ ನನಗೆ ನೆರವಾದ ಗ್ರಂಥ ಋಣವನ್ನು ಕೊನೆಗೆ ಅನುಬಂಧದಲ್ಲಿ ಸೂಚಿಸಿದ್ದೇನೆ. ವಿಶೇಷವಾಗಿ ಶ್ರೀಅರವಿಂದಾಶ್ರಮದ ಹಿರಿಯ ಸಾಧಕರಾಗಿದ್ದ ದಿವಂಗತ ಶ್ರೀ ಎ. ಬಿ. ಪುರಾಣಿಯವರು ಮತ್ತು ಡಾ. ಶ್ರೀಮತಿ ಪ್ರೇಮಾ ನಂದಕುಮಾರರು 'ಸಾವಿತ್ರಿ' ವಿಷಯಕ ವಾಗಿ ಬರೆದ ಗ್ರಂಥದ್ವಯ ನನಗೆ ಆಧಾರ ಸಾಮಗ್ರಿಯಾಗಿದೆ;

ಅಲ್ಲದೆ ಶ್ರೀ ಅರವಿಂದಾಶ್ರಮದ ಕನ್ನಡ ತ್ರೈಮಾಸಿಕ "ದೀಪ್ತಿ" ಯಲ್ಲಿ ೧೯೬೪ರಿಂದ ಗುರುಬಂಧು ಶ್ರೀ ಎಂ. ಆರ್. ಜಹಾಗಿರ್ದಾರರು ಧಾರಾವಾಹಿಯಾಗಿ ಬರೆಯುತ್ತಿರುವ ಸಾವಿತ್ರಿ ಪರಿಚಯಾತ್ಮಕ ಲೇಖನಮಾಲೆ ನನಗೆ ತುಂಬಾ ನೆರವು ನೀಡಿದೆ. ಆದುದರಿಂದ ಈ ಮೂವರೂ ಲೇಖಕರಿಗೂ 'ದೀಪ್ತಿ'ಯ ಸಂಪಾದಕರಿಗೂ ಕೃತಜ್ಞತೆಯ ವಂದನೆಗಳನ್ನು ಮೊದಲು ಅರ್ಪಿಸುತ್ತೇನೆ. ಈ ಹಸ್ತಪತ್ರಿಕೆಯನ್ನು ಓದಿ ನೋಡಿ ಸಲಹೆ ನೀಡಿದ ಪೂಜ್ಯ ಗುರುವರ್ಯ ಡಾ|| ದ. ರಾ. ಬೇಂದ್ರೆಯವರಿಗೂ ಸನ್ಮಿತ್ರರಾದ ಪ್ರೊ|| ಎ. ವ್ಹಿ. ಶಾಸ್ತ್ರಿಯ ವರಿಗೂ ನಾನು ಉಪಕೃತನಾಗಿದ್ದೇನೆ.

ಕೊನೆಯದಾಗಿ, ತುಂಗಭದ್ರಾ ತೀರದಲ್ಲಿ ಸನ್ನಿಹಿತಳಾದ ಜಗದಂಬೆ ಶ್ರೀ ಹುಲಿಗಿಯಮ್ಮನ ಪವಿತ್ರ ಸಾಂನಿಧ್ಯದಲ್ಲಿ ನೆರೆದ ಅಂದಿನ ಸಭೆಯ ಆತಿಥೇಯ ಮಿತ್ರರಿಗೂ ಉಪನ್ಯಾಸಕ ರನ್ನು ಪ್ರೋತ್ಸಾಹಿಸಿದ ಆ ಊರ ಸಕಲ ಗುರುಹಿರಿಯರಿಗೂ ಶಿಬಿರದ ಸಹಾಯಕ ಸಂಚಾಲಕರಾದ ಸನ್ಮಿತ್ರ ಶ್ರೀ ಗುಡ್ಡಿನ ರವರಿಗೂ ವಿನಯಪೂರ್ವಕವಾಗಿ ವಂದಿಸುತ್ತೇನೆ.

ಅದರಂತೆಯೆ ಶಿಬಿರಜೀವನವನ್ನು ತಮ್ಮ ಸಜ್ಜನಿಕೆ- ರಸಿಕತೆ ವಿದ್ವತ್ತುಗಳಿಂದಲೂ ಕಾವ್ಯಶಾಸ್ತ್ರ ವಿನೋದ ದಿಂದಲೂ ಉಲ್ಲಾಸಗೊಳಿಸಿದ ಇತರ ಉಪನ್ಯಾಸಕ ಬಂಧು ಗಳಿಗೂ ಕಳಕಳಿಯ ನೆನಕೆಗಳನ್ನು ಸಲ್ಲಿಸುತ್ತೇನೆ. ಉಪನ್ಯಾಸ ಮುಗಿದ ಮೇಲೆ ನನ್ನ ಆರೋಗ್ಯದ ಬಗ್ಗೆ ವಿಚಾರಿಸುತ್ತಲೂ

ನೆನಪಿನ ಓಲೆ ಬರೆಯುತ್ತಲೂ ಈ ಪುಸ್ತಕವನ್ನು ಬರೆದು ಮುಗಿಸುವವರೆಗೆ ನನ್ನನ್ನು ಹುರುಪುಗೊಳಿಸಿದ ಪ್ರಿಯ ಸುಹೃತ್ ಶ್ರೀ ಕಣವಿಯವರ ನಮ್ಮ ವಿಶ್ವವಿದ್ಯಾಲಯದ-ವ್ಯಾಸಂಗ ವಿಸ್ತರಣ ಶಾಖೆಯ ಸನ್ಮಾನ್ಯ ನಿರ್ದೇಶಕರ ಕರುಣೆಯನ್ನು ನಾನು ಮರೆಯುವುದೆಂತು?

ವಿಶ್ವಗುರು ಶ್ರೀ ಅರವಿಂದರ ಪ್ರಥಮ ಜನ್ಮಶತಾಬ್ದಿಯ ಸುಮುಹೂರ್ತದಲ್ಲಿ ಈ ಪುಸ್ತಕವು ಬೆಳಕಿಗೆ ಬರುತ್ತಿರುವುದರಿಂದ ನನಗೆ ಹೆಚ್ಚಿನ ಹಿಗ್ಗು. ಈ ಪುಸ್ತಕವನ್ನು ಬರೆಯುವಾಗಲೆಲ್ಲಾ ನನ್ನನ್ನು ಪ್ರೇರೇಪಿಸಿದ ಶ್ರೀ ಗುರುಶಕ್ತಿಗೆ ಅನಂತ ಪ್ರಣಾಮಗಳು !

ಹುಬ್ಬಳ್ಳಿ
೧೫-೯-೭೧

ಪ್ರಹ್ಲಾದ. ಬ. ನರೇಗಲ್ಲ

ಪರಿವಿಡಿ

೧. ಮಹಾಕಾವ್ಯದ ಮುನ್ನೋಟ

i. ಉಪಕ್ರಮ:

೧೯೭೨ ಆಗಸ್ಟ ೧೫ ಕ್ಕೆ ಶ್ರೀ ಅರವಿಂದಘೋಷರು ಜನಿಸಿ ೧೦೦ ವರುಷಗಳಾಗುವವು. ಅವರ ಜಯಂತಿಯ ಪ್ರಥಮ ಶತಕೋತ್ಸವದ ಪೂರ್ವಸಿದ್ಧತೆ ಭಾರತದಲ್ಲೂ ಪ್ರಪಂಚದ ಇತರ ಭಾಗಗಳಲ್ಲೂ ಭರದಿಂದ ನಡೆದಿದೆ. ಶ್ರೀ ಅರವಿಂದರನ್ನು ಈ ಲೋಕವು ನಾನಾ ವಿಧವಾಗಿ ಕೊಂಡಾಡುತ್ತಿದೆ. ಭಾರತದ ರಾಷ್ಟ್ರೀಯತ್ವದ ಆದ್ಯ ಪುರಸ್ಕರ್ತ, ರಾಜಕೀಯ ಕ್ರಾಂತಿಕಾರರಲ್ಲಿ ಅಗ್ರೇಸರ, ಮಹರ್ಷಿ, ಮಹಾಯೋಗಿ, ಯುಗಪುರುಷ, ಕ್ರಾಂತಿದರ್ಶಿ, ಕವಿ, ಮನುಕುಲದ ಉದ್ಧಾರಕ, ಪೂರ್ಣಯೋಗದ ದಾರ್ಶನಿಕ, ಅತಿಮಾನಸ ಅಥವಾ ಸುಪ್ರಮಾನಸ ತತ್ತ್ವದ ದ್ರಷ್ಟಾರ ಇತ್ಯಾದಿ ಹಲವಾರು ವಿಶೇಷಣಗಳಿಂದ ಅವರನ್ನು ಪೃಥ್ವಿಯ ಪಂಚಖಂಡಗಳಲ್ಲಿಯ ಜ್ಞಾನಿಗಳೂ ಮನೀಷಿಗಳೂ ಸ್ಮರಿಸುತ್ತಿದ್ದಾರೆ. ಅವರ ಜೀವನ ಸಿದ್ಧಿಯು ಮನನ-ಚಿಂತನಗಳೂ ಅವರು ರಚಿಸಿದ ಬೃಹದ್-ಗ್ರಂಥಗಳ ಹಾಗೂ ಇತರ ಮಹತ್ ಕೃತಿಗಳ

ಪಠನ-ಪಾರಾಯಣಗಳೂ ಈಗ ಸರ್ವತ್ರ ನಡೆದಿವೆ. ಅವರು ಬರೆದ ಸಕಲ ಆಂಗ್ಲ ಕೃತಿಗಳನ್ನು 19 Cms × 27Cms ಆಕಾರದ ೧೫೦೦೦ ಪುಟಗಳನ್ನುಳ್ಳ ೩೦ ಬೃಹತ್ ಸಂಪುಟಗಳಲ್ಲಿ ಒಂದು ವಿಶ್ವಕೋಶ (Encyclopedia) ರೂಪದಲ್ಲಿ ಪ್ರಕಟಗೊಳಿಸುವ ಘನಕಾರ್ಯ ಶ್ರೀ ಅರವಿಂದಾಶ್ರಮದಲ್ಲಿ ಭರದಿಂದ ನಡೆದಿದೆ; ಈಗಾಗಲೆ ಕಳೆದ ೧೫-೮-೭೧ಕ್ಕೆ ೧೫ ಸಂಪುಟಗಳು ಹೊರಬಂದಿವೆ. ಅವರ ಕೃತಿರತ್ನಗಳಲ್ಲಿ ಕೊನೆಯದಾದ 'ಸಾವಿತ್ರಿ'ಗ್ರಂಥವು ಒಂದು ಮಹಾಕಾವ್ಯವಾಗಿದೆ. ಈ ಕೃತಿಗೆ ಶ್ರೀಮಾತಾಜಿ 'Super-Epic' ಎಂದು ಕರೆದಿದ್ದಾರೆ.

ii. "ಸಾವಿತ್ರಿ" ಕಾವ್ಯದ ವೈಶಿಷ್ಟ್ಯ

ಇಂಗ್ಲಿಷ್ ಭಾಷೆಯಲ್ಲಿಯೆ ಶ್ರೀ ಅರವಿಂದರ ಎಲ್ಲ ಮಹತ್ತ್ವದ ಕೃತಿಗಳು ರಚಿತವಾಗಿದ್ದು 'ಸಾವಿತ್ರಿ'ಯಾದರೂ ಅದೇ ಭಾಷೆಯಲ್ಲಿ ಇದೆ. ಶ್ರೀ ಅರವಿಂದರು ಯೋಗಿಗಳಂತೂ ಸರಿಯೇ ಸರಿ; ಆದರೆ ಮುಖ್ಯವಾಗಿ ಅವರು ಕವಿಗಳು. ಬಾಲ್ಯದಿಂದಲೆ ಅವರ ಕಾವ್ಯ ಸೃಷ್ಟಿ ಮೊದಲುಗೊಂಡು ಕೊನೆಯ ವರೆಗೂ ಅದು ಮುಂದುವರಿಯಿತು. 'Early poems, Last poems' ಎಂಬ ಸಣ್ಣ ಸಂಕಲನಗಳಲ್ಲದೆ ಅವರ ಕವಿತೆ, ನಾಟಕಗಳ ದೊಡ್ಡ ಗಾತ್ರದ ಎರಡು ಸಂಗ್ರಹಗಳೂ ಬೆಳಕು ಕಂಡಿವೆ. ಭಾವಗೀತೆ, ಕಥನಕಾವ್ಯ, ಗೀತನಾಟಕ, ಗ್ರೀಕ್-ಸಂಸ್ಕೃತ-ಬಂಗಾಲಿ ಕೃತಿಗಳ ಅನುವಾದ, ಸರಳರಗಳೆ, ಅನುಭಾವದ ಪದ್ಯಗಳು, ಮಹಾಕಾವ್ಯ ಹೀಗೆ ನಾನಾಮುಖವಾಗಿ ಅವರ ಕಾವ್ಯಗಂಗೆ ಓತಪ್ರೋತವಾಗಿ ಹರಿದು ಬಂದಿದೆ. 'ಸಾವಿತ್ರಿ'

ಕಾವ್ಯ ಅವರ ಕೃತಿರತ್ನಗಳಲ್ಲಿ ಮಹೋನ್ನತವಾದುದಾಗಿದೆ: ಇದರಲ್ಲಿ ಬರುವ 'ಮರಣ'ವನ್ನು ಕುರಿತ ಭಾಗವು ಅವರ ಕೊನೆಯುಸಿರು ಎಳೆಯುವ ಸ್ವಲ್ಪ ಪೂರ್ವದಲ್ಲಿ ರೂಪುಗೊಂಡಿತು. ಅವರ ವಿವಿಧ ಕಾವ್ಯವಿಸ್ತಾರ ಒಟ್ಟಿನಲ್ಲಿ ೩೦೦೦ ಪುಟಗಳನ್ನು ಮೀರುವಂತಿದೆ.

ಈ 'ಸಾವಿತ್ರಿ' ಕೃತಿಯು ಅವರ ಜೀವನದ ಉತ್ತರಾರ್ಧದಲ್ಲಿ ಕೊನೆಯ ೨೫ ವರುಷಗಳ ಅವಧಿಯಲ್ಲಿ ಅನೇಕ ಸಲ ಪರಿಷ್ಕಾರಗೊಂಡಿತು; ಅಂತೆಯೆ ಪಕ್ವತೆಯ ಪರಾಕಾಷ್ಠೆಯನ್ನು ತಲುಪಿದ ಮಹಾಗ್ರಂಥವು ಇದಾಗಿದೆ. ಸುಮಾರು ೨೪೦೦೦ ದೀರ್ಘ ಪಾದಗಳನ್ನು ಇದು ಒಳಗೊಂಡಿದೆ; ರಾಮಾಯಣವೂ ಇಷ್ಟೇ ಶ್ಲೋಕಗಳಿಂದ ಕೂಡಿದೆಯೆಂಬುದನ್ನು ಇಲ್ಲಿ ನೆನೆಯುವಂತಿದೆ. ಶ್ರೀ ವ್ಯಾಸಮಹರ್ಷಿಗಳ ಮಹಾಭಾರತದಲ್ಲಿಯ ಅರಣ್ಯ ಪರ್ವದಲ್ಲಿ ಬರುವ ಕೇವಲ ೨೦೦ ಸಾಲುಗಳಲ್ಲಿದ್ದ 'ಸಾವಿತ್ರೀ-ಸತ್ಯವಾನ್' ಉಪಾಖ್ಯಾನವು ಶ್ರೀ ಅರವಿಂದರ ಚಿತ್ತವನ್ನು ಅವರ ಬರೋಡಾವಾಸದಲ್ಲಿಯೆ ಮೊದಲ ಸಲ ಸೆಳೆದಿತ್ತು. ಅಂದಿನಿಂದಲೇ ಈ ಕಥೆಯನ್ನು ಕುರಿತು ಇಂಗ್ಲಿಷಿನಲ್ಲಿ ಅನೇಕ ಸಲ ಸಾಮಾನ್ಯ ಮನಸ್ತರದ ಕಲ್ಪನಾವಿಲಾಸದಿಂದ ಕಾವ್ಯರಚಿಸಿ ಅದನ್ನು ಪುನಃ ಪುನಃ ತಿದ್ದಿದ ಸಂಗತಿ ಅವರ ಪೂರ್ವಾಶ್ರಮದ ಜೀವನಾವಧಿಗೆ ಸಂಬಂಧಿಸಿದೆ. ಆ ಮಾತು ಸದ್ಯದ 'ಸಾವಿತ್ರಿ' ಮಹಾಕಾವ್ಯಕ್ಕೆ ಪ್ರಸ್ತುತವಾದುದಲ್ಲ. ಅವರು ೧೯೨೬ ನವ್ಹೆಂಬರ ೨೪ ರಂದು ಪಡೆದ ಅಧಿಮಾನಸ ಸಾಕ್ಷಾತ್ಕಾರದ ಈಚಿನ ಅವಧಿಗೆ ಸದ್ಯದ

'ಸಾವಿತ್ರಿ' ಕೃತಿ ಸೇರಿದ್ದು, ಅದು ಪರಮಸತ್ಯದೊಂದಿಗೆ ಪಡೆದ ಸಂಪರ್ಕದಿಂದ ಒಡಮೂಡಿ ಬಂದ ಕಾವ್ಯವೆಂದು ಅವರೇ ಹೇಳಿದ್ದಾರೆ.

iii. ಈ ಕಾವ್ಯದ ವಿಸ್ತಾರ:

ಶ್ರೀ ವೇದವ್ಯಾಸರ ಮೂಲ ಉಪಾಖ್ಯಾನದ ಹಂದರದ ಮೇಲೆಯೆ ಶ್ರೀ ಅರವಿಂದರು ತಮ್ಮೀ ಮಹಾಕಾವ್ಯವನ್ನಿ ಯನ್ನು ಬಹು ವಿಸ್ತಾರವಾಗಿ ಬೆಳೆಸಿದ್ದಾರೆ. ತಮ್ಮ ಕೃತಿ ಯನ್ನು ಕುರಿತು ಗ್ರಂಥಕರ್ತರೇ 'Savitri A Legend and A Symbol' ಎಂದು ಕರೆದಿದ್ದಾರೆ."Savitri is an experiment In Mystic Poetry, Spiritual poetry cast into a symbolic figure- ಆಧ್ಯಾತ್ಮಿಕ ಕಾವ್ಯವನ್ನು ಸಾಂಕೇತಿಕ ರೂಪಕಗಳಲ್ಲಿ ಎರಕಹಾಕಲಾಗಿದ್ದು ಅನುಭಾವ ಪರ ಕಾವ್ಯಕ್ಷೇತ್ರದಲ್ಲಿ ಇದೊಂದು ವಿಶಿಷ್ಟ ಪ್ರಯೋಗವಾ ಗಿದೆ"ಯೆಂದು ಕವಿಗಳೇ ಹೇಳಿದ್ದಾರೆ. ಶ್ರೀ ಅರವಿಂದ ಪ್ರಣೀತ ಪೂರ್ಣಯೋಗದಲ್ಲಿ ಸಹಭಾಗಿಗಳಾದ ಶ್ರೀ ಮಾತಾಜಿ ಯವರು ಈ 'Super-Epic' ಕೃತಿಯನ್ನು ಇದುವರೆಗೆ ಪೃಥ್ವಿಯಲ್ಲಿ ನಿರ್ಮಾಣಗೊಂಡ ಇತರ ಮಹಾಕಾವ್ಯಗಳಿಗೆ ಹೋಲಿಸುವುದು ಸಮಂಜಸವಾಗಲಾರದೆಂದು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಈ ಕೃತಿಯ ಸ್ತರವು ಇತರ ಕೃತಿಗಳ ಸ್ತರಕ್ಕಿಂತಲೂ ಭಿನ್ನವಾದುದೆಂಬುದನ್ನು ಶ್ರೀ ತಾಯಿ ಇಂತು ಬಣ್ಣಿಸುತ್ತಾರೆ. "Savitri, a prophetic vision of the World's History including the announce-

ment of the earthly future"-ಅಂದರೆ ಶ್ರೀ ಅರವಿಂದರು ಈ ಕೃತಿಯ ಮೂಲಕ ಜಾಗತಿಕ ಚರಿತ್ರೆಯ ದಾರ್ಶನಿಕ ಪ್ರವಾದಿಗಳೂ ಪೃಥ್ವಿಯ ಭವಿತವ್ಯದ ಡಂಗುರಿಗರೂ ಆಗಿದ್ದಾರೆ ಎಂದು ತಮ್ಮ ಸಾರಿಕೆಯಲ್ಲಿ ಶ್ರೀ ತಾಯಿ ಸ್ಪಷ್ಟಪಡಿಸಿದ್ದಾರೆ. ಈ ಸಾರಿಕೆ ಶ್ರೀ ಅರವಿಂದಾಶ್ರಮದಿಂದ ಪ್ರಕಟವಾದ **.Meditation. in Savitri** ಎಂಬ ವರ್ಣಮಯ ಸಚಿತ್ರ ಸಂಪುಟದಲ್ಲಿ ಉಲ್ಲೇಖಿತವಾಗಿದೆ.

ಇಂಗ್ಲಿಷ್ ಭಾಷೆ 'ಸಾವಿತ್ರಿ' ಮುಕ್ತಾಂತರ ಮಂತ್ರ ಮಾಲೆಯಾಗಿದೆ. ಶ್ರೀ ಅರವಿಂದ ಪ್ರಣೀತ ಪೂರ್ಣಯೋಗದ ಜ್ಞಾನ, ಅನುಸಂಧಾನ, ಸಾರ್ವತ್ರಿಕ ಅನುಷ್ಠಾನಗಳ ಸಮನ್ವಯವನ್ನು ಈ ಕೃತಿರತ್ನವು ಒಳಗೊಂಡಿದೆ. ೧೨ ಅಧ್ಯಾಯ (Books) ಗಳಲ್ಲಿ ೪೮+೧ ಸರ್ಗ (Cantoes)ಗಳು ಅಡಕವಾಗಿದ್ದು, ಒಟ್ಟು ೨೩,೮೧೪ ಪಾದಗಳನ್ನು ಈ ಮಹಾಕಾವ್ಯವು ಪಡೆದಿದೆ. ಅದರಲ್ಲಿ ಸುಮಾರು ಅರ್ಧದಷ್ಟು ಅಂದರೆ ೧೧,೮೦೦ ಸಾಲುಗಳು ಸಾವಿತ್ರಿಯ ತಂದೆಯಾದ ಅಶ್ವಪತಿಯ ಯೋಗ ಸಾಧನೆ-ಸಿದ್ಧಿಗಳನ್ನು ಬಣ್ಣಿಸುತ್ತವೆ; ಉಳಿದ ಭಾಗವೆಲ್ಲಾ ಸಾವಿತ್ರಿಯ ಸಾಧನೆ–ಸಿದ್ಧಿಗಳನ್ನು ವಿವೇಚಿಸುತ್ತದೆ.

iv. ಶ್ರೀ ಅರವಿಂದರ ಮಾರ್ಪಾಡುಗಳು:

ಮೂಲ ಭಾರತದ ಕಥೆಯನ್ನು ಒಟ್ಟಿನಲ್ಲಿ ಇದ್ದಕ್ಕಿದ್ದಂತೆ ಉಳಿಸಿಕೊಂಡಿದ್ದರೂ ಕೆಲವು ಮಹತ್ತ್ವದ ಮಾರ್ಪಾಡು

ಗಳನ್ನು ಮಾಡಿಕೊಳ್ಳಲಾಗಿದೆ; ಅದರಲ್ಲಿ ಹೆಚ್ಚಿನ ಹುರುಳನ್ನು ಸೇರಿಸಲಾಗಿದೆ:

ಅ) ಮೂಲದಲ್ಲಿ ಅಶ್ವಪತಿಯು ೧೮ ವರುಷಗಳ ಸುದೀರ್ಘ ತಪಸ್ಸು, ಸಾವಿತ್ರಿ ದೇವತಾ ಸಾಕ್ಷಾತ್ಕಾರ ಮತ್ತು ಆ ದೇವತೆ ದಯಪಾಲಿಸಿದ ವರ ಇಷ್ಟೆಲ್ಲವನ್ನೂ ಶ್ರೀ ವೇದವ್ಯಾಸರು ೧೦ ಸಾಲುಗಳಲ್ಲಿ ಮಾತ್ರ ಮುಗಿಸಿದ್ದಾರೆ. ಆದರೆ ಶ್ರೀ ಅರವಿಂದರು ಈ ವಿಷಯಕ್ಕೆ ಸುಮಾರು ೧೨,೦೦೦ ಸಾಲು ಮೀಸಲಿರಿಸಿದ್ದಾರೆ. ಅದರಂತೆ ಉತ್ತರಾರ್ಧದಲ್ಲಿ ಬರುವ ಸಾವಿತ್ರಿಯ 'ತ್ರಿರಾತ್ರವ್ರತ'ಕ್ಕೆ ಶ್ರೀ ವ್ಯಾಸ ಮಹರ್ಷಿಗಳು ೮ ಸಾಲು ಮಾತ್ರ ಬಳಸಿದ್ದರೆ ಶ್ರೀ ಅರವಿಂದರು ಸಾವಿತ್ರಿಯ ಯೋಗಸಾಧನೆಗಾಗಿ ೩೦೦೦ ಸಾಲುಗಳನ್ನು ಬಳಸುತ್ತಾರೆ.

ಆ) ಸಾವಿತ್ರಿ ವರಶೋಧನೆಗೆ ಹೊರಟ ಬಳಿಕ ಏನೇನು ನಡೆಯಿತೆಂಬ ಬಗೆಗೆ ಮೂಲಭಾರತವು ಮೌನತಾಳಿದೆ; ಸತ್ಯವಾನನನ್ನು ತಾನು ವರನನ್ನಾಗಿ ಸ್ವೀಕರಿಸಿದ ವರದಿ ಮಾತ್ರ ಮೂಲದಲ್ಲಿದೆ. ಆದರೆ ಶ್ರೀ ಅರವಿಂದರು ಸಾವಿತ್ರಿಯ ಮಹಾ ಯಾತ್ರೆಯನ್ನು ೪ನೇ ಅಧ್ಯಾಯದಲ್ಲಿಯ ೩ನೇ ಮತ್ತು ೪ನೇ ಸರ್ಗಗಳಲ್ಲಿಯೂ ಹಾಗೂ ಸತ್ಯವಾನನನ್ನು ಪ್ರಥಮ ಸಲ ಕಂಡ ಪ್ರೇಮ ದೃಶ್ಯವನ್ನು Book of Love ಎಂಬ ೫ನೇ ಅಧ್ಯಾಯದಲ್ಲಿ ಮೂರು ಸರ್ಗಗಳಲ್ಲಿಯೂ ವಿವರ ವಿವರಗಳೊಂದಿಗೆ ವಿಸ್ತಾರವಾಗಿ ವರ್ಣಿಸುತ್ತಾರೆ.

ಇ) ಮೂಲದಲ್ಲಿ ಅಶ್ವಪತಿಯ ಸತಿ ಅಂದರೆ ಸಾವಿತ್ರಿಯ ತಾಯಿ ಮಾತನಾಡುವ ಸಂದರ್ಭವೇ ಇಲ್ಲ; ಶ್ರೀ ಅರವಿಂದರ ಈ ಕೃತಿಯಲ್ಲಿ ಆ ತಾಯಿ ಮಾತನಾಡುತ್ತಾಳೆ. ಅಲ್ಪಾಯುಷಿ ವರನನ್ನು ಬಿಟ್ಟುಕೊಟ್ಟು ಮತ್ತೊಬ್ಬನನ್ನು ಹುಡುಕೆಂದು ಮೂಲದಲ್ಲಿ ತಂದೆ ಹೇಳಿದರೆ ಇಲ್ಲಿ ಆ ತಾಯಿ ತನ್ನ ಮಗಳಿಗೆ ಅದನ್ನು ಹೇಳುವಳು. ಇಲ್ಲಿ ಕವಿಯಿಂದ ಮಾನವೀಯ ಮಾತೃಹೃದಯ ವರ್ಣಿತವಾಗಿದೆ.

ಈ) ಅಶ್ವಪತಿ ಸಾವಿತ್ರಿಯನ್ನು ಮಗಳಾಗಿ ಪಡೆಯಲು ಕೈಕೊಂಡ ತಪಸ್ಸಿನಲ್ಲಿ ಶ್ರೀ ಅರವಿಂದರು ಪೃಥ್ವೀವಿಕಾಸದ ಚರಿತ್ರೆಯನ್ನೇ ಅಡಕಗೊಳಿಸಿದ್ದಾರೆ; ಕಾವ್ಯದ ಪೂರ್ವಾರ್ಧದಲ್ಲಿ ೧೫ ಸರ್ಗಗಳನ್ನುಳ್ಳ ೨ನೇ ಅತಿದೀರ್ಘ ಅಧ್ಯಾಯವನ್ನು ಇದಕ್ಕಾಗಿ ಕವಿ ಮೀಸಲಿರಿಸಿದ್ದಾರೆ. ಅದರಂತೆ ದೈವೀ ಪ್ರೇಮದ ಬಲದಿಂದ ಪೃಥ್ವಿಯನ್ನೇ ಅದ್ಭುತವಾಗಿ ಪರಿವರ್ತಿಸಲು ಸಾವಿತ್ರಿಯ ಆಂತರಿಕ ಸಾಧನೆ ಸಮರ್ಥವಾಯಿತೆಂಬುದಕ್ಕೆ ಉತ್ತರಾರ್ಧದ ಅಧ್ಯಾಯಗಳನ್ನು ಮೀಸಲಿರಿಸಿದ್ದಾರೆ.

ಉ) ಯಮನು ಇಲ್ಲಿ ಮೂಲಭಾರತದಲ್ಲಿಯಂತೆ ಯಮಧರ್ಮನೆಂಬ ದೇವತಾಪುರುಷನಾಗಿರದೆ ಅಜ್ಞಾನದ ಪ್ರತೀಕವಾದ ಕೇವಲ ಮೃತ್ಯುಶಕ್ತಿಯಾಗಿದ್ದಾನೆ.

V. ಕಾವ್ಯದಲ್ಲಿಯ ಸಾಂಕೇತಿಕತೆ:

೧) ಈ ಮಹಾಕಾವ್ಯದಲ್ಲಿ ಅಶ್ವಪತಿ ಪೃಥ್ವಿಯಲ್ಲಿಯ ಮನುಕುಲದ ಪ್ರತಿನಿಧಿಯಾಗಿದ್ದು ಪೃಥ್ವೀವಿಕಾಸದ ಸಂಕೇ

ತವನ್ನು ಅರುಹುತ್ತಾನೆ. ಆತನು ಜಡ. ಪ್ರಾಣ. ಮನೋ ಲೋಕಗಳ ಸ್ಥೂಲ ಮತ್ತು ಸೂಕ್ಷ್ಮ ರೂಪಗಳನ್ನು ಕಂಡು ಕೊಳ್ಳುತ್ತಾನೆ; ಆತನು ಕಂಡ ಇಂಥ ಲೋಕಗಳ ಒಂದು ಬೃಹತ್ ಜಗತ್-ಶ್ರೇಣಿ (World - soul)ಯನ್ನೆ ಈ ಕಾವ್ಯ ದಲ್ಲಿ ಶ್ರೀ ಅರವಿಂದರು ರಚಿಸಿದ್ದಾರೆ. ಈ ಪೃಥ್ವಿಯ ಪ್ರತಿ-ನಿಧಿ ಅನುಭವಿಸಿದ ಸ್ವರ್ಗ-ನರಕಗಳ ಅನುಭವವನ್ನು ಕುರಿತು ಹಾಗೂ ಆದಿಮಾತೆಯ ಭದ್ರ ಮತ್ತು ರುದ್ರ ರೂಪಗಳನ್ನು ಕಂಡು ಆಕೆಯಿಂದ ಪಡೆದ ಅನುಗ್ರಹವನ್ನು ಕುರಿತು ಬೇಲೂರಿನ ವಾಸ್ತುಶಿಲ್ಪದಂತೆ ಪದರು-ಪದರುಗಳಲ್ಲಿಯ ನವಿರು-ನವಿರುಗಳನ್ನು ಕುಶಲ ಶಿಲ್ಪಿಯಂತೆ ಕವಿ ಕಂಡರಿಸಿ ದ್ದಾರೆ.

೨) ಪೃಥ್ವಿಯ ಇಚ್ಛೆಯ ಪ್ರಕಾರ ಅಶ್ವಪತಿ ಅಭೀಪ್ಸೆ ಪಟ್ಟುದಕ್ಕೆ ಅವನಿಗಿತ್ತ ವರರೂಪದಲ್ಲಿ ಸಾವಿತ್ರಿ ಆದಿಮಾತೆಯ ಅವತಾರವಾಗಿ ಜನಿಸುತ್ತಾಳೆ. ಆಕೆ ವ್ಯಕ್ತಿ-ವಿಶ್ವ-ವಿಶ್ವಾತೀತಗಳನ್ನು ಒಳಗೊಂಡ ಪರಾಮಾತೆಯ ಅಮೃತತ್ವದ ಪ್ರತಿ ನಿಧಿಯಾಗಿದ್ದಾಳೆ. ಸೂಕ್ಷ್ಮಶರೀರದಿಂದ ತನ್ನ ಹೃದಯಾಂತ ರಾಳದಲ್ಲಿ ಪ್ರವೇಶಿಸುತ್ತ ಆತ್ಮಶೋಧ ನಡಸಿ ಮೃತ್ಯುವನ್ನು ಗೆಲ್ಲಲು ಅಣಿಯಾಗುತ್ತಾಳೆ.

೩) **ಸತ್ಯವಾನನು** ಜಗದಾತ್ಮ(World-Soul)ನ ಪ್ರತೀಕನಾಗಿದ್ದಾನೆ. To live, to love are signs of infinite things- ಜೀವಿಸುವುದೂ ಪ್ರೀತಿಸುವುದೂ ಅನಂತತೆಯ ಲಕ್ಷಣಗಳೆಂದು ಸಾರುವ ಸಂಕೇತಪಾತ್ರ.

೧) ಸತ್ಯವಾನನ ತಂದೆ **ದ್ಯುಮತ್ಸೇನನು** ಭೂಲೋಕಕ್ಕೆ ಬರುವಾಗ ಯೋಗಭ್ರಷ್ಟವಾಗಿ ಜ್ಞಾನದೃಷ್ಟಿಯನ್ನು ಕಳೆದುಕೊಂಡ ದೇವಮನದ ಒಂದು ಸಂಕೇತವಾಗಿದ್ದಾನೆ. (ಈ ಬಗೆಯ ಮಾತುಗಳನ್ನು ಶ್ರೀ ಅರವಿಂದರೇ ತಮ್ಮೊಂದು ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.)

೨) **ನಾರದರೋ** ಭೂಲೋಕಸ್ವರ್ಗಲೋಕಗಳನ್ನು ತಮ್ಮ ದಿವ್ಯ ದೃಷ್ಟಿಯ ನೆರವಿನಿಂದ ಮಿಲನಗೊಳಿಸುವ ಒಂದು ಸುವರ್ಣಸೇತುವೆಯ ಪ್ರತೀಕವಾಗಿದ್ದಾರೆ. ವಿಧಿಲಿಖಿತ ಮತ್ತು ಭಗವತ್ ಕೃಪೆ ಇವುಗಳನ್ನು ಕುರಿತು ಈ ದೇವರ್ಷಿ ಸುದೀರ್ಘ ಪ್ರವಚನವೀಯುವಂತೆ ಮಾಡಿ ದ್ರಷ್ಟಾರರಾದ ಕವಿಗಳು ಮಾನವನ ಮೂಲಭೂತ ಸಮಸ್ಯೆಯ-ಅಂದರೆ ವಿಧಿಲಿಖಿತವನ್ನು ಬದಲಿಸುವುದು ಸಾಧ್ಯವೇ ಎಂಬ ಮೌಲಿಕ ಸಮಸ್ಯೆಯ-ಪರಿಹಾರವನ್ನು ದೇವರ್ಷಿ ನಾರದರ ಮುಖದಿಂದ ನುಡಿಸಿದ್ದಾರೆ.

೩) **ಯಮನಂತೂ** ಈ ಮೊದಲು ಉಲ್ಲೇಖಿಸಿದಂತೆ ವಿಶ್ವದ ಅಜ್ಞಾನವೆಂಬ ತಮಸ್ಸಿನ ಪ್ರತೀಕವಾದ ಕೇವಲ ಮೃತ್ಯುಶಕ್ತಿಯಾಗಿದ್ದಾನೆ. ಸಾವಿತ್ರಿ ತನ್ನ ಸಂಭಾಷಣೆಯಲ್ಲಿ ವರ್ಣಿಸುವ ಭಗವಂತನು ತಾನೇ ಎಂದೂ ನರನೋ ತನ್ನ ಮುಂದೆ ದ್ವಿಪಾದಕ್ರಿಮಿಯೆಂದೂ ಹೇಳಿಕೊಳ್ಳುತ್ತಾನೆ. ಇಂಥ ಮೃತ್ಯುಶಕ್ತಿಯನ್ನು ಎದುರಿಸಲು ಸಾವಿತ್ರಿ ಮುನ್ನಾದಿನವೇ ಪೂರ್ವಸಿದ್ಧತೆಯಿಂದ ಸನ್ನದ್ಧಳಾಗಬೇಕಾಗುತ್ತದೆ. ಸತ್ಯವಾನನ ಜೀವವನ್ನೇ ಮತ್ತೆ ಮತ್ತೆ ಆಕೆ ಬೇಡಲು ಆಗ

ಮೃತ್ಯು "ನನ್ನನ್ನು ಎದುರಿಸಬಲ್ಲ ನೀನಾರು?" ಎಂದು ಸವಾಲು ಹಾಕುತ್ತ ಆಹ್ವಾನಿಸುತ್ತಾನೆ. ಆಕೆ ಮೌನದಿಂದಲೇ ಉತ್ತರವೀಯುತ್ತಾಳೆ; ಕೊನೆಗೆ ತನ್ನ ಮೂಲ ದಿವ್ಯ ಸ್ವರೂಪವನ್ನು ಪ್ರಕಟಿಸುತ್ತಾಳೆ-ಭಗವದ್ಗೀತೆಯಲ್ಲಿ ಅರ್ಜುನನ ಅಜ್ಞಾನವನ್ನು ಕಳೆಯಲು ಶ್ರೀ ಕೃಷ್ಣ ವಿಶ್ವರೂಪ ತೋರಿಸಿಲಿಲ್ಲವೇ ಹಾಗೆ. ಆಗ ಆ ದಿವ್ಯರೂಪವನ್ನು ಕಂಡು ಮೃತ್ಯು ಕರಗಿಹೋಗುತ್ತಾನೆ. ಸತ್ಯವಾನನು ಮೃತ್ಯುವಿನ ಬಂಧನದಿಂದ ಬಿಡುಗಡೆ ಹೊಂದುತ್ತಾನೆ.

೭) ಈ ಕಾವ್ಯದ ಆದಿ ಅಂತ್ಯಗಳಲ್ಲಿ ಬರುವ 'Dawn' ಮತ್ತು 'Greater Dawn' ವಿಶ್ವಸೃಷ್ಟಿಯನ್ನು ಪ್ರತೀಕಗೊಳಿಸುವ ಸಾಂಕೇತಿಕ ಅರುಣೋದಯ-Symbol Dawn-ಆಗಿವೆ.

vi. ಕಾವ್ಯದ ಸಂದೇಶ:

ಮೃತ್ಯು ಕರಗಿ ಕಣ್ಮರೆಯಾದ ಬಳಿಕ ಸಾವಿತ್ರಿ-ಸತ್ಯವಾನರು ಸೂಕ್ಷ್ಮರೂಪ ತಳೆದು ಸತ್ಯಲೋಕ ಸೇರಿ ಪರಾತ್ಪರ ಪುರುಷನ ದಿವ್ಯ ಸಂನಿಧಿಗೆ ಬಿಜಯಂಗೈಯುತ್ತಾರೆ. "ನನ್ನ ಸಾಂನಿಧ್ಯದಲ್ಲಿಯೆ ಇದ್ದುಬಿಡಿ. ಭೂಲೋಕದ ಗೊಡವೆಯೇಕೆ? " ಎಂದು ಆ ಪರಾತ್ಪರ ಪುರುಷನು ಸಾವಿತ್ರಿಗೆ ಬುದ್ಧಿವಾದ ಹೇಳುತ್ತಾನೆ. "ಛೀ. ಪೃಥ್ವಿಯನ್ನು ದೈವೀ ಪ್ರೇಮದ ನೆರವಿನಿಂದ ರೂಪಾಂತರಗೊಳಿಸಲು ನಾವು ಅಲ್ಲಿಗೆ ಮರಳಲೇಬೇಕು." ಎಂದು ಸಾವಿತ್ರಿ ಪ್ರತಿನುಡಿಯುತ್ತಾಳೆ.

ಆಗ ಆ ಪರಾತ್ಪರ ಪುರುಷನು "ತಥಾಸ್ತು, ನನ್ನ ಇಚ್ಛೆಯೂ ಅದುವೆ ಆಗಿದೆ" ಎಂದು ನುಡಿದು ತನ್ನ ದೈವೀ ಬಲದ ನೆರವನ್ನಿತ್ತು ಆ ಮಧುರ ಮನೋಹರ ಕಾಂತಿಮಯ ದಂಪತಿಗಳನ್ನು ಹರಸುತ್ತಾನೆ. ಆಗ ಅವರು ಭೌತಿಕ ಮಾನವ ರೂಪ ಧರಿಸಿ ಪೃಥ್ವಿಗೆ ಮರಳುತ್ತಾರೆ. ಇದೇ ಹೊತ್ತಿಗೆ ಸತ್ಯವಾನನಿಗೆ ದೇಹಭಾವದ ಎಚ್ಚರ ಉಂಟಾಗುತ್ತದೆ. ಅವರಿಬ್ಬರೂ ಹಿರಿಯರ ಬಳಿಗೆ ಬಂದು ಹರಕೆ ಪಡೆಯುತ್ತಾರೆ. ತಂದೆಗೆ ದೃಷ್ಟಿ ಲಭಿಸಿರುತ್ತದೆ. ರಾಜ್ಯಲಾಭ, ಸಂತತಿ ಲಾಭ ಮೊದಲಾದ ಇತರ ಸುಖಗಳು ಬೆಂಬತ್ತಿ ಬಂದವೆಂಬುದನ್ನು ವಾಚಕರೇ ಊಹಿಸಬೇಕು.

ಹೀಗೆ ಶ್ರೀವೇದವ್ಯಾಸರ ಮೂಲಕಥೆಯ ಪಡಿಯಚ್ಚಿನಲ್ಲಿಯೇ ಶ್ರೀ ಅರವಿಂದರು ಅಮೌಲ್ಯವಾದ ತಮ್ಮದೇ ಆದ ಸತ್ತ್ವವನ್ನು ತುಂಬಿ ಕಾವ್ಯವನ್ನು ಅಮೃತಮಯವಾಗಿ ಮಾಡಿದ್ದಾರೆ. ಈ ಕಾವ್ಯದ ನಾಯಕ-ನಾಯಕಿಯರಿಗೆ **ಜೀವಿಸುವುದೂ ಪ್ರೀತಿಸುವುದೂ ಅನಂತತೆಯ ಲಕ್ಷಣಗಳಾಗಿವೆ.** 'That to feel love and oneness is to live- **ಪ್ರೇಮವನ್ನೂ ಏಕತೆಯನ್ನೂ ಅನುಭವಿಸುವುದೇ ಜೀವನ"** ಎಂಬುದು ಈ ಮಹಾಕಾವ್ಯದ ಅಮರ ಸಂದೇಶವಾಗಿದೆ. ದಿವ್ಯ ಪ್ರೇಮದ ಸ್ಪರ್ಶವಾಗುವವರೆಗೂ ಸತ್ಯವು ಸತ್ತಂತೆಯೇ ಸರಿ ಎಂಬ ಸನಾತನ ಸತ್ಯವನ್ನು ಈ ದಿವ್ಯ ಭವ್ಯ ಸಾಂಕೇತಿಕ ಬೃಹತ್ಕಾವ್ಯದಲ್ಲಿ ಶ್ರೀ ಅರವಿಂದರು ಮನಂಬುಗುವಂತೆ ಒಡಮೂಡಿಸಿದ್ದಾರೆ. ಈ ಕಾವ್ಯದಲ್ಲಿ ಯಾವ ಅಂಶವೂ

ಮನೋಮಯ ಸ್ತರದಿಂದ ಹೊರಬಂದಿಲ್ಲ. ಶಬ್ದ, ತಾಳ, ಛಂದ, ಕಲ್ಪನೆ ಎಲ್ಲವೂ ಉಚ್ಚಪ್ರಜ್ಞೆಯ ಉನ್ನತ ಸ್ತರದಿಂದಲೇ ಇಳಿದು ಬಂದಿದೆ ಎಂಬುದಾಗಿ ದ್ರಷ್ಟಾರ ಕವಿ ಈ ಕುರಿತು ತಮ್ಮ ಶಿಷ್ಯರಿಗೆ ಬರೆದ ಅನೇಕ ಪತ್ರಗಳಲ್ಲಿ ಸ್ವತಃ ಉಲ್ಲೇಖಿಸಿದ್ದಾರೆ. **'ಭಗವತ್ ಸ್ಪರ್ಶವೊಂದಿದ್ದರೆ ಸಕಲವನ್ನೂ ಮಾಡಲು ಸಾಧ್ಯ'**- ಎಂಬ ಮಾತು ಈ ಕಾವ್ಯದ ಬೀಜಮಂತ್ರವಾಗಿದೆ.

vii. ಉಪಸಂಹಾರ :

ಶ್ರೀ ಅರವಿಂದರ ಈ ಭವ್ಯ ಕೃತಿಯನ್ನು ಆಳವಾಗಿ ಅಭ್ಯಾಸ ಮಾಡಿದ ಶ್ರೀ ಅರವಿಂದಾಶ್ರಮದ ಹಿರಿಯ ಸಾಧಕರೂ ಗುರುವಿನ ಏಕಾಂತ ಶಿಷ್ಯರೂ ಆಗಿದ್ದ ದಿವಂಗತ ಶ್ರೀ ಎ. ಬಿ. ಪುರಾಣಿಯವರು ಈ ಮೇರುಕೃತಿಯ ಬಗ್ಗೆ ತಮ್ಮ ಅಮೌಲ್ಯ ಅಭಿಪ್ರಾಯಗಳನ್ನು 'Savitri-An Approach and a Study' ಎಂಬ ತಮ್ಮ ಉದ್ಗ್ರಂಥದಲ್ಲಿ ಪಡಿಮೂಡಿಸಿದ್ದಾರೆ. ಅದರಂತೆ ಅಮೇರಿಕೆಯ ತತ್ತ್ವಶಾಸ್ತ್ರದ ಪ್ರಾಧ್ಯಾಪಕ ಶ್ರೀ ರೇಮಂಡ್ ಫ್ರ್ಯಾಂಕ್ ಎಂಬ ವಿದ್ವನ್ಮಣಿಗಳೂ ಈ ಕೃತಿ ಓದಿ ತಮ್ಮ ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಇಂಥ ಪೌರಸ್ತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರ ಗ್ರಂಥಗಳನ್ನಾಧರಿಸಿ ಜಡಚಣದ ಗುರುಬಂಧು ಶ್ರೀ ಎಂ. ಆರ್. ಜಹಾಗಿರ್ದಾರರು ಶ್ರೀ ಅರವಿಂದಾಶ್ರಮದ ಕನ್ನಡ ತ್ರೈಮಾಸಿಕ "ದೀಪ್ತಿ"ಯಲ್ಲಿ ೧೯೬೪ರಿಂದ ಧಾರಾವಾಹಿಯಾಗಿ **"ಸಾವಿತ್ರಿ"** ಕುರಿತು ಲೇಖನ ಮಾಲೆ ಒದಗಿಸುತ್ತಿದ್ದಾರೆ. ಆ ಲೇಖನ ಮಾಲೆಯಲ್ಲಿ ಕನ್ನಡಿಸ

ಲಾದ ಎರಡು ಅವತರಣಿಕೆಗಳನ್ನು ಕೊನೆಯಲ್ಲಿ ಕೃತಜ್ಞತಾಪೂರ್ವಕವಾಗಿ ಎತ್ತಿ ಹೇಳುತ್ತೇನೆ.

i) ಪೂರ್ವಗೋಳಾರ್ಧದ ಮನೀಷಿ ಅಂದುದು: "ಶ್ರೀ ಅರವಿಂದರಿಗೆ ಅದ್ಭುತ ದರ್ಶನವಾಗಿದೆ. ಅವರು ಕೇಳಿದ. ನೋಡಿದ. ಅನುಭವಿಸಿದ ಅಲೌಕಿಕ ದೃಶ್ಯವು ಸುಸ್ಪಷ್ಟವಿದೆ. ಜೀವನ. ಆತ್ಮ. ಪೃಥ್ವಿ. ಬ್ರಹ್ಮಾಂಡ ಹಾಗೂ ಇವುಗಳ ಹಿಂಬದಿಯಲ್ಲಿರುವ ಪ್ರೇರಕ ಶಕ್ತಿಗಳು ಇದಲ್ಲದೆ ವಿಶ್ವಾತೀತವಾದ ಪರಮೋಚ್ಚ ಚೈತನ್ಯ-ಇವೆಲ್ಲಾ ಸಂಗತಿಗಳು ಅವರ ಅನುಭವದ ವ್ಯಾಪ್ತಿಯಲ್ಲಿ ಸಮಾವಿಷ್ಟವಾಗಿದೆ. ಈ ದಿವ್ಯಾನುಭವವನ್ನು 'ಸಾವಿತ್ರಿ'ಯ ಸಾಂಕೇತಿಕ ಕಥೆಯಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ತತ್ತ್ವಶಾಸ್ತ್ರದ ರೀತಿಯಲ್ಲಿ ವಿವರಿಸಿದ್ದಾರೆ. ಸಮನ್ವಯ-ಯೋಗಸಾಧನೆಯ ಕ್ರಮದಲ್ಲಿ ನಿರೂಪಿಸಿದ್ದಾರೆ. ಅವರ ಅನುಭವದ ವಿಷಯ ಅಸಾಮಾನ್ಯವೂ ಅವರ ಗುರಿ ಮಹೋನ್ನತವೂ ಆಗಿರುವುದರಿಂದ ಕಾವ್ಯಾಭಿವ್ಯಕ್ತಿಯಲ್ಲಿ ಹೊಸ ವಿಧಾನವನ್ನೇ ಅನುಸರಿಸಬೇಕಾಯಿತು. ಮಾನಸಾತೀತ ಸೌಂದರ್ಯೋಪಾಸನೆ (Over-head Aesthetics)ಯೇ ಆ ಹೊಸ ವಿಧಾನವಾಗಿದೆ."

ii) ಪಶ್ಚಿಮ ಗೋಳಾರ್ಧದ ವಿಮರ್ಶಕರು ಅಂದುದು: "ಆಂಗ್ಲಭಾಷೆಯಲ್ಲಿಯೇ ಇದು ಬಹುಶಃ ಅತಿಶ್ರೇಷ್ಠವಾದ ಕಾವ್ಯವಾಗಿದೆ. ಇಂದಿನವರೆಗೆ ರಚಿಸಲಾದ ಮಹಾಕಾವ್ಯಗಳಲ್ಲಿಯೇ ಇದು ಶ್ರೇಷ್ಠವಾದ. ವಿಶಾಲವಾದ. ಸಮಗ್ರ

ವಾದ, ಸುಂದರವಾದ ವಿಶ್ವಕಾವ್ಯವಾಗಿದೆ. ಸೃಷ್ಟಿಪೂರ್ವದ ಮಹಾಶೂನ್ಯದಿಂದ ಮೊದಲು ಮಾಡಿ ದೇದೀಪ್ಯವಾಗಿ ಕಂಗೊಳಿಸುವ ಅತಿಮಾನಸದ ಉನ್ನತ ಶ್ರೇಣಿಯ ವರೆಗೆ, ಈ ಸಾಂಕೇತಿಕ ಮಹಾಕಾವ್ಯದ ವ್ಯಾಪ್ತಿಯಿದೆ.... .... ಮಾನವನ ಮನವು ಭಗವಂತನತ್ತ ಹೊರಳುವಂತೆ ಮಾಡುವ ಬಲಿಷ್ಠವಾದ ಕಲಾಪೂರ್ಣವಾದ ಕೃತಿ 'ಸಾವಿತ್ರಿ' ಯಾಗಿದೆ.

೨. ಕಾವ್ಯದ ಕಥಾವಸ್ತು

[ಶ್ರೀ ಅರವಿಂದರು ಮಹಾಭಾರತದ ಅರಣ್ಯಪರ್ವದಲ್ಲಿ ಹೇಳಲಾದ ಸಾವಿತ್ರಿ-ಸತ್ಯವಾನರ ಉಪಾಖ್ಯಾನವನ್ನು ಆಧರಿಸಿ ತಮ್ಮ 'ಸಾವಿತ್ರಿ' ಮಹಾಕಾವ್ಯವನ್ನು ರಚಿಸಿದ್ದಾರಷ್ಟೆ. ಮೂಲದಲ್ಲಿ ವನವಾಸಿಯಾದ ಧರ್ಮರಾಜನ ದುಃಖವನ್ನು ಹಗುರಗೊಳಿಸಲು ಶ್ರೀ ಮಾರ್ಕಂಡೇಯ ಮುನಿಗಳು ಅನೇಕ ಕಥೆ ಹೇಳಿದ್ದುಂಟು; ಅವುಗಳಲ್ಲಿ ಇದು ಬಹು ಮಾರ್ಮಿಕವಾದುದಾಗಿದೆ. ಸ್ವತಃ ಜನ್ಮತಃ ಅಲ್ಪಾಯುವಾದ ಭಕ್ತ ಮಾರ್ಕಂಡೇಯನು ದೇವ ಕೃಪೆಯಿಂದ ಮೃತ್ಯುವನ್ನು ಗೆದ್ದು ಬ್ರಹ್ಮಜ್ಞಾನಿಯಾಗಿ ಚಿರಂಜೀವಿ ಪಟ್ಟ ಪಡೆದುದುಂಟು; ಅಂಥ ಅಧಿಕಾರ ಪುರುಷನು ಮೃತ್ಯುವನ್ನು ತನ್ನ ಪತಿಗಾಗಿ ಗೆದ್ದ 'ಸಾವಿತ್ರಿ'ಯ ಕಥೆ ಹೇಳಿದ ಸಂನಿವೇಶವೇ ವೈಶಿಷ್ಟ್ಯಪೂರ್ಣವಾಗಿದೆ. ಈ ಪ್ರಕರಣದಲ್ಲಿ ಮೂಲ ಕಥೆಯ ಸಾರಾಂಶವನ್ನು ಶ್ರೀ ಅರವಿಂದರು ಮಾಡಿಕೊಂಡ ತಕ್ಕ ಮಾರ್ಪಾಡುಗಳೊಂದಿಗೆ ಇಲ್ಲಿ ಉಲ್ಲೇಖಿಸಲಾಗುವುದು. ಈ ಪ್ರಕರಣಕ್ಕೆ ಶ್ರೀ ಅರವಿಂದಾಶ್ರಮದ 'ದೀಪ್ತಿ' ಪತ್ರಿಕೆಯ ಸಂಪುಟ ೮ ಸಂಚಿಕೆ ೧ ಮತ್ತು ದಿವಂಗತ ಎ. ಆರ್. ಕೃಷ್ಣಶಾಸ್ತ್ರಿ ವಿರಚಿತ 'ವಚನ ಭಾರತ' ಆಧಾರವಾಗಿವೆ.]

ಅ) ಮೂಲ ಕಥೆ:

ಮಾದ್ರದೇಶದ ಅರಸು ಅಶ್ವಪತಿ ಸದ್ಗುಣಿಯಾಗಿ ಆದರ್ಶ ರಾಜನೆನಿಸಿದ್ದನು. ಆದರೆ ಸಂತಾನವಿಲ್ಲದ ಕೊರಗು ಅವನ

ಮನಸ್ಸನ್ನು ಕೊರೆಯುತ್ತಿತ್ತು. ೧೮ ವರ್ಷ ಅವನು ಕಠೋರ ವ್ರತವನ್ನು ಆಚರಿಸಿದ್ದನು. ಪ್ರತಿ ಆರು ದಿನಗಳಿಗೊಮ್ಮೆ ಉಪವಾಸದಿಂದಿದ್ದು ವೇದೋಕ್ತವಾದ ಸಾವಿತ್ರಿ ಅಧಿದೇವತೆಯ ಪ್ರೀತ್ಯರ್ಥವಾಗಿ ಒಂದು ಲಕ್ಷ ಯಜ್ಞ ಮಾಡಿದನು. ಆ ದೇವತೆ ಪ್ರಸನ್ನಳಾದಳು. ಯಾಗದ ಅಗ್ನಿಕುಂಡದ ಜ್ವಾಲೆಗಳಿಂದ ಮೇಲೆದ್ದು ರಾಜನಿಗೆ ದರ್ಶನವಿತ್ತಳು. ಪ್ರಸಾದ ನೀಡಿ ತೇಜಸ್ವಿನಿಯಾದ ಕನ್ಯೆಯೊಬ್ಬಳು ಜನಿಸಿಬರುವಳೆಂದೂ ಬ್ರಹ್ಮದೇವನಲ್ಲಿ ಈ ಬಗ್ಗೆ ತಾನು ಮಾತನಾಡಿರುವುದಾಗಿಯೂ ಹೇಳಿ, ಅನುಗ್ರಹಿಸಿದಳು.

ಕೆಲ ಕಾಲ ಗತಿಸಲು, ಅಶ್ವಪತಿಯ ಹಿರಿಯ ರಾಣಿ ಮಾಳವೀದೇವಿಯ ಹೊಟ್ಟೆಯಲ್ಲಿ ಹೆಣ್ಣುಮಗುವೊಂದು ಜನಿಸಿತು. ಸಾವಿತ್ರಿದೇವತೆಯ ವರದ ಸಂಕೇತನೆಂದು ಮಗುವಿಗೂ 'ಸಾವಿತ್ರಿ' ಎಂದೇ ನಾಮಕರಣವಾಯಿತು. ಬಾಲಲೀಲೆಗಳು ಅರಮನೆಯಲ್ಲಿ ಹರುಷದ ವಾತಾವರಣವನ್ನು ಉಂಟುಮಾಡಿದವು. ಸಾವಿತ್ರಿ ಬೆಳೆದು ದೊಡ್ಡವಳಾಗಿ ಅಪ್ರತಿಮ ಸುಂದರಿಯೆಂದು ದಶದಿಕ್ಕುಗಳಲ್ಲಿ ಹೆಸರುಗಳಿಸಿದಳು. ಸುವರ್ಣ ಕಾಂತಿಯಿಂದ ಕೂಡಿದ ಶರೀರದಿಂದ ದೇವತಾಕನ್ಯೆಯಂತೆ ಒಪ್ಪಿದಳು. ಅವಳ ಪ್ರಖರ ದಿವ್ಯ ತೇಜಕ್ಕೆ ರಾಜಕುವರರ ಕಣ್ಣು ಕುಕ್ಕಿದವು. ಅವಳನ್ನು ವರಿಸಲು ತರುಣರೆಲ್ಲ ಹಿಂಜರಿದರು. ತಂದೆಗೆ ಚಿಂತೆಯುಂಟಾಯಿತು. 'ನಿನ್ನ ಪತಿಯನ್ನು ನೀನೇ ಶೋಧಿಸು' ಎಂದು ಮಗಳಿಗೆ ಹೇಳಿ ದೇಶಸಂಚಾರದ ವ್ಯವಸ್ಥೆ ಮಾಡಿದನು. ವೃದ್ಧ ಮಂತ್ರಿಯೊಬ್ಬನನ್ನು ಜೊತೆಗೆ

ಕಳಿಸಿದನು. ಎರಡು ವರ್ಷ ಆಕೆ ಸುವರ್ಣರಥದಲ್ಲಿ ಕುಳಿತು ದೇಶವನ್ನೆಲ್ಲಾ ಸಂಚರಿಸಿ ಅನೇಕ ರಮ್ಯಾಶ್ರಮ ಸುತ್ತಿ ಸ್ವಸ್ಥಾನಕ್ಕೆ ಮರಳಿದಳು. ಆಗ ದೇವರ್ಷಿ ನಾರದರು. ಆಸ್ಥಾನದಲ್ಲಿ ಸಾವಿತ್ರಿಯ ತಾಯಿ ತಂದೆಗಳೊಡನೆ ಆಸೀನರಾಗಿದ್ದರು.

'ರಾಜಕುವರಿಗೆ ಮದುವೆಯಾಗಿಲ್ಲವೇ?' ಎಂದು ನಾರದ ಋಷಿ ಕೇಳಿದರು. ಆಗ ಅಶ್ವಪತಿ ಸಾವಿತ್ರಿಗೆ ತನ್ನ ಸಂಚಾರದ ಬಗ್ಗೆ ಮಾತನಾಡಲು ಹೇಳಿದನು. ಸಾವಿತ್ರಿ ವರದಿ ಒಪ್ಪಿಸಿದಳು. ಕೊನೆಯಲ್ಲಿ ಭೆಟ್ಟಿಯಿತ್ತ ಸಾಲ್ವದೇಶದ ಅರಸು ದ್ಯುಮತ್ಸೇನನನ್ನು ಕುರಿತು ಇಂತು ಹೇಳಿದಳು: "ತಂದೆಯೇ. ಈ ಸಾಲ್ವರಾಜ ಅನೇಕ ಕಷ್ಟಗಳಿಗೆ ಒಳಗಾದನು. ಮುಪ್ಪಿನಲ್ಲಿ ಅಂಧನಾದನು. ನೆರೆಯ ಅರಸರು ಮುಗಿಬಂದು ರಾಜ್ಯವನ್ನು ಆಕ್ರಮಿಸಿದರು. ಕೊನೆಯಲ್ಲಿ ಸತಿಸುತರೊಡನೆ ವನ ಸೇರಿದನು. ಅವನ ಸುತನೇ ಸತ್ಯವಾನ. ಅರಮನೆಯಲ್ಲಿ ಜನಿಸಿ ತಪೋವನದಲ್ಲಿ ಬೆಳೆದ ಈ ಸತ್ಯವಂತ ಸುಂದರ ತರುಣನೇ ನನಗೆ ತಕ್ಕ ವರನು. ಅವನನ್ನೇ ಆರಿಸಿದ್ದೇನೆ' ಎಂದು ಅರುಹಿ ಗುರುಹಿರಿಯರಿಗೆ ನಮಿಸುತ್ತಾಳೆ. ನಾರದರು 'ಪ್ರಮಾದವಾಯಿತು' ಎಂಬಂತೆ ಗಾಬರಿಯಾದರು. "ಸತ್ಯವಾನ ಇಂದ್ರನಂತೆ ಶೂರ, ಸೂರ್ಯನಂತೆ ತೇಜಸ್ವಿ, ಬೃಹಸ್ಪತಿಯಂತೆ ಬುದ್ಧಿವಂತ, ಪೃಥ್ವಿಯಂತೆ ಶಾಂತ, ದಾನದಲ್ಲಿ ರಂತಿದೇವ, ರೂಪದಲ್ಲಿ ಅಶ್ವಿನೀದೇವತೆ, ಲಕ್ಷಣದಲ್ಲಿ ಚಂದ್ರ, ಮೇಲಾಗಿ ಉದಾರ, ವಿನಯಶಾಲಿ, ಸಂಯಮಿ. ಅವನಿಗೆ 'ಚಿತ್ರಾಶ್ವ'ನೆಂದೂ ಹೆಸರಿದೆ" ಎಂದು ಹೇಳುತ್ತಾ ವರನ ಗುಣಗಳನ್ನು ಕೊಂಡಾಡಿದರು.

“ಆದರೆ....” ಎಂದು ಮೌನವಾದರು. ರಾಜನು ಬಲವಂತಪಡಿಸಿ ವರನ ದೋಷ ಹೇಳಲು ಬಿನ್ನವಿಸಿದನು. “ಒಂದೇ ಒಂದು ದೋಷವಿದೆ; ಅವನು ಅಲ್ಪಾಯುಷಿ. ಇಂದಿಗೆ ಸರಿಯಾಗಿ ಒಂದು ವರ್ಷಕ್ಕೆ ಅವನಿಗೆ ಮೃತ್ಯುಯೋಗವಿದೆ” ಎಂದು ನಾರದರೆಂದರು. ತಂದೆ ಬೇರೊಬ್ಬನನ್ನು ಆರಿಸಲು ಸಾವಿತ್ರಿಗೆ ಸೂಚಿಸಿದನು. ಸಾವಿತ್ರಿ ಪಡಿನುಡಿದಳು: “ಪೂಜ್ಯ ಪಿತನೇ, ಕೆಲವು ಸಂಗತಿಗಳನ್ನು ಒಮ್ಮೆ ಮಾತ್ರ ನಿರ್ಣಯಿಸಲು ಸಾಧ್ಯ. ಏನೇ ಇರಲಿ. ಸತ್ಯವಾನನನ್ನು ಒಮ್ಮೆ ವರಿಸಿದ್ದೇನೆ. ಅವನನ್ನೇ ವರಿಸುವೆ.” ಎಂದು ತನ್ನ ದೃಢನಿರ್ಧಾರ ಹೇಳಿದಳು. ‘ತಥಾಸ್ತು’ ಎಂದು ದೇವರ್ಷಿಗಳು ಹರಸಿ ಆಕೆಯ ಇಚ್ಛೆ ನೆರವೇರಿಸಲು ಅರಸನಿಗೆ ಸಲಹೆಯಿತ್ತರು. ಮದುವೆಯ ಸಿದ್ಧತೆ ನಡೆಯಿತು.

ಬಳಿಕ ಅಶ್ವಪತಿ ಪರಿವಾರದೊಂದಿಗೆ ದ್ಯುಮತ್ಸೇನನ ಆಶ್ರಮಕ್ಕೆ ಹೋಗಿ, ಮದುವೆಯ ಸಮಾರಂಭ ಮುಗಿಸಿ ರಾಜಧಾನಿಗೆ ಮರಳಿದನು. ಸಾವಿತ್ರಿ ಆಶ್ರಮದ ಶುದ್ಧ ಸರಳ ನಿರಾಡಂಬರದ ಜೀವನವನ್ನು ವ್ರತವಾಗಿ ಸ್ವೀಕರಿಸಿದಳು. ಅತ್ತೆಮಾವಂದಿರ ಶುಶ್ರೂಷೆಗೈದು ಮೆಚ್ಚಿಕೆಯ ಸೊಸೆಯಾದಳು. ಪ್ರೀತಿ–ಭಕ್ತಿಗಳಿಂದ ಪತಿಯ ವಿಶ್ವಾಸ ಗಳಿಸಿದಳು. ನವದಂಪತಿಗಳು ಹಿರಿಹಿರಿ ಹಿಗ್ಗಿದರು. ಕಾಲಕಳೆದಂತೆ ನಾರದರ ಭಯಂಕರ ಭವಿಷ್ಯ ನೆನಪಾಗುತ್ತ ಸಾವಿತ್ರಿಯ ಮನಶ್ಶಾಂತಿ ಕದಡಿತು. ಯಾರಿಗೂ ಹೇಳಲಾರಳು. ಒಳಗೊಳಗೇ ಕೊರಗತೊಡಗಿದಳು.

ಆ ಕ್ರೂರ ಕರಾಳ ದಿನ ಸಮೀಪಿಸಿತು. ಇನ್ನು ನಾಲ್ಕು ದಿನ ಮಾತ್ರ ಉಳಿದುದು ಸ್ಮರಣೆಗೆ ಬಂತು. ಕಠೋರವಾದ 'ತ್ರಿರಾತ್ರವ್ರತ'ವನ್ನು ಕೈಕೊಂಡಳು. ಮೂರು ದಿನ ಅಹೋರಾತ್ರ ನಿರಾಹಾರಿಯಾಗಿ ನಿಂತುಕೊಂಡೇ ಪ್ರಾರ್ಥನೆ ಸಲ್ಲಿಸಿದಳು. ನಾಲ್ಕನೇ ದಿನ ಬೆಳಿಗ್ಗೆ ಅಗ್ನಿಗೆ ಆಹುತಿ ನೀಡಿ ಹಿರಿಯರಿಗೆಲ್ಲಾ ನಮಿಸಿದಳು. 'ದೀರ್ಘ ಸುಮಂಗಲಿಯಾಗೆ'ಂದು ಅವರೆಲ್ಲಾ ಹರಸಿದರು. ಆಹಾರ ಸ್ವೀಕರಿಸಲು ಅತ್ತೆಮಾವ ಹೇಳಿದರು. 'ಸೂರ್ಯಾಸ್ತಕ್ಕೆ ಸ್ವೀಕರಿಸುತ್ತೇನೆ.' ಎಂದು ನುಡಿದಳು. ಇಷ್ಟರಲ್ಲಿ ಸತ್ಯವಾನನು ಕೊಡಲಿಯೊಂದಿಗೆ ಕಟ್ಟಿಗೆ ತರಲು ಹೊರಡಲು ಅಣಿಯಾಗಿರುತ್ತಾನೆ. ಸುಂದರ ವನವನ್ನು ತಾನಿನ್ನೂ ನೋಡಿಲ್ಲವಾದ್ದರಿಂದ ಪತಿಯ ಜೊತೆಗೆ ಹೋಗಲು ಹಿರಿಯರ ಅಪ್ಪಣೆ ಕೇಳುತ್ತಾಳೆ. ಅದನ್ನು ಪಡೆದು ಅವನನ್ನು ಹಿಂಬಾಲಿಸುತ್ತಾಳೆ. ಪ್ರೀತಿಯ ಮುಗ್ಧ ಪತಿ ವನಶೋಭೆಯನ್ನು ವರ್ಣಿಸುವಾಗ ಲಕ್ಷ್ಯಗೊಟ್ಟು ಅವನ ಸವಿನುಡಿ ಆಲಿಸುತ್ತಾಳೆ. ಒಳಗೆ ಭಯ. ಆದರೂ ಸ್ಥಿರ ಸಮಾಧಾನದಿಂದ ಆ ವಿಷಗಳಿಗೆಗಾಗಿ ಕಾಯತೊಡಗಿದಳು.

ಸತ್ಯವಾನನು ಮೊದಲು ಫಲಗಳನ್ನು ಸಂಗ್ರಹಿಸಿ ಬಳಿಕ ಕಟ್ಟಿಗೆ ಕಡಿಯತೊಡಗುತ್ತಾನೆ. ಆಗ ಬಹಳಷ್ಟು ಬೆವೆಯುತ್ತಾನೆ. ದಣಿವು, ತಲೆನೋವುಗಳಿಂದ ಬಳಲುತ್ತಾನೆ. ವಿಶ್ರಾಂತಿಯನ್ನು ಬಯಸಿ, ಸತಿಯ ತೊಡೆಯ ಮೇಲೆ ತಲೆ ಇರಿಸಿ ಒರಗುತ್ತಾನೆ. ಆ ವಿಷಗಳಿಗೆ ಬಂತೆಂದು ಸಾವಿತ್ರಿ ಅರಿಯುತ್ತಾಳೆ. ಇಷ್ಟರಲ್ಲಿ ಕಿರೀಟ-ಪಾಶಧಾರಿಯಾದ ಯಮ

ಧರ್ಮನ ಭವ್ಯ ಭಯಂಕರ ರೂಪ ಎದುರಿಗೆ ಕಾಣುತ್ತದೆ. ಪತಿಯ ತಲೆಯನ್ನು ಮೆಲ್ಲಗೆ ನೆಲದ ಮೇಲಿರಿಸಿ ಆ ಭವ್ಯ ಮೂರ್ತಿಗೆ ನಮಸ್ಕರಿಸಿ 'ನೀನಾರು ಪೂಜ್ಯನೆ? ಏಕೆ ಇಲ್ಲಿ'? ಎಂದು ಕೇಳುತ್ತಾಳೆ. ಯಮನು ತಾನು ಬಂದ ಕಾರ್ಯೋದ್ದೇಶ, ಸತ್ಪುರುಷರ ಬಳಿಗೆ ದೂತರನ್ನು ಕಳಿಸದೇ ತಾನೇ ಬರುವುದು, ಬಂದುದು ಎಲ್ಲಾ ಹೇಳುತ್ತಾನೆ. ಸತ್ಯವಾನನ ಶರೀರದಿಂದ ಹೆಬ್ಬೆರಳಿನ ಗಾತ್ರದ ಪ್ರಾಣವನ್ನು ಸೆಳೆಯುತ್ತಾನೆ: ಆ ಶರೀರ ಕಳೆಗುಂದುತ್ತದೆ. ದಕ್ಷಿಣದಿಕ್ಕಿಗೆ ಅವನ ಪ್ರಯಾಣ ಆರಂಭ. ದುಃಖಭರಿತ ಹೃದಯದಿಂದ ಸಾವಿತ್ರಿ ಅವನನ್ನು ಹಿಂಬಾಲಿಸುತ್ತಾಳೆ. ಅವಳು ಪತಿವ್ರತೆ; ಮಹಿಮಾವಂತೆ; ವ್ರತನಿಯಮಾದಿಗಳನ್ನು ನಡಸಿ ಸಿದ್ಧಿಪಡೆದವಳು. ಆದ್ದರಿಂದ ಯಮಧರ್ಮರಾಯನನ್ನು ಹಿಂಬಾಲಿಸುವುದು ಅವಳಿಗೆ ಸಾಧ್ಯವಾಯಿತು.

ಇನ್ನುಮೇಲೆ ಯಮಧರ್ಮರಾಯ ಹಾಗು ಸಾವಿತ್ರಿ ಇವರ ನಡುವೆ ಸಂಭಾಷಣೆ ನಡೆಯತೊಡಗುತ್ತದೆ. ಆಕೆಯ ಬುದ್ಧಿವಂತಿಕೆ. ಮನೋಧೈರ್ಯ. ವಾಕ್ಚಾತುರ್ಯಗಳಿಗೆ ಯಮರಾಯ ಮೆಚ್ಚಿ ಒಂದರ ತರುವಾಯ ಒಂದರಂತೆ ೪ ವರ ನೀಡುತ್ತಾನೆ. i) ತನ್ನ ಮಾವನಿಗೆ ದೃಷ್ಟಿ ಲಾಭ ii) ಅದೇ ಮಾವನಿಗೆ ರಾಜ್ಯಲಾಭ iii) ತನ್ನ ತಂದೆಗೆ ಪುತ್ರಶತಲಾಭ iv) ತನಗೂ ಸತ್ಯವಾನನಿಗೂ ಪುತ್ರಶತಲಾಭ. ಇನ್ನು ಹೊರಡೆಂದು ಸಾವಿತ್ರಿಗೆ ಯಮ ಹೇಳುತ್ತಾನೆ. 'ಸತ್ಯವಾನನಿಲ್ಲದೆ ೪ನೇ ವರ ಹೇಗೆ ಸಾಧ್ಯ ?' ಎಂದು ಆಕೆ ಕೇಳುತ್ತಾಳೆ. ಆಗ

ಸಾವಿತ್ರಿಯ ಬಗ್ಗೆ ಭಕ್ತಿ ಹುಟ್ಟಿ ಅನಿವಾರ್ಯವಾಗಿ ಯಮನು ತನ್ನ ಪಾಶದಿಂದ ಸತ್ಯವಾನನನ್ನು ಮುಕ್ತಮಾಡುತ್ತಾನೆ. ಇಷ್ಟೇ ಅಲ್ಲ ಈ ದಿವ್ಯ ದಂಪತಿಗೆ ೪೦೦ ವರ್ಷ ಆಯುಷ್ಯವೆಂದು ಜನೇ ವರ ಕೊಡುತ್ತಾನೆ. ಸಾವಿತ್ರಿ ಮರಳಿ ಬಂದು ಪತಿಯ ತಲೆಯನ್ನು ತನ್ನ ತೊಡೆಯ ಮೇಲೆ ಮತ್ತೆ ಇಟ್ಟುಕೊಳ್ಳುತ್ತಾಳೆ. ಆತ ದೀರ್ಘನಿದ್ರೆಯಿಂದ ಎಚ್ಚತ್ತಂತೆ ಕಣ್ಣು ಉಜ್ಜಿಕೊಳ್ಳುತ್ತ ಏಳುತ್ತಾನೆ. 'ಏನು ಸಮಾಚಾರ?' ಎನ್ನುತ್ತಾನೆ. 'ಕತ್ತಲೆಯಾದ್ದರಿಂದ ಆಶ್ರಮಕ್ಕೆ ಹೋಗೋಣ, ಮರುದಿನ ಎಲ್ಲಾ ಹೇಳುವೆ' ಎಂದು ಸಂತೈಸುತ್ತಾಳೆ. ತಾಯ್ತಂದೆಗಳ ಅಗಲಿಕೆಯಿಂದ ಬಳಲುತ್ತಿರುವ ಪತಿಯೊಡನೆ ಆಶ್ರಮಕ್ಕೆ ಮರಳುತ್ತಾಳೆ. ಸಂಚಯಿಸಿದ ಫಲಗಳ ಬುಟ್ಟಿಯನ್ನು ಮರುದಿನ ತಂದರಾಯ್ತೆಂದು ಮರದ ಒಂದು ಕೊಂಬೆಗೆ ತಗಲುಹಾಕಿ ಎಡ ಹೆಗಲಮೇಲೆ ಪತಿಯ ಕೊಡಲಿಯನ್ನು ತಾನೇ ಹೊತ್ತುಕೊಂಡು ಬಲಗೈಯಿಂದ ಆತನನ್ನು ಹಿಡಿದುಕೊಂಡು ಮೆಲ್ಲ ಮೆಲ್ಲಗೆ ಹೆಜ್ಜೆಯಿಡುತ್ತ ಆಶ್ರಮ ತಲ್ಪಿದಳು.

ಇತ್ತ ಮಾವ ದ್ಯುಮತ್ಸೇನನಿಗೆ ಕಣ್ಣೋಟ ಲಭಿಸುತ್ತದೆ. ಮಗ ಸೊಸೆಗಾಗಿ ಕಾತರರಾಗಿ ಕಾಯುತ್ತಿರುವ ಅತ್ತೆಮಾವರಿಗೂ ಆಶ್ರಮವಾಸಿ ಋಷ್ಯರಿಗೂ ಅವರು ಬಂದು ನಮಿಸುತ್ತಾರೆ. ಸೊಸೆ ನಡೆದ ವೃತ್ತಾಂತ ಅರುಹುತ್ತಾಳೆ. ಮರುದಿನವೇ ರಾಜ್ಯ ಲಾಭದ ವಾರ್ತೆ ಬಂದು ಎಲ್ಲರಿಗೂ ಹರುಷವೋ ಹರುಷ. ಒಳ್ಳೇ ವೈಭವದಿಂದ ದ್ಯುಮತ್ಸೇನ ಮಹಾರಾಜನು ತನ್ನ

ರಾಜಧಾನಿಗೆ ಮರಳುತ್ತಾನೆ. ಸತ್ಯವಾನನು ಯುವರಾಜನಾಗುತ್ತಾನೆ. ಕಾಲಕ್ರಮದಲ್ಲಿ ೩ನೇ, ೪ ನೇ ಮತ್ತು ೫ನೆಯ ವರಗಳೂ ಫಲಿಸುತ್ತವೆ. ಆಕೆಯ ಮಕ್ಕಳು 'ಸಾವಿತ್ರ'ರೆಂದೂ ತಮ್ಮಂದಿರು 'ಮಾಳವ್ಯ'ರೆಂದೂ ಹೆಸರಾಗುತ್ತಾರೆ. ಇಂತಿದು ಮಾರ್ಕಂಡೇಯ ಮುನಿಗಳು ಧರ್ಮರಾಜಾದಿ ಪಾಂಡವರಿಗೆ ಹೇಳಿದ ಕಥೆಯ ಸಾರ.

ಆ) ಶ್ರೀ ಅರವಿಂದರು ಮಾಡಿಕೊಂಡ ಮಾರ್ಪಾಡುಗಳು:

ಮೂಲ ಕಥೆಯ ಗತಿ ಈ ಮಹಾಕಾವ್ಯದಲ್ಲೂ ಅದೇ ಚೌಕಟ್ಟಿನಲ್ಲಿ ಮುನ್ನಡೆಯುತ್ತದೆ. ಹೆಚ್ಚು ಕಡಿಮೆಯ ವಿವರಗಳು ಕೆಳಗಿನಂತಿವೆ:

i) ಅಶ್ವಪತಿಯ ೧೮ ವರುಷಗಳ ದೀರ್ಘ ತಪಸ್ಸಿನ ವರದಿ ಮೂಲದಲ್ಲಿ ಹತ್ತೇ ಸಾಲುಗಳಲ್ಲಿ ಮುಗಿದರೆ ಅದಕ್ಕಾಗಿ ಇಲ್ಲಿ ೧೧,೮೦೦ ಸಾಲುಗಳು ಮೀಸಲಾಗಿವೆ. ಮೊದಲಿನ ಮೂರು ಅಧ್ಯಾಯಗಳಲ್ಲಿ ಇರುವ ೨೨ ಸರ್ಗಗಳಲ್ಲಿ ಈ ತಪಸ್ಸಿನ ಹೂರಣವು ಉದ್ದೋಉದ್ದವಾಗಿ ತುಂಬಲ್ಪಟ್ಟಿದೆ. ಮಾನವನ ಮಟ್ಟದಿಂದ ಭಗವಂತನ ದಿವ್ಯ ಊರ್ಧ್ವಲೋಕದೆಡೆಗೆ ಸಾಗುವ ಆ ಕಠಿಣ ಮಾರ್ಗದ ಎಲ್ಲ ಹಂತಗಳನ್ನೂ ಶ್ರೀ ಅರವಿಂದರು ವರ್ಣಿಸುತ್ತಾರೆ. ನಿಮ್ನ ಮತ್ತು ಉನ್ನತ ನಾನಾ ರಹಸ್ಯ ಲೋಕಗಳ ಜೀವಿಗಳನ್ನು ಅಶ್ವಪತಿ ಸಂದರ್ಶಿಸುತ್ತಾನೆ. ಆಯಾ ಲೋಕಗಳ ಗುಣಧರ್ಮ ಮತ್ತು ಸತ್ತ್ವಗಳನ್ನೂ ಅಲ್ಲಲ್ಲಿಯ ಬಾಳಿನ ನಿಯಮಗಳನ್ನೂ ಕವಿ ಉಲ್ಲೇಖಿಸುತ್ತಾರೆ. ಈ ಎಲ್ಲಾ ಲೋಕ ದಾಟಿ ವಿಶ್ವಮಾತೆಯ ರಹಸ್ಯ

ನೂಯ ಸಾಂತ್ರ್ಯಾಲಯವನ್ನೇ ಅಶ್ವಪತಿ ಪ್ರವೇಶಿಸುತ್ತಾನೆ. ಅಲ್ಲಿ ಆ ಮಾತೆಯ ಅದ್ಭುತ ದರ್ಶನವಾಗುತ್ತದೆ:

"One shall descend and break the iron law" ಎಂಬ ವರ ದೊರೆಯುತ್ತದೆ. ಆ ಓರ್ವಳ ಅವತರಣ ಮತ್ತು ಆಕೆ ಕಠೋರ ವಿಧಿಲಿಖಿತ ಶಾಸನವನ್ನು ಮುರಿಯುವುದರ ಆಶ್ವಾಸನ ಅವನಿಗೆ ದೊರೆಯುತ್ತದೆ. ಒಟ್ಟಿನಲ್ಲಿ ಶ್ರೀ ಅರವಿಂದರ ಜೀವನದಲ್ಲಿಯ ಸಾಧನೆ ಸಿದ್ಧಿಗಳ ಆಂತರಿಕ ಅನುಭವದ ಚಿತ್ರ ಅಶ್ವಪತಿಯ ಯೋಗದಲ್ಲಿ ಪಡಿಮೂಡಿದೆ.

ii) ಸಾವಿತ್ರಿ ಕೈಕೊಂಡ ಪತಿಯ ಶೋಧದ ಬಗ್ಗೆ ಮಹಾಭಾರತದಲ್ಲಿ ಯಾವ ವಿವರವೂ ಲಭ್ಯವಿಲ್ಲ. ಆದರೆ ಇಲ್ಲಿ ಆಕೆಯ ಸಂಚಾರ, ವಿವಿಧ ತಪಸ್ವಿಗಳ ತಪೋವನಗಳ ವರ್ಣನೆ, ಕೊನೆಗೆ ಸತ್ಯವಾನನ ಪ್ರೇಮಮಯ ಸಂದರ್ಶನ ಈ ಅಂಶಗಳು ಈ ಮಹಾಕಾವ್ಯದಲ್ಲಿ ಅತ್ಯಂತ ಕಮನೀಯ ಮಾಧುರ್ಯ ಮತ್ತು ಸೌಂದರ್ಯಗಳಿಂದ ಸಮೃದ್ಧವಾಗಿವೆ. ಮತ್ತು ಅವು ಮಹೋನ್ನತ ಮಟ್ಟದಲ್ಲಿ ಚಿತ್ರಿತವಾಗಿವೆ.

iii) ಸಾವಿತ್ರಿಯು 'ತ್ರಿರಾತ್ರವ್ರತ'ವು ಮೂಲದಲ್ಲಿ ಎಂಟು ಸಾಲುಗಳಲ್ಲಿ ಮುಗಿದುದನ್ನೇ ಇಲ್ಲಿ ೩೦೦೦ ಸಾಲುಗಳಲ್ಲಿ ವಿಸ್ತಾರಗೊಳಿಸಿದ್ದಾರೆ. ಮರುದಿನದ ಮೃತ್ಯುವನ್ನು ಎದುರಿಸಲು ಸಾವಿತ್ರಿ 'ಆತ್ಮಶೋಧ' ನಡೆಸುತ್ತಾಳೆ. ಮಾನವನ ಆ ಆತ್ಮಶೋಧದ ಅದ್ಭುತ ರಮ್ಯ ಕತೆಯನ್ನು ಶ್ರೀ ಅರವಿಂದರು ಒದಗಿಸಿದ್ದಾರೆ. ಆಕೆ ತನ್ನ ಹೃದಯದ ಅಂತರಾಳದ ಆಳದಲ್ಲಿ ಹೊಕ್ಕು ಅಲ್ಲಿನ ತ್ರಿವಿಧ ಶಕ್ತಿಗಳ ದರ್ಶನ

ಪಡೆಯುತ್ತಾಳೆ. ಸಪ್ತ ದುಃಖಗಳ ಮಾತೆ (Mother of seven sorrows), ಬಲ-ಸಾಮರ್ಥ್ಯಗಳ ಮಾತೆ (The Mother of might) ಮತ್ತು ಜ್ಞಾನಮಾತೆ (The Mother of knowledge) ಈ ಮೂರು ಶಕ್ತಿಮಾತೆಯರು ಸಾವಿತ್ರಿಯನ್ನು ಹರಸಿ ಅವಳಿಗೆ ಆತ್ಮದ ಶೋಧನ (Finding of the soul) ಕ್ಕಾಗಿ ನೆರವಾಗುತ್ತಾರೆ. ಆಗ ಆಕೆ ವ್ಯಕ್ತಿ-ವಿಶ್ವ-ವಿಶ್ವಾತೀತಗಳ ಸಾಕ್ಷಾತ್ಕಾರ ಪಡೆಯುತ್ತಾಳೆ. ಇಂಥ ದಿವ್ಯ ಶಕ್ತಿಯಿಂದ ಸನ್ನದ್ಧಳಾಗಿ ಭಾವೀ ಕಠೋರ ವಿಧಿಯೊಡನೆ ಹೋರಾಡಲು ಆಕೆ ಸಿದ್ಧಳಾಗುತ್ತಾಳೆ. ಇದುವೇ ಈ ಕಾವ್ಯದ ಹೊಸ ದ್ರವ್ಯ. ಇಲ್ಲಿ ಶ್ರೀ ಅರವಿಂದರ ಪೂರ್ಣಯೋಗದ ಸಹಭಾಗಿಗಳಾದ ಶ್ರೀ ಮಾತೆ (The Mother) ಯವರ ಜೀವನದ ಆಂತರ್ಯದ ಅನುಭವದ ಚಿತ್ರವನ್ನು ನಾವು ಕಾಣುತ್ತೇವೆ.

iv) ಮೂಲದಲ್ಲಿ ನಾರದರ ಸಂಭಾಷಣೆ ವಿವರಗಳಿಂದ ಕೂಡಿಲ್ಲ. ಇಲ್ಲಿಯೇ ವಿಧಿಲಿಖಿತ ಮತ್ತು ದೈವೀಕೃಪೆ ಇವುಗಳ ಬಗ್ಗೆ ಸುದೀರ್ಘ ಪ್ರವಚನವಿದೆ. ಮೂಲಭೂತ ಸಮಸ್ಯೆ (The Issue) ಗೆ ಪರಿಹಾರವನ್ನು ಕವಿ ದೇವರ್ಷಿಯ ಮುಖದಿಂದ ಒಡನುಡಿಸಿದ್ದಾರೆ.

v) ಮದ್ರದೇಶದ ಮಹಾರಾಣಿಯೂ ಸಾಲ್ವದೇಶದ ಮಹಾರಾಣಿಯೂ ಮೂಲಭಾರತದಲ್ಲಿ ಮಾತನಾಡುವ ಸಂದರ್ಭಗಳಿಲ್ಲ. ಇಲ್ಲಿ ಅಂಥ ಸಂದರ್ಭಗಳನ್ನು ಕಲ್ಪಿಸಿ ತಾಯಂದಿರ ಕರುಳು ಹೇಗೆ ಮಿಡಿಯುತ್ತಿವೆಯೆಂಬುದನ್ನು ಕವಿ ಚಿತ್ರಿಸುತ್ತಾರೆ. ಇಲ್ಲಿ ಮಾನವೀಯ ಹೃದಯಗಳ ಮೃದು

ಸ್ಪರ್ಶ-ಸ್ಪಂದನಗಳ ಅನುಭವವನ್ನು ಸಹಜ ರೀತಿಯಲ್ಲಿ ಶ್ರೀ ಅರವಿಂದರು ಬಣ್ಣಿಸುತ್ತಾರೆ.

vi) ಸಾವಿತ್ರಿ–ಮೃತ್ಯು ಇವರ ನಡುವಿನ ಸಂಭಾಷಣೆಗಳು ಇಲ್ಲಿ ಅತಿ ಸೂಕ್ಷ್ಮವಲಯವನ್ನು ಮುಟ್ಟಿವೆ. ಮತ್ತು ಸಾಕಷ್ಟು ಸುದೀರ್ಘವಾದುವೂ ಇವೆ. ಮರ್ತ್ಯತೆ ಮತ್ತು ಅಮೃತತ್ವಗಳ ನಡುವಿನ ಭವ್ಯ ಸಂವಾದ-ಸಂಭಾಷಣೆಗಳೇ ಇಲ್ಲಿ ಹೆಣೆಯಲ್ಪಟ್ಟಿವೆ. ಈ ಕಾವ್ಯದಲ್ಲಿ ಮೂಲದಲ್ಲಿ ಇರುವಂತೆ ಯಮರಾಜನಿಂದ ವರ ಪಡೆಯುವ ಸಂದರ್ಭವಿಲ್ಲ. ಸಾವಿತ್ರಿಯ ದಿವ್ಯರೂಪ ಕಂಡು ಮೃತ್ಯು ಕರಗಿಹೋಗುತ್ತಾನೆ.

vii) ಮೂಲ ಮಹಾಭಾರತದಲ್ಲಿ ಸಾವಿತ್ರಿ ಯಮರಾಜನಿಂದ ಪತಿಯ ಜೀವವನ್ನು ಪಡೆದು ಸತ್ಯವಾನನೊಡನೆ ಮರಳಿ ಅರಣ್ಯಕ್ಕೆ ಬರುತ್ತಾಳೆ. ಇಲ್ಲಿಯಾದರೋ ಮೃತ್ಯುವು ತತ್ತರಿಸಿ ಕರಗಿಹೋದಬಳಿಕ ಸೂಕ್ಷ್ಮ ಶರೀರಧಾರಿಗಳಾಗಿ ತೇಜೋಮಯ ದಂಪತಿ ಕೆಲಕಾಲ ಪರಾತ್ಪರ ಪುರುಷನ ಸತ್ಯಲೋಕದಲ್ಲಿ ತಂಗುತ್ತಾರೆ. ಅಲ್ಲಿಯ ದಿವ್ಯಜೀವನವನ್ನು ಅವರಿಬ್ಬರೂ ಸೂಕ್ಷ್ಮವಾಗಿ ನಿರೀಕ್ಷಿಸುತ್ತಾರೆ. ಹಿರಣ್ಮಯ ಪುರುಷೋತ್ತಮನು ಸಾವಿತ್ರಿಗೆ ಪೃಥ್ವಿಯ ಗೊಡವೆ ತೊರೆದು ತನ್ನಲ್ಲಿಯೇ ಶಾಶ್ವತವಾಗಿ ಇದ್ದುಬಿಡಲು ಹೇಳಿ ಅವಳನ್ನು ಒರೆಗೆ ಹಚ್ಚುತ್ತಾನೆ. ಅವಳು ಆ ಸೂಚನೆಯನ್ನು ನಿರಾಕರಿಸುತ್ತಾಳೆ. ಆ ಪರಾತ್ಪರ ಪುರುಷನ ಸಂಕಲ್ಪಶಕ್ತಿಯನ್ನು ಪಡೆದು ವಿಶ್ವವನ್ನು ಉದ್ಧರಿಸಲು ಈ ಭೂಲೋಕಕ್ಕೆ ಪತಿಯ

ಆತ್ಮದೊಂದಿಗೆ ಮರಳುತ್ತಾಳೆ. ಸತ್ಯವಾನನು ಆಗ ನಿದ್ದೆಯಿಂದ ಎಚ್ಚರಿಯುತ್ತಾನೆ. ಈರ್ವರೂ ಆಶ್ರಮಕ್ಕೆ ಬಂದು ತಲುಪುತ್ತಾರೆ. ಮಾವನಿಗೆ ದೃಷ್ಟಿ ಲಭಿಸಿರುತ್ತದೆ. ಅತ್ತೆ-ಮಾವಂದಿರು ಮಗ-ಸೊಸೆಯರನ್ನು ಕಣ್ಣಾರೆ ಕಂಡು ಹಿರಿಹಿರಿ ಹಿಗ್ಗುತ್ತಾರೆ. ಎಲ್ಲಿ ನೋಡಿದಲ್ಲಿ ಸಂತೋಷವೇ ಸಂತೋಷ. ರಾಜ್ಯಲಾಭ-ಪುತ್ರಲಾಭಗಳ ಬಗ್ಗೆ ವಾಚಕರೇ ಊಹಿಸಬೇಕು. ಇಲ್ಲಿಗೆ ಶ್ರೀ ಅರವಿಂದಕೃತ 'ಸಾವಿತ್ರಿ' ಮಹಾಕಾವ್ಯದ ಕಥೆ ತಕ್ಕ ಮಾರ್ಪಾಡುಗಳೊಂದಿಗೆ ಮುಗಿಯುತ್ತದೆ.

೩. ದ್ವಾದಶಾಧ್ಯಾಯಗಳ ದ್ರವ್ಯವಿಶೇಷ

ಪ್ರಾಸ್ತಾವಿಕ ಸಂಗತಿಗಳ ಅಧ್ಯಾಯ

(The Book of Beginnings)

[೧. ಸಾಂಕೇತಿಕ ಅರುಣೋದಯ: The Symbol Dawn; ೨. ಮೂಲ ಸಮಸ್ಯೆ: The Issue; ೩. ರಾಜನ ಯೋಗ ಸಾಧನೆ: ಜೀವಾತ್ಮನ ವಿಮೋಚನ ಯೋಗ: The Yoga of the King. The Yoga of the Soul's release; ೪. ರಹಸ್ಯ ಜ್ಞಾನ: The Secret Knowledge; ೫. ರಾಜನ ಯೋಗ ಸಾಧನೆ: ಆತ್ಮತತ್ತ್ವದ ಸ್ವಾತಂತ್ರ್ಯ-ಘನತೆಗಳ ಯೋಗ: The Yoga of the King: The Yoga of the Spirit's Freedom and Greatness.]

ಪ್ರಥಮ ಸರ್ಗದಲ್ಲಿ ಅರುಣೋದಯವು ಆಗುವ ಚಿತ್ರವಿದೆ. ಇದು ಸಾಂಕೇತಿಕ ಅರುಣೋದಯವೂ ಸರಿ. ಸಾವಿತ್ರಿ ಎಚ್ಚರಾಗುತ್ತಾಳೆ. ಸತ್ಯವಾನನು ಸಾಯತಕ್ಕ ಕರಾಳ ದಿನವಿದು. ೨ನೇ ಸರ್ಗದಲ್ಲಿ ಸಾವಿತ್ರಿ ಎದುರಿಸಬೇಕಾದ ಮೂಲ ಸಮಸ್ಯೆ—ಎಂದರೆ ವಿಧಿಲಿಖಿತವನ್ನು ಬದಲಿಸುವುದು ಸಾಧ್ಯವೇ ಎಂಬ ಸಮಸ್ಯೆಯು ವಿವರಣೆಯಿದೆ. ೩, ೪, ೫ನೇ

ಸರ್ಗಗಳಲ್ಲಿ ಅಶ್ವಪತಿ ಮಹಾರಾಜನ ಯೋಗಸಾಧನೆಯ ಚಿತ್ರಣೆಯ ವಿವರಗಳಿವೆ. ಸಾವಿತ್ರಿಯ ಜನನಕ್ಕೆ ಕಾರಣ ವೇನೆಂಬುದನ್ನು ೩ ನೇ ಸರ್ಗದಲ್ಲಿ ವಿವೇಚಿಸುತ್ತಾರೆ. ಕೊನೆಯ ಈ ೩ ಸರ್ಗಗಳಲ್ಲಿ ಉತ್ತಮವಾದ ವಿಷಯ ಹಿಂದೆ ನಡೆದ ಘಟನೆ ಎಂದು ತಿಳಿದುಕೊಳ್ಳಬೇಕು. ಚಲಚ್ಚಿತ್ರದಲ್ಲಿ flash-back- ಪೂರ್ವಸ್ಮರಣೆ ಇದ್ದಹಾಗೆ. ಸಾವಿತ್ರಿಯ ಜನನ ಕ್ಕಿಂತಲೂ ಮುಂಚೆ ಏನು ನಡೆಯಿತೆಂಬುದರ ಕಥೆ ಇಲ್ಲಿ ಹೇಳಿದಂತಿದೆ. ಅಶ್ವಪತಿಯು ಮನುಕುಲದ ಆತ್ಮದ ಪ್ರತೀಕ ವಾಗಿದ್ದಾನಷ್ಟೇ. ೩ ನೇ ಸರ್ಗದಲ್ಲಿ "A world's desire compelled her birth"- ವಿಶ್ವದ ಹಿರಿ ಹಂಬಲವೇ ಸಾವಿತ್ರಿ ದೇವತೆ ಜನ್ಮ ತಾಳಲು ಒತ್ತಾಯಪಡಿಸಿತು ಎಂಬ ಮಾತು ಬರುತ್ತದೆ. ಮನುಕುಲದ ಉತ್ಕಟ ಆಕೂತಿಯನ್ನು ತನ್ನ ಎದೆಯಲ್ಲಿಟ್ಟುಕೊಂಡು ದಿವ್ಯ ಮಾತೆಯ ದರ್ಶನಕ್ಕಾಗಿ ಸಾಧನೆ ನಡೆಸಿರುವ ಯೋಗಿಯೇ ಅಶ್ವಪತಿ. ಅವನ ಅಂತ ರಾತ್ಮಕ್ಕೆ ವಿಶ್ವಾತ್ಮನ ದರ್ಶನವಾಗಿ ರಹಸ್ಯಲೋಕಗಳ ದಿವ್ಯ ಶ್ರೇಣಿ ಕಂಡಿತು. ಭೌತಲೋಕದಿಂದ ದಿವ್ಯಲೋಕಕ್ಕೆ ಏರುವ ಏಣಿಯಿದು.

ಅಧ್ಯಾಯ ೨. (ಸರ್ಗಗಳು ೧೫)
ವಿವಿಧ ಲೋಕಗಳ ಪಯಣಿಗನ ಅಧ್ಯಾಯ
(The Book of the Traveller of the Worlds)

[೧. ಜಗತ್‌ಶ್ರೇಣಿ: The World-stair; ೨. ಸೂಕ್ಷ್ಮ ಜಡ ಲೋಕ: The Kingdom of Subtle Matter; ೩. ಪ್ರಾಣ

ಲೋಕದ ವೈಭವ ಮತ್ತು ಪತನ: The Glory and Fall of Life; ೪. ಅಲ್ಪ ಪ್ರಾಣಸತ್ತೆಯ ಲೋಕಗಳು: The Kingdoms of the Little Life; ೫. ಅಲ್ಪ ಪ್ರಾಣಸತ್ತೆಯ ಅಧಿದೇವತೆಗಳು: The Godheads of the Little Life; ೬. ಮಹತ್ತರ ಪ್ರಾಣಸತ್ತೆಯ ಲೋಕಗಳೂ, ಅಧಿದೇವತೆಗಳೂ: The Kingdoms and Godheads of the Greater Life; ೭. ರಾತ್ರಿಯ ಅಂತರಂಗದಲ್ಲಿ ಅವತರಣ: The Descent into Night; ೮. ಅಸತ್ಯದ ಲೋಕ, ಅನಿಷ್ಟದ ಮಾತೆ ಮತ್ತು ತಮಸ್ಸಿನ ಪುತ್ರರು: The World of Falsehood, The Mother of Evil and The Sons of Darkness; ೯. ಪ್ರಾಣಲೋಕದ ಅಧಿದೇವತೆಗಳ ಸ್ವರ್ಗ: The Paradise of The Life-Gods; ೧೦. ಅಲ್ಪ ಮನದ ಲೋಕಗಳೂ ಅಧಿದೇವತೆಗಳೂ: The Kingdoms and God-heads of The Little Mind; ೧೧. ಮಹತ್ತರ ಮನದ ಲೋಕಗಳೂ ಅಧಿದೇವತೆಗಳೂ: The Kingdoms and God-heads of the Greater Mind; ೧೨. ಆದರ್ಶದ ಸ್ವರ್ಗ ಲೋಕಗಳು: The Heavens of the Ideal; ೧೩. ಮನಸ್ಸತ್ತ್ವದ ಜೀವಾತ್ಮನಲ್ಲಿ: In the Self of Mind; ೧೪. ಜಗದಾತ್ಮ: The Word-soul; ೧೫. ಮಹತ್ತರ ಜ್ಞಾನದ ಲೋಕಗಳು. The Kingdoms of the Greater Knowledge - ಇಂತು ಈ ಅಧ್ಯಾಯವು ಎಲ್ಲ ಅಧ್ಯಾಯಗಳಲ್ಲಿ ಸುದೀರ್ಘ ಅಧ್ಯಾಯವಾಗಿದೆ.]

ಭೌತ ಅಥವಾ ಜಡಲೋಕದಿಂದ ದಿವ್ಯ ಲೋಕದೆಡೆಗೆ ಸಾಗುವಾಗ ಅಶ್ವಪತಿಯು ಮಹಾಸಾಧನೆಯಲ್ಲಿ ಕಂಡುಬರುವ ರಹಸ್ಯಲೋಕಗಳ ವರ್ಣನೆಯನ್ನು ಶ್ರೀ ಅರವಿಂದರು ಈ ಅಧ್ಯಾಯದಲ್ಲಿ ನಮಗೆ ಒದಗಿಸುತ್ತಾರೆ. ದಾರಿಯಲ್ಲಿ ಸೂಕ್ಷ್ಮ ಜಡಲೋಕ, ಪ್ರಾಣಲೋಕದ ವಿವಿಧ ಸ್ತರಗಳು, ಮನೋ

ಮಯ ಲೋಕದ ವಿವಿಧ ಪ್ರದೇಶಗಳು ಅಂತರಾತ್ಮಿಕ ಲೋಕ ಮೊದಲಾದ ಅನೇಕ ಅಲೌಕಿಕ ಲೋಕಗಳ ದರ್ಶನ ಇಲ್ಲಿ ಇದೆ. ಪ್ರಥಮ ಸರ್ಗದಲ್ಲಿಯೇ ಅಶ್ವಪತಿ ಏರಿಕೆಯ ಶ್ರೇಣಿಯಲ್ಲಿದ್ದ ಈ ಲೋಕಗಳನ್ನು ಹಕ್ಕಿನೋಟದಿಂದ ನೋಡುತ್ತಾನೆ. ಈ ವೈಚಿತ್ರ್ಯವನ್ನು ಕ್ರಮಿಸಲು ಅಗೋಚರ ಕರೆ ಅವನಿಗೆ ಕೇಳುತ್ತದೆ. ಅಲೌಕಿಕ ಸ್ಫೂರ್ತಿ-ಸಹಾಯ ದೊರೆಯುತ್ತಿವೆ; ಅಂತೆಯೇ ಮಧ್ಯೇ ಒದಗಿದ ಪತನದಿಂದಲೂ ಅವನು ಸಾವರಿಸಿಕೊಂಡು ಮತ್ತೆ ಮೇಲೇರಿ ಮುಂದುವರಿಯುತ್ತಾನೆ. ಒಟ್ಟಿನಲ್ಲಿ ಪೃಥ್ವಿಯ ಚರಿತ್ರೆಯಲ್ಲಿ ಒದಗಿದ ವಿಕಾಸದ ಹಂತಗಳನ್ನು ಕವಿ ಯೌಗಿಕ ಅನುಭವದಿಂದ ಬಣ್ಣಿಸುತ್ತಾರೆ. ಇಲ್ಲಿ ಬಂದಿರುವುದೆಲ್ಲಾ ಅಶ್ವಪತಿಯ ಪ್ರಜ್ಞೆಯಲ್ಲಿ ನಡೆದುದು ಎಂದು ಭಾವಿಸಬೇಕು. ಇದೂ ಕೂಡ ಹಿಂದೆ ನಡೆದ ಘಟನೆ. ೭ನೇ ಅಧ್ಯಾಯ ಮುಗಿಯುವ ವರೆಗೆ ಕವಿ ಹಿಂದಿನ ಕಥೆಯನ್ನೇ ಹೇಳುತ್ತಾರೆ.

ಅಧ್ಯಾಯ ೩ (ಸರ್ಗಗಳು ೪)
ದಿವ್ಯಮಾತೆಯ ಅಧ್ಯಾಯ
(The Book of The Divine Mother)

[೧. ಅಜ್ಞೇಯವನ್ನು ಬೆನ್ನಟ್ಟುವುದು: The Pursuit of the Unknowable; ೨. ದಿವ್ಯಮಾತೆಯ ಆರಾಧನೆ: The Adoration of the Divine Mother; ಪರತತ್ತ್ವದ ನಿಲಯ ಮತ್ತು ನವಸೃಷ್ಟಿ, The House of The Spirit and The New Creation; ೪. ದರ್ಶನ ಮತ್ತು ವರದಾನ: The Vision and The Boon.]

ಅಶ್ವಪತಿ ತನ್ನ ಯೋಗಸಾಧನೆಯನ್ನು ಮುಂದುವರಿಸಿದ ವೃತ್ತಾಂತವು ಈ ಅಧ್ಯಾಯದಲ್ಲಿದೆ. ಸರ್ವಲೋಕಗಳನ್ನು ದಾಟಿ ಅವನು ದಿವ್ಯ ಮಾತೆಯ ಪರಂಧಾಮವನ್ನು ಪ್ರವೇಶಿಸುತ್ತಾನೆ. ಅಲ್ಲಿ ದಿವ್ಯಮಾತೆಯ ದರ್ಶನ ಲಭಿಸುತ್ತದೆ. ಅವಳೆದುರಿಗೆ ಪೃಥ್ವಿಯ ಮೇಲಿನ ಕಷ್ಟನಷ್ಟಗಳನ್ನು ಅರಿಕೆಮಾಡಿಕೊಳ್ಳುತ್ತಾನೆ. ಮಾನವನು ಅಜ್ಞಾನದಿಂದ ಬಿಡುಗಡೆ ಪಡೆಯಬೇಕಾದರೆ ದಿವ್ಯಮಾತೆ ತನ್ನ ಒಂದು ಅಂಶವನ್ನೇ ಭೂಲೋಕದಲ್ಲಿ ಮಾನವ ರೂಪದಲ್ಲಿ ಕಳಿಸಬೇಕೆಂದು ಕೋರುತ್ತಾನೆ. 'ತಥಾಸ್ತು' ಎಂದು ದಿವ್ಯಮಾತೆ ವರ ನೀಡುತ್ತಾಳೆ. 'ಓರ್ವಳು ಅವತರಿಸುವಳು, ವಿಶ್ವದ ವಿಧಿಲಿಖಿತವನ್ನೇ ಬದಲಿಸುವಳು' ಎಂಬುದಾಗಿ ಶ್ರೀಮಾತೆ ವಚನಕೊಡುತ್ತಾಳೆ.

ಅಧ್ಯಾಯ ೪ (ಸರ್ಗಗಳು ೪)
ಜನನ–ಶೋಧಗಳ ಅಧ್ಯಾಯ
(The Book of Birth and Quest)

[೧. ಜ್ವಾಲೆಯ ಜನನ ಮತ್ತು ಬಾಲ್ಯ: The Birth and Childhood of The Flame; ೨. ಜ್ವಾಲೆಯ ವರ್ಧನೆ: The Growth of The Flame; ೩. ಶೋಧಕ್ಕಾಗಿ ಕರೆ: The Call To The Quest; ೪. ಶೋಧ: The Quest.]

ಈ ಅಧ್ಯಾಯದಲ್ಲಿ ಸಾವಿತ್ರಿಯ ಜನನದ ಹಾಗೂ ಬೆಳವಣಿಗೆಯ ಕಥೆ ಮುಂದುವರಿದಿದ್ದು ಅದರ ವಿವರಣೆ ಇಲ್ಲಿ ಲಭ್ಯವಿದೆ. ಸಾವಿತ್ರಿ ಒಂದು ಜ್ವಲಂತ ಜ್ವಾಲೆ; ಆಕೆಯನ್ನು

ವರಿಸಲು ಯಾರೂ ಒಪ್ಪುವುದಿಲ್ಲ, ಹಿಂಜರಿಯುತೊಡಗಿದರು. 'ದೇಶಗಳನ್ನೆಲ್ಲಾ ಸಂಚರಿಸಿ ನಿನ್ನ ಪತಿಯನ್ನು ನೀನೇ ಶೋಧಿಸು' ಎಂದು ಅಶ್ವಪತಿ ಸಾವಿತ್ರಿಗೆ ಹೇಳುತ್ತಾನೆ. 'Depart, Where love and destiny call your charm, ... Venture through the deep world. To find thy mate'- ಎಲ್ಲಿ ಪ್ರೇಮ ಮತ್ತು ಭಾಗ್ಯ ನಿನ್ನನ್ನು ಸೆಳೆಯುವವೋ ಅಲ್ಲಿಗೆ ಹೊರಡು; ನಿನ್ನ ಜೀವನದ ಜೊತೆಗಾರನನ್ನು ಹುಡುಕುವ ಸಾಹಸ ಮಾಡು ಎಂದು ನುಡಿದ ತಂದೆಯ ಆದೇಶದಂತೆ ಆಕೆ ಪತಿಶೋಧಕ್ಕೆ ಹೊರಟಳು ಎಂಬ ಮಾತು ಅಧ್ಯಾಯದ ಕೊನೆಗೆ ಸೂಚಿತವಾಗಿದೆ.

ಅಧ್ಯಾಯ ೫ (ಸರ್ಗಗಳು ೩)

ಪ್ರೇಮದ ಅಧ್ಯಾಯ (The Book of Love)

[೧. ಸಂಕಲ್ಪಿತ ಮಿಲನ ಸ್ಥಳ: The Destined Meeting Place; ೨. ಸತ್ಯವಾನ: Satyavan; ೩. ಸತ್ಯವಾನ-ಸಾವಿತ್ರಿ Satyavan and Savitri.]

ಈ ಅಧ್ಯಾಯದಲ್ಲಿ ಸಾವಿತ್ರಿಯ ಸಂಚಾರದ ವರ್ಣನೆಯಿದೆ. ಗಿರಿಶಿಖರಗಳ, ನದಿನದಗಳ, ತಪೋವನಗಳ ರಮ್ಯ ವಾತಾವರಣವನ್ನು ಸಾವಿತ್ರಿ ಉತ್ಸಾಹದಿಂದ ಅನುಭವಿಸುತ್ತಾಳೆ. Peacock and Parrot jewelled Soil and tree ನೆಲಕ್ಕೆ ನವಿಲು ರತ್ನ, ಗಿಡಕ್ಕೆ ಗಿಳಿ ರತ್ನ ಎಂಬಂತೆ ಸೃಷ್ಟಿ ಶೋಭಿಸುತ್ತಿತ್ತು. ದ್ಯುಮತ್ಸೇನನ ಆಶ್ರಮದ ಅಂಚು ತಲುಪುತ್ತಾಳೆ. ಅಲ್ಲಿ 'Soft and delicate air'

ಇತ್ತೆಂದು ಕವಿ ಹೇಳುತ್ತಾರೆ; ಅದು 'World of free and green delight' ಆಗಿತ್ತು. ಅಂದರೆ ಅಲ್ಲಿಯ ವಾತಾವರಣದಲ್ಲಿ ಮೃದುತ್ವವಿತ್ತು. ಸೂಕ್ಷ್ಮತೆಯಿತ್ತು; ಅದೊಂದು ಸ್ವಚ್ಛಂದ ಸಂತೋಷದ ಪ್ರಪಂಚವಾಗಿ ಅಲ್ಲಿ ಹಸಿರು ನಳನಳಿಸುತ್ತಿತ್ತು. ಆ ಅರಣ್ಯದಲ್ಲಿ ಸತ್ಯವಾನನನ್ನು ಸಾವಿತ್ರಿ ನೋಡುತ್ತಾಳೆ "her vision settled, caught and all was change"- ಅವಳ ಕಣ್ಣು ಸ್ಥಿರವಾಗಿ ಅಲ್ಲಿಯೇ ನೆಲೆನಿಂತಿತು, ಎಲ್ಲವೂ ಪಲ್ಲಟವಾಯಿತು". ಆತನನ್ನು ಕಂಡೊಡನೆ 'a mystic tumult from her depths arose: ಅಪರಿಚಿತ ಹರ್ಷದ ಕೇಕೆ ಅವಳ ಅಂತರಾಳದಿಂದ ಹೊರಹೊಮ್ಮಿತು. ಪರಸ್ಪರ ಸಂದರ್ಶನ-ಸಂಭಾಷಣೆಗಳಾದ ನಂತರ ಮದುವೆಯು ನಿರ್ಧಾರವಾಗುತ್ತದೆ; "The United Two began a greater age - ಅವರ ಮಿಲನವು ಅದೊಂದು ಮಹೋನ್ನತ ಮನ್ವಂತರವನ್ನೇ ನಿರ್ಮಿಸಿತು. ಸಾವಿತ್ರಿ ಅರಮನೆಗೆ ಹೋಗಿ, ತಂದೆಗೆ ತಿಳಿಸಿ, ಮರಳಿ ಬರುವುದಾಗಿ ಹೇಳುತ್ತಾಳೆ. ಇಂತು ಸತ್ಯವಾನನನ್ನು ಅವಳು ಬೀಳ್ಕೊಳ್ಳುತ್ತಾಳೆ. ತಂದೆಯ ಮನೆಗೆ ಮರುಪಯಣ ಬೆಳೆಸುತ್ತಾಳೆ.

ಅಧ್ಯಾಯ ೬ (ಸರ್ಗಗಳು ೨)

ವಿಧಿಯ ಅಧ್ಯಾಯ (The Book of Fate)

[೧. ವಿಧಿಯ ವಾಣಿ: The Word of Fate; ೨. ವಿಧಿಯ ಮಾರ್ಗ ಮತ್ತು ವ್ಯಥೆಯ ಸಮಸ್ಯೆ: The Way of Fate and The Problem of Pain]

ಈ ಅಧ್ಯಾಯದ ಪ್ರಾರಂಭದಲ್ಲಿ ದೇವರ್ಷಿ ನಾರದರು ಸಂಚರಿಸುತ್ತ ಭೂಲೋಕಕ್ಕೆ ಬಂದ ವರ್ಣನೆಯಿದೆ. ಬರುವಾಗ ಅವರು ಮೊದಲು ತಾವು ಕಂಡ 'ಅಮರ ದೇವತೆಗಳ ಶಾಶ್ವತ ಶ್ರಮ'(The eternal labour of the Gods)ವನ್ನು ಕುರಿತು ಹಾಡುತ್ತಿದ್ದರು. ಭೂಮಿಯ ಅಂಚು ತಲ್ಪಿದೊಡನೆ ಅವರ ಮನೋಭಾವದಲ್ಲಿ ಬದಲಾವಣೆಯಾಯಿತು. ಪರಮಾತ್ಮನ ಸ್ತೋತ್ರ ಮಾಡುತ್ತಿದ್ದ ಮುನಿಗೆ ಪೃಥ್ವಿಯಲ್ಲಿರುವ ಕತ್ತಲೆ ಕಂಡು ಮನ ಕರಗಿತು. 'A darkness yearning towards the eternal Light'-ಶಾಶ್ವತ ಪ್ರಕಾಶವನ್ನು ಹಂಬಲಿಸುತ್ತಿರುವ ಅಂಧಕಾರವನ್ನು ಕುರಿತು ವಿಷಾದದ ರಾಗದಲ್ಲಿ ಹಾಡತೊಡಗಿದರು. ಹಾಡಹಾಡುತ್ತ ಅಶ್ವಪತಿಯ ಅರಮನೆಗೆ ಬಂದು ತಲುಪಿದರು. ರಾಜರಾಣಿಯರು ಸ್ವಾಗತಿಸಿದರು. ಕ್ಷೇಮಸಮಾಚಾರದ ಕುಶಲಪ್ರಶ್ನೆಗಳಾದ ಬಳಿಕ ಅವರೊಡನೆ ೧ ಗಂಟೆ ಮಾತನಾಡುತ್ತ ಕುಳಿತರು. 'ಮಾನವರ ಕಷ್ಟಗಳನ್ನು ಕುರಿತು ಮತ್ತು ದೇವತೆಗಳು ಅವುಗಳ ನಿವಾರಣೆಗೆ ಪಡುವ ಪ್ರಯತ್ನಗಳನ್ನು ಕುರಿತು' ವಿವೇಚಿಸಿದರು. ಭೂಮಿಯಲ್ಲಿಯ ವ್ಯಥೆಯ ರಹಸ್ಯದ ಜೊತೆಗೆ ಪ್ರೇಮದ ಹೃದಯಕಮಲದ ವಿಕಾಸವನ್ನು ಕುರಿತು ಗೀತವೊಂದನ್ನು ಹಾಡಿದರು— 'He sang to them of the lotus-heart of love.' ಆಗ ಸಾವಿತ್ರಿ ಮರಳಿ ಬರುತ್ತಾಳೆ. '. her radiant tread glimmered across the floor'-ಆಕೆ ಹೆಜ್ಜೆಯಿಡುವಾಗ ಅವಳ ದಿವ್ಯ ಪ್ರಕಾಶದಿಂದ ನೆಲವು ಥಳ-

ಥಳಿಸಿತು. ಅವಳ ಅಪ್ರತಿಮ ಸೌಂದರ್ಯವನ್ನು ಕುರಿತು ನಾರದರು ಇಲ್ಲಿ ಮಾಡಿದ ಭಾಷಣವು ವಿಶ್ವಸಾಹಿತ್ಯದಲ್ಲಿಯೇ ಒಂದು ಅನರ್ಘ್ಯ, ಅಪೂರ್ವ ಕಾವ್ಯಭಾಗವಾಗಿದೆಯೆಂದು ಶ್ರೀ ಪುರಾಣಿಜಿ ಹೇಳುತ್ತಾರೆ. ಕೆಲ ನಿಮಿಷಗಳ ನಂತರ ಮುನಿ ಈ ಚೆಲುವಿನ ಪುತ್ಥಳಿ ಯಾವ ಕಾರ್ಯಕ್ಕಾಗಿ ಎಲ್ಲಿಗೆ ಹೋಗಿದ್ದಳೆಂಬುದನ್ನು ವಿಚಾರಿಸುತ್ತಾರೆ. ತಂದೆಯ ಸೂಚನೆಯಂತೆ ಆಕೆ ತನ್ನ ಸಂಚಾರದ ವರದಿಯನ್ನು ಒಪ್ಪಿಸುತ್ತಾಳೆ. ಸತ್ಯವಾನನನ್ನು ತಾನು ವರಿಸುವುದಾಗಿ ಹೇಳುತ್ತಾಳೆ. 'My father I have chosen. This is done' ಇದು ತನ್ನ ಅಚಲ ನಿರ್ಧಾರವೆಂದು ಬಿನ್ನವಿಸುತ್ತಾಳೆ. ಮುನಿಗಳು ಸತ್ಯವಾನನ ಸದ್ಗುಣಗಳನ್ನು ಮೆಚ್ಚಿ, ವಿಧಿಯು ಮಾತ್ರ ಪ್ರತಿಕೂಲವಿದೆಯೆಂಬುದನ್ನು ಸೂಚಿಸುತ್ತಾರೆ. ರಾಣಿ ಬಲವಂತ ಮಾಡಿದ್ದರಿಂದ ನಿಜವನ್ನು ನುಡಿದರು.

ಅಂದಿಗೆ ಒಂದು ವರ್ಷಕ್ಕೆ ವರನಿಗೆ ಮೃತ್ಯುಯೋಗವಿದೆಯೆಂಬುದಾಗಿ ಭವಿಷ್ಯ ನುಡಿದರು. ರಾಣಿ ಕಾತರಗೊಳ್ಳುತ್ತಾಳೆ; ಬೇರೊಬ್ಬನನ್ನು ವರಿಸಲು ಸೂಚಿಸುತ್ತಾಳೆ. ಸಾವಿತ್ರಿ ತನ್ನ ನಿರ್ಧಾರವನ್ನು ಬದಲಿಸುವುದಿಲ್ಲ. ವಿಧಿಲಿಖಿತ ಮತ್ತು ದೈವೀಕೃಪೆಗಳನ್ನು ಕುರಿತು ನಾರದರು ಸುದೀರ್ಘ ಪ್ರವಚನ ಮಾಡುತ್ತಾರೆ. ೨ನೇ ಸರ್ಗದಲ್ಲಿ ಭೂಲೋಕದಲ್ಲಿಯ ವ್ಯಥೆ, ಅದರ ಕಾರ್ಯೋದ್ದೇಶ, ಅದರ ಮೂಲ ಇವುಗಳನ್ನು ಕುರಿತು ಚರ್ಚಿಸುತ್ತಾರೆ. ಅವತಾರಿ ಪುರುಷರೂ ಜಗದುದ್ಧಾರಕ್ಕಾಗಿ ವ್ಯಥೆಪಡಲೇಬೇಕಾಗುವುದನ್ನು ಉಲ್ಲೇ

ಬಿಸುತ್ತಾರೆ. 'The soul that can live alone with itself meets God- ಏಕಾಕಿಯಾಗಿ ಇರಬಲ್ಲ ಜೀವಾತ್ಮವೇ ದೇವರ ದರ್ಶನ ಪಡೆಯುತ್ತದೆ' ಎಂದು ನುಡಿದು ಸಾವಿತ್ರಿಯನ್ನು ಅವಳ ಪಾಟ್ಟಿಗೆ ಬಿಟ್ಟುಬಿಡಿ– 'Alone she is equal to her mighty task- ಅವಳು ತನ್ನ ಅಮೋಘ ಜೀವಿತೋದ್ದೇಶವನ್ನು ನೆರವೇರಿಸಲು ಸಮರ್ಥಳಿದ್ದಾಳೆ' ಎಂದು ಸಲಹೆ ನೀಡುತ್ತಾರೆ. ಅವರು ಅಲ್ಲಿಂದ ಹೊರಡುತ್ತಾರೆ. ತಾಯಿತಂದೆ ಸಾವಿತ್ರಿಯ ಮದುವೆಗೆ ಒಪ್ಪಿ ಸಿದ್ಧತೆ ನಡೆಸುತ್ತಾರೆ. ಮಿತಪರಿವಾರದೊಂದಿಗೆ ಸಾವಿತ್ರಿಯನ್ನು ದ್ಯುಮತ್ಸೇನನ ಆಶ್ರಮಕ್ಕೆ ಕಳುಹಿ ಅವಳನ್ನು ವಿಧ್ಯುಕ್ತವಾಗಿ ಆ ಕುಟುಂಬಕ್ಕೆ ಒಪ್ಪಿಸಿ ಬರಬೇಕೆಂದು ನಿರ್ಣಯವಾಗುತ್ತದೆ.

ಅಧ್ಯಾಯ ೭ (ಸರ್ಗಗಳು ೭)

ಯೋಗದ ಅಧ್ಯಾಯ (The Book of Yoga)

[೧. ಮಿಲನದ ಹರುಷ: ಮೃತ್ಯುವಿನ ಭವಿಷ್ಯದಿಂದ ಸತ್ತ್ವಪರೀಕ್ಷೆ ಮತ್ತು ಹೃದಯದ ವಿಷಾದ: The Joy of Union; The Ordeal of the Fore-knowledge of Death and The Heart s Grief; ೨. ಆತ್ಮಶೋಧದ ದೃಷ್ಟಾಂತ: The Parable of The Search For The Soul; ೩. ಅಂತಃಪ್ರದೇಶಗಳಲ್ಲಿ ಪ್ರವೇಶ: The Entry Into the Inner Countries; ೪. ಆತ್ಮಶಕ್ತಿತ್ರಯ: The Triple Soul-Forces; ೫. ಆತ್ಮತತ್ತ್ವದ ಶೋಧನೆ: The Finding of The Soul; ೬. ನಿರ್ವಾಣ ಮತ್ತು ಸರ್ವನಿರಾಕರಣಶೀಲ ಕೈವಲ್ಯದ ಬೋಧ: Nirvana and

the Discovery of the All-Negating Absolute; ೭. ***ಶೀರ್ಷಿಕೆಯಿಲ್ಲದ ಸರ್ಗ]

ಈ ಅಧ್ಯಾಯದ ಪ್ರಾರಂಭದಲ್ಲಿ ಸಾವಿತ್ರಿ ಮಿತಪರಿವಾರದೊಡನೆ ಅರಮನೆಯಿಂದ ಹೊರಟು ಸತ್ಯವಾನನು ವಾಸಿಸುವ ತಪೋವನಕ್ಕೆ ಬರುತ್ತಾಳೆ. ಆತನ ವಧುವಾಗುತ್ತಾಳೆ. ಅಲ್ಲಿ ಅವರೀರ್ವರೂ ಒಂದು ವರ್ಷದ ವರೆಗೆ ಸುಖದಿಂದ ಕಾಲಕಳೆಯುತ್ತಾರೆ. ಆಶ್ರಮದ ಜೀವನಕ್ಕೆ ಸಾವಿತ್ರಿ ಚೆನ್ನಾಗಿ ಹೊಂದಿಕೊಳ್ಳುತ್ತಾಳೆ. ವರ್ಷದ ಕೊನೆಯ ದಿನಗಳು ಸಮೀಪಿಸುತ್ತಿರುವಾಗ ಆಕೆಯ ಮನೋಭಾವದಲ್ಲಿ ಅಂತರ್ಮಾನಸದಲ್ಲಿ ಹೇಗೋ ಹಾಗೆ ಬದಲಾವಣೆಯಾಗುತ್ತದೆ. 'The grief of all the world came near to her-ಜಗತ್ತಿನ ದುಃಖವೆಲ್ಲವೂ ಆಕೆಯ ಬಳಿಗೆ ಬಂತು;' ಏಕೆಂದರೆ ಸತ್ಯವಾನನ ವಿಧಿಲಿಖಿತ ಅವಳಿಗೆ ನೆನಪಾಗತೊಡಗಿತು. ಆಶ್ರಮದ ಎಲ್ಲ ದಿನಗೆಲಸಗಳನ್ನು—ಅವು ಎಷ್ಟೇ ಸಣ್ಣವಿರಲಿ–ಆಕೆ ಪ್ರೇಮದಿಂದ ಗೈಯುತ್ತಿದ್ದಳು; ಅವುಗಳಲ್ಲೆಲ್ಲಾ 'a strange divinity shone-ವಿಚಿತ್ರ ದೈವಿಕತೆ ಹೊಳೆಯತೊಡಗಿತು.' ತನ್ನ ದುಃಖವನ್ನು ಮಾತ್ರ ಯಾರಿಗೂ ತೋರಗೊಡಲಿಲ್ಲ. ತನ್ನ ಕೊರಗನ್ನು ತಾನೊಬ್ಬಳೇ ಸಹಿಸಿಕೊಂಡಳು. ಅವಳು ಮಾನವಳಾಗಿಯೇ ಎಲ್ಲರೊಡನೆ ನಡೆದುಕೊಂಡಳು.

ಇರುಇರುತ್ತಲೆ ಉನ್ನತ ಸ್ತರದಿಂದ ಆಕೆಗೆ ಉತ್ಕಟ ಧ್ವನಿಯೊಂದು ಕೇಳತೊಡಗಿದುದರ ಉಲ್ಲೇಖ ೨ನೇ ಸರ್ಗ

ದಲ್ಲಿದೆ. ಆಕೆಯು ಜೀವಿತೋದ್ದೇಶವನ್ನು ಆ ಧ್ವನಿ ನೆನಪಿಗೆ ತಂದುಕೊಟ್ಟಿತು. 'Find out thy soul, recover thy hid self- ನಿನ್ನ ಅಂತರಾತ್ಮನನ್ನು ಹುಡುಕು, ಅಡಗಿದುದನ್ನು ಹೊರತೆಗೆದು ಅದನ್ನು ಪಡೆ' ಎಂಬ ಆದೇಶವಾಯಿತು. 'One speeks within Light comes to us from above- ಅಂತರ್ಯಾಮಿ ಮಾತನಾಡುತ್ತಾನೆ, ಮೇಲಿನಿಂದ ಜ್ಞಾನಪ್ರಕಾಶ ನಮ್ಮೆಡೆಗೆ ಬರುತ್ತದೆ' ಎಂಬ ಅನುಭವವು ಉಂಟಾಯಿತು. ೩ನೇ ಸರ್ಗದಲ್ಲಿ ಆಕೆ ಅಂತರಂಗ ಅಂತಃಪ್ರದೇಶಗಳನ್ನು ಹೊಕ್ಕುದರ ವರ್ಣನೆಯಿದೆ. ಅವಳು ಅಲ್ಲಿ ಸಂಚರಿಸುವಾಗ 'For man thou seekest' not for thyself alone— ಮನುಕುಲಕ್ಕಾಗಿ ನಿನ್ನ ಆತ್ಮಶೋಧ ನಡೆದಿದೆ. ನಿನಗಾಗಿ ಮಾತ್ರ ಅಲ್ಲ' ಎಂಬುದಾಗಿ ಒಳದನಿಯೊಂದು ನುಡಿಯುತ್ತದೆ. ಆಕೆ ತನ್ನ ಈ ಶೋಧ-ಸಂಚಾರದ ಕಾಲಕ್ಕೆ ದೇಹಭಾವದಿಂದ ತನ್ನನ್ನು ಬಿಡಿಸಿಕೊಂಡು ತನ್ನ ಸತ್ತೆಯ ಆಳದಾಳದೆಡೆಗೆ ನೋಡತೊಡಗಿದಳು. ಹೀಗೆ ಮಾಡುವಾಗ ಕೊಂಚ ಅಡಚಣೆಯೂ ಅನಿಸಿತು; ಜಾಳಿನ ಕೂಗುಗಳೇ ಕೇಳಿಸತೊಡಗಿದವು. ಆಗ ಆಕೆ ಉದ್ಧಾರಕ ನಾಮ (Saviour Name) ದ ಮಂತ್ರವನ್ನು ಸ್ಥಿರವಾಗಿ ಧೇನಿಸಿದಳು. ಜೀವನ ಶಕ್ತಿ (Life-force) ತನ್ನ ಬಂಧನದಿಂದ ಬಿಡುಗಡೆ ಪಡೆಯಿತು. ಬಳಿಕ ಆಕೆ 'quiet country of fixed Mind— ಸ್ಥಿರಚಿತ್ತದ ಪ್ರಶಾಂತ ಪ್ರದೇಶಕ್ಕೆ ಬಂದು ತಲುಪಿದಳು. ಅಲ್ಲಿ ಯಾರೋ ನಿಂತುದನ್ನು ಸಾವಿತ್ರಿ

ಕಂಡಳು. 'Here is the truth, God's harmony is here' ಇಲ್ಲಿ ಸತ್ಯವಿದೆ, ದೇವನ ಸಾಮರಸ್ಯವಿದೆ' ಎಂದೆನ್ನುತ್ತ ಅಲ್ಲಿಯೇ ನೆಲೆನಿಲ್ಲಲು ಆ ವ್ಯಕ್ತಿ ಕರೆಯಿತು. ಸಾವಿತ್ರಿ ಅದಕ್ಕೆ ಒಪ್ಪದೆ ತನ್ನ ಆತ್ಮದ ಅಂತಃಶೋಧಕ್ಕೆ ಮುಂದುವರಿದಳು. ತನ್ನನ್ನು ಉದ್ಧರಿಸಿಕೊಂಡವನೇ ಉಳಿದವರನ್ನು ಉದ್ಧರಿಸುವನು ಎಂಬುದನ್ನು ಆಕೆ ಅರಿತಿದ್ದಳು. ಆಂತರಿಕ ಅಗ್ನಿಯ (Occult Fire) ಬಳಿಗೆ ಆಕೆ ಬಂದಿದ್ದಳು. ಇಲ್ಲಿಗೆ ೩ನೇ ಸರ್ಗ ಮುಗಿಯುತ್ತದೆ.

೪ನೇ ಸರ್ಗದಲ್ಲಿ ಜೀವಸತ್ತೆಯ ಅಂತರಾಳದಲ್ಲಿದ್ದ ಶಕ್ತಿತ್ರಯದ ದರ್ಶನವಾಗುತ್ತದೆ. i) ಸಪ್ತದುಃಖಗಳ ಮಾತೆ (The Mother of Seven Sorrows) ii) ಬಲ-ಸಾಮರ್ಥ್ಯಗಳ ಮಾತೆ ಮತ್ತು iii) ಶಾಂತಿ-ಔದಾರ್ಯ- ಮೌನಗಳಿಂದ ಕೂಡಿದ ಜ್ಞಾನಮಾತೆ ಇವರು ಪ್ರತ್ಯೇಕವಾಗಿ ತಾವೇ ಆಕೆಯ ಆತ್ಮಸ್ಥ ಶಕ್ತಿಯೆಂದು ಹೇಳಿ ನೆರವಾಗುವುದಾಗಿ ಭರವಸೆಯಿತ್ತರು. ಈ ಮಧ್ಯೆ ದುಃಖಗಳೇ ರೂಪವೆತ್ತು ಬಂದ 'ವಿಷಾದ-ವ್ಯಕ್ತಿ (The Man of Sorrows) ಯೊಂದು ಕಾಣಿಸಿಕೊಂಡು ಜಗತ್ತೆಲ್ಲಾ ದುಃಖಮಯವೆಂದು ಉಸುರಿ ದೇವರು ಮತ್ತು ಮನುಕುಲಗಳೊಡನೆ ಜಗಳವಾಡಲು ಸಾವಿತ್ರಿಯ ಮನವೊಲಿಸಿತು; ಆಕೆ ಮಾತ್ರ ಈ ವ್ಯಕ್ತಿಗೆ ಉತ್ತರವನ್ನೇ ಕೊಡದೆ ಮುಂದುವರಿದಳು. ಭಗವದಭಿಮುಖವಾದ ಶಕ್ತಿತ್ರಯಕ್ಕೆ ಮಾತ್ರ ಉತ್ತರವಿತ್ತಳು; ಅವರೆಲ್ಲರೂ ತನ್ನ ಆತ್ಮತತ್ತ್ವದ ಅಂಶ (Part of The Soul)ಗಳೇ ಎಂದು ಹೇಳಿ

ಅವರಿಂದ ಆಧ್ಯಾತ್ಮಿಕ ನೆರವು ಪಡೆದಳು. ಐನೇ ಸರ್ಗದಲ್ಲಿ ಕೊನೆಗೆ ಆಕೆ ತನ್ನ ಆತ್ಮವನ್ನು ಹುಡುಕಿ ಕಂಡು ದಿವ್ಯ ಮಾತೆಗೆ ಅದರಲ್ಲಿ ಅವತರಿಸಲು ಪ್ರಾರ್ಥಿಸಿದಳು. ದಿವ್ಯ ಮಾತೆ ಅವಳ ಹೃದಯದಲ್ಲಿ ಇಳಿದಳು; ಆಗ ಉಚ್ಚ ಶಕ್ತಿಯೊಂದು ಅವಳ ಹೃತ್‌ಚಕ್ರವನ್ನು ಸ್ಪರ್ಶಿಸಿತು. ಆಗ ಅವಳ ಪ್ರಕೃತಿಯಲ್ಲಿ ರೂಪಾಂತರ ಘಟಿಸಿ ಅವಳ ಪ್ರತಿಯೊಂದು ಕೃತಿಯೂ ಆ ಮುಂದೆ ಭಗವಂತನ ಕೃತಿಯಾಗಿ ಪರಿಣಮಿಸಿತು. ('every act became an act of god') ಮುಂದೆ ೬ನೇ ಸರ್ಗದಲ್ಲಿ ಅವಳ ಆಂತರಿಕ ಪೂರ್ಣತೆಯಿಂದಾಗಿ ಅವಳ ಬಾಹ್ಯ ಪರಿಸರದಲ್ಲೂ ಹೆಚ್ಚಿನ ಪರಿಣಾಮಗಳು ಘಟಿಸಿದವು. ಸತಿಪತಿಗಳು ಅದ್ವೈತ ಸುಖವನ್ನು ಅನುಭವಿಸಿದರು: Ins-parable like The earth and sky-ಅಂದರೆ ದ್ಯಾವಾ-ಪೃಥಿವಿಗಳಂತೆ ಅವಿಭಕ್ತತೆಯನ್ನು ತಾಳಿದರು. ಈ ಮಧ್ಯೆ ಸರ್ವವನ್ನೂ ನಿರಾಕರಿಸುವ 'ನಿರ್ವಾಣ'ದ ಶೂನ್ಯ ಅನುಭವವು ಎದುರಾಗಿ ಜಗತ್ತೆಲ್ಲಾ ಮಾಯೆಯೆಂದು ಚುಚ್ಚಿಕೊಡತೊಡಗಿತು. ಆಗ ಊರ್ಧ್ವ ಉನ್ನತ ಶಿಖರಗಳಿಂದ ಮಹತ್ತರ ಧ್ವನಿಯೊಂದು ಇಳಿದು ಬಂತು-Then from The heights a greater voice came down. ಸಾವಿತ್ರಿ ಸಾಕ್ಷಿಪುರುಷಳಾಗಿ ಎಲ್ಲವನ್ನೂ ನಿರೀಕ್ಷಿಸಿದಳು. ಆಗ ಆಕೆಗೆ ವಿಶ್ವದ ಏಕತ್ವ (Consmic unity) ದ ಸಾಕ್ಷಾತ್ಕಾರವಾಯಿತು. ನಿರ್ವಾಣವನ್ನು ಆಕೆ ನಿರಾಕರಿಸಿದಳು. ಇಷ್ಟೊಂದು ಆಂತರಿಕಸಿದ್ಧಿಯು ಘಟಿಸುತ್ತಿರುವಾಗ ಆಕೆಯ ದೈನಂದಿನ ಜೀವನವು ಯಥಾ

ಪ್ರಕಾರ ಮುಂದುವರಿದಿತ್ತು ಎಂಬ ಮಾತು ಶೀರ್ಷಿಕೆಯಿರದ ೭ನೇ ಸರ್ಗದಲ್ಲಿ ಉಲ್ಲೇಖವಾಗುತ್ತದೆ. ಉಳಿದವರಾರಿಗೂ ಆಕೆಯ ಅಂತಃಸತ್ತ್ವದಲ್ಲಿ ಏನು ನಡೆದಿದೆಯೆಂಬುದು ತಿಳಿದು ಬರಲಿಲ್ಲ. ಇಂತು ಆಕೆ ವ್ಯಕ್ತಿ-ವಿಶ್ವ-ವಿಶ್ವಾತೀತಗಳ ಅನುಭವ ಪಡೆದು ಬರಲಿರುವ ಹೋರಾಟಕ್ಕೆ ಅಣಿಯಾಗುತ್ತಾಳೆ. ಆಕೆಯ ಪ್ರಜ್ಞೆ ದಿಕ್ಕಾಲಗಳನ್ನು ಮೀರಿದ್ದರೂ ಅವೇ ದಿಕ್ಕಾಲಗಳಲ್ಲಿ ಅದು ಸರ್ವತ್ರ ವ್ಯಾಪಿಸಿತ್ತು-'She was no more herself but all The world-ಆಕೆ ಆಗ ವ್ಯಕ್ತಿ ಮಾತ್ರವಾಗಿರದೆ ಸಮಸ್ತ ವಿಶ್ವವೇ ಆಗಿದ್ದಳು.

ಅಧ್ಯಾಯ ೮ (ಸರ್ಗ ೧)

ಮೃತ್ಯುವಿನ ಅಧ್ಯಾಯ (The Book of Death)

[ಈ ಅಧ್ಯಾಯವು ಕವಿಗಳಿಂದ ಪೂರ್ಣಗೊಳಿಸಲ್ಪಡದೆ ಅಪೂರ್ಣವಾಗಿಯೇ ಉಳಿದಿದೆ. ಇಲ್ಲಿರುವ ಒಂದೇ ಒಂದು ಸರ್ಗವು '೩ನೇ ಸರ್ಗ'ವೆಂದು ಕರೆಯಲ್ಪಟ್ಟು 'Death in the Forest-ಅರಣ್ಯದಲ್ಲಿ ಮೃತ್ಯು' ಎಂಬ ಶೀರ್ಷಿಕೆ ಪಡೆದಿದೆ.]

ಇದು ವರ್ಷದ ಕೊನೆಯ ದಿನ. ಸತ್ಯವಾನನು ಸಾಯಬೇಕಾದ ದಿನವಿದು. ಪ್ರಥಮ ಅಧ್ಯಾಯದ ಪ್ರಥಮ ಸರ್ಗದಲ್ಲಿ ಹೇಳಿದ ಪ್ರಾತಃಕಾಲವು ಆಗಿದೆ. ಅಲ್ಲಿಂದ ಕಥಾಸೂತ್ರ ಮುಂದುವರಿಯುತ್ತದೆ. ಬೆಳಗಿನಲ್ಲೆದ್ದು ಆಕೆ ಸತ್ಯವಾನನು ಶಿಲೆಯೊಂದರ ಮೇಲೆ ಕಡೆದ ದೇವೀಪ್ರತಿಮೆಗೆ ಪ್ರಣಾಮಗೈಯುತ್ತಾಳೆ. ಆತ ಅಡವಿಗೆ ಕಟ್ಟಿಗೆ ತರಲು ಹೊರಟಿರಲು ತಾನೂ ಅವನೊಡನೆ ಅಂದಿನ ದಿನ

ಹೊರಡಲು ಅತ್ತೆಯ ಅಪ್ಪಣೆ ಕೇಳುತ್ತಾಳೆ. "Do as thy wise mind desires- ನಿನ್ನ ಜ್ಞಾನಚಿತ್ತ ಬಯಸಿದಂತೆ ನೀನು ನಡೆದುಕೋ" ಎಂದು ಆ ಅತ್ತೆ ಅಪ್ಪಣೆಕೊಡುತ್ತಾಳೆ. ಇಬ್ಬರೂ ಅರಣ್ಯಕ್ಕೆ ಹೊರಡುತ್ತಾರೆ. ಅಂದಿನ ಮುಹೂರ್ತದಲ್ಲಿ "Her life was now in Seconds not in hours- ಗಂಟೆಯಲ್ಲ ಕ್ಷಣಕ್ಷಣವೂ ಅವಳ ಬಾಳು ವಿಧಿಯನ್ನು ಎದುರಿಸುತ್ತಿತ್ತು. ಪಾಪ. ಸತ್ಯವಾನನಿಗೆ ಇದರ ಅರಿವೇ ಇಲ್ಲ. ಗಿಡವೊಂದನ್ನು ಕಡಿಯುತ್ತಿರುವಾಗ ವಿಚಿತ್ರ ಸಂಕಟವು ಅವನಿಗೆ ಅನಿಸತೊಡಗಿತು. ಕಡಿದ ಆ ಗಿಡಕ್ಕೆ ಆದ ವೇದನೆ ತನಗೂ ಆಯಿತೆಂದು ಅತ ಹೇಳುತ್ತಾನೆ. ಒಮ್ಮೆಲೆ ಅತ ಚೀರಿದನು; ಸಾವಿತ್ರಿ ಬಂದು ಅವನ ಮೈ ಹಿಡಿದಳು. ಅವನು ಕೆಳಗೆ ಬಿದ್ದ; ಅವನ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡಳು. ದೇಹದ ಬಣ್ಣ ಬದಲಾಯಿತು. ಅವನು ದೊಡ್ಡ ಧ್ವನಿಯಿಂದ ಕೂಗಿಕೊಂಡ: "Savitri, Oh Savitri, Lean down, my soul, and kiss me while I die— ನನ್ನ ಪ್ರಾಣಸ್ವರೂಪಳಾದ ಓ ಸಾವಿತ್ರಿಯೆ. ಬಾಗಿ ಒಂದು ಮುದ್ದು ಕೊಡು. ನಾನು ಸಾಯುತ್ತಿರುವೆ" ಎಂದು. ಆಕೆ ದುಃಖಿಸಲಿಲ್ಲ, ಅಂಜಲಿಲ್ಲ. ಘನವಾದ ಸ್ಥಿರ ಸಮಾಧಾನ ಅವಳನ್ನು ಆವರಿಸಿತ್ತು, "She knew that visible Death was Standing there and Satyavan had passed from her embrace" ಮೃತ್ಯುವಿನ ಮೂರ್ತಿ ಎದುರಿಗೆ ನಿಂತುದನ್ನು ಅವಳು ಅರಿತಳು: ಸತ್ಯವಂತನ ಜೀವವೋ ಆಕೆಯ

ಅಪ್ಪುಗೆಯಿಂದ ಕೊಸರಿಕೊಂಡು ಹೋಗಿತ್ತು. ಆತ ಸಾಯುತ್ತಿರುವಾಗ ಅವನ ಇಚ್ಛೆಯಂತೆ ತನ್ನ ಪ್ರೇಮದ ಗುರುತೆಂದು ಕೊನೆಯ ಮುದ್ದನ್ನು ಆಕೆ ಸಲ್ಲಿಸಿದ್ದಳು.

ಅಧ್ಯಾಯ ೯ (ಸರ್ಗಗಳು ೨)
ಅನಂತ ಅಂಧಕಾರದ ಅಧ್ಯಾಯ
(The Book of Eternal Night)

[೧. ಕೃಷ್ಣವರ್ಣದ ಶೂನ್ಯತೆಯೆಡೆಗೆ: Towards the black void; ೨. ಅನಂತ ಅಂಧಕಾರದಲ್ಲಿ ಸಂಚರಣ ಮತ್ತು ತಮಸ್ಸಿನ ಧ್ವನಿ: The Journey in Eternal Night and The Voice of Darkness.]

ಈ ಅಧ್ಯಾಯದಲ್ಲಿ ನಡೆದುದೆಲ್ಲವೂ ಕಾಲಾತೀತವಾದ ಪೃಥ್ವಿಯ ವಾತಾವರಣದಲ್ಲಿ ನಡೆದದ್ದು. ಸಾವಿತ್ರಿಯ ಪ್ರಜ್ಞೆಯಲ್ಲಿ ಈ ಘಟನೆಗಳು ಜರುಗಿವೆಯೆಂದು ಭಾವಿಸಬೇಕು. ೧ನೇ ಸರ್ಗದಲ್ಲಿ ಮೃತ್ಯು ಸತ್ಯವಾನನ ಅಂಗುಷ್ಠಮಾತ್ರದ ಪ್ರಾಣವನ್ನು ತೆಗೆದುಕೊಂಡು ಮುಂದೆ ಸಾಗುತ್ತಾನೆ. ಸಾವಿತ್ರಿ ಸೂಕ್ಷ್ಮಶರೀರದಲ್ಲಿ ಅವನನ್ನು ಹಿಂಬಾಲಿಸುತ್ತಾಳೆ. ಆಮೇಲೆ ಸೂಕ್ಷ್ಮ ಶರೀರವನ್ನು ಸಹ ತೊರೆದು ಅನುಸರಿಸುತ್ತಾಳೆ. ಭೀಕರ ಅಂಧಕಾರದಲ್ಲಿ ಅವರ ಪಯಣ ಸಾಗಿದೆ. ಮುಂದೆ ತೇಜಸ್ವಿ ಸತ್ಯವಾನ, ನಡುವೆ ಮೃತ್ಯು, ಅವನ ಹಿಂದೆ ಸಾವಿತ್ರಿ ಹೀಗೆ ಹೊರಟಿದ್ದಾರೆ. ಒಮ್ಮೆ ಹೀಗಾಯಿತು: ಸತ್ಯವಾನನೂ ಮೃತ್ಯುವೂ ತಪ್ಪಿಸಿಕೊಂಡು ಪಾರಾಗುತ್ತಾರೆಂದು ಸಾವಿತ್ರಿಗೆ ತೋರಿತು; ಆಗ ಆಕೆಯ ಆತ್ಮಸತ್ತ್ವ

ವೆಲ್ಲಾ ಭಯಾನಕ ಹೆಣ್ಣುಹದ್ದಿನಂತೆ ಗೂಡಿನೊಳಗಿಂದ ಹೊರ ಬಿದ್ದು ಸತ್ಯವಾನನೆಡೆಗೆ ಎರಗಿತು. ಈಗ ಆಕೆ ಮಾನವೀಯ ಸಾವಿತ್ರಿಯಾಗಿರಲಿಲ್ಲ. ಆಗ ಅಲ್ಲಿ ಸೂರ್ಯನಾಗಲಿ ಪೃಥ್ವಿಯಾಗಲಿ ಇರಲೇ ಇಲ್ಲ. 'All was the Violent Ocean of a Will– ಸಮಸ್ತವೂ ಸಂಕಲ್ಪವೊಂದರ ಮಹಾಸಾಗರವಾಗಿತ್ತು.' ಆ ಬಳಿಕ ಅವಳ ಸೂಕ್ಷ್ಮ ಮನವು ಆ ಮಹಾಸಾಗರದೊಳಗಿಂದ ಮೇಲೆ ಎದ್ದಿತು; ಮತ್ತು ಮೂವರೂ ಪ್ರಜ್ಞಾಲೋಕದ ಪ್ರದೇಶದಲ್ಲಿ ಮುಂದೆ ಸಾಗಿದರು. ಆಗ ಮೃತ್ಯು ನುಡಿದ: "Oh mortal, turn back to thy transient Kind... your transient loves bind not the eternal gods— ಓ ಮರ್ತ್ಯಳೇ, ನಿನ್ನ ಅನಿತ್ಯ ಮಾನವ ಕುಲಕ್ಕೆ ಹಿಂದಿರುಗು.... ನಿನ್ನ ಕ್ಷಣಭಂಗುರ ಪ್ರೀತಿಗಳು ಶಾಶ್ವತ ದೇವತೆಗಳನ್ನು ಬಂಧಿಸುವುದಿಲ್ಲ." ಸಾವಿತ್ರಿ ಯಾವ ಉತ್ತರವನ್ನೂ ಕೊಡದೆ ಜ್ವಾಲೆಯಾಗಿ ಮೇಲಕ್ಕೆದ್ದು ಮೌನವಾಗಿ ಹಿಂಬಾಲಿಸಿದಳು. ಇಲ್ಲಿಗೆ ೧ನೇ ಸರ್ಗ ಮುಗಿಯುತ್ತದೆ.

೨ನೇ ಸರ್ಗದಲ್ಲಿ ಪ್ರಾರಂಭಕ್ಕೆ ಅವರು ಭೀಕರವಾದ ಅಂಧಕಾರದ ಅಂಚಿನ ಮೇಲೆ ನಿಂತಿರುತ್ತಾರೆ. ಮತ್ತೆ ಮುಂದೆ ಸಾಗಿದರು. ಒಂದಿಷ್ಟು ಜಾರುತ್ತ, ಎಳುತ್ತ ಮುಂದುವರಿದರು. ಕತ್ತಲೆಯಲ್ಲಿ ಜ್ಯೋತಿ ನಂದಿದಂತೆ ಸಾವಿತ್ರಿಗೆ ಕೊಂಚಕಾಲ ಅನಿಸಿತು. ಮೃತ್ಯುವಿನ ದವಡೆಯಲ್ಲಿಯೇ ಆಕೆ ಬದುಕಿ ಉಳಿದಳು. 'a memory that wished to live again— ಪುನಃ ಬಾಳಬೇಕೆಂಬ ಸ್ಮರಣೆಯು

ಜ್ಯೋತಿಯೊಂದು ಮಂದವಾಗಿ ಉರಿಯತೊಡಗಿತು. ಆಕೆ ಪುನಃ ಚೇತರಿಸಿಕೊಂಡು ಮೇಲೆದ್ದಳು; ಸತ್ಯವಾನನೂ ಕಾಂತಿಮಯ ಛಾಯೆಯಾಗಿ ಬೆಳೆಯುತ್ತಿರುವುದನ್ನು ಕಂಡಳು. ಅಂಧಕಾರದ ಆಳದಲ್ಲಿ ಅವರು ಇಳಿದರು. ಅದು ಶಾಶ್ವತ ತಮೋಲೋಕವಾಗಿತ್ತು. "ಇಲ್ಲಿಯೂ ನೀನು ಬರಬಲ್ಲೆಯಾ? ಬಂದು ಬದುಕಬಲ್ಲೆಯಾ?" ಎಂದು ಮೃತ್ಯು ನುಡಿದ. ಸಾವಿತ್ರಿ ಮತ್ತೆ ಮಾತನಾಡಲಿಲ್ಲ. ಅಂಧಕಾರವೇ ನುಡಿಯುತ್ತಿರುವಂತೆ ಆಕೆಗೆ ಕೇಳಿಸಿತು. ಆಕೆ ಆ ಧ್ವನಿಯನ್ನು ತನ್ನ ಮೌನದಿಂದಲೇ ನಿರಾಕರಿಸಿದಳು. ಮೃತ್ಯು ಮತ್ತೆ ನುಡಿಯಿತು: "ಸತ್ಯವಾನನನ್ನು ಮರಳಿ ಪಡೆಯುವ ಆಶೆ ತಾಳಬೇಡ. ನಿನ್ನ ಗಾಯಗೊಂಡ ಬದುಕಿಗಾಗಿ ಕೆಲವೊಂದು ವರ ಕೊಡುವೆ. ತೆಗೆದುಕೊಂಡು ಹಿಂತಿರುಗು" ಎಂದು. ಆಗ ಮೊದಲ ಬಾರಿಗೆ ಸಾವಿತ್ರಿ ಮಾತನಾಡಿದಳು: "I bow not to thee, O huge mask of Death ... Conscious of immortality I walk — ಓ ಸಾವಿನ ದೊಡ್ಡ ಮುಸುಕೇ ನಿನಗೆ ನಾನು ತಲೆಬಾಗುವುದಿಲ್ಲ; ಅಮೃತತ್ವದ ಅರಿವಿನಿಂದಲೇ ನಾನು ಮುನ್ನಡೆಯುತ್ತಿರುವೆ." ಸತ್ಯವಾನನನ್ನುಳಿದು ಬೇರೇನೂ ತನಗೆ ಬೇಕಾಗಿಲ್ಲವೆಂದು ಸ್ಪಷ್ಟವಾಗಿ ಹೇಳಿದಳು. ಮೃತ್ಯು ಜರಿದು ಮಾತನಾಡಿದ; ಸಾವಿತ್ರಿಯೂ ಅಷ್ಟೇ ಧೈರ್ಯದಿಂದ ಆ ಅಂಧಕಾರದ ಶಕ್ತಿಯನ್ನು ಜರಿದು ನುಡಿದಳು: "ನೀನಾರು ನೀನೀಶ್ವರವೆ? My God is Love and sweetly suffers all— ಪ್ರೇಮವೇ ನನ್ನ ದೇವರು; ಆ ದೇವರೇ

ಸಕಲವನ್ನೂ ಮಧುರವಾಗಿ ಆಳುತ್ತ ತಾಳಿಕೊಳ್ಳುವ. ನೀನು ನಾಶಮಾಡಿದ ಸೃಷ್ಟಿಯನ್ನು ಪ್ರೇಮದ ಬಲದಿಂದ ನಾನು ಪುನಃ ಸೃಷ್ಟಿಸಬಲ್ಲೆ" ಎಂದು. ಆಕೆ ಕೊನೆಗೆ ಇಂತು ನುಡಿದಳು: "ನನ್ನ ಆಯುಷ್ಯ ಭಗವಂತನ ತರಂಗ. ಓ ಮೃತ್ಯುವೇ ನಿನ್ನನ್ನು ಜಯಿಸಲೆಂದೇ ಮಾನವಕುಲವು ಜನ್ಮವೆತ್ತಿದೆ." ಇಲ್ಲಿಗೆ ೨ನೇ ಸರ್ಗ ಮುಗಿಯುತ್ತದೆ. ಆ ಮೂವರ ಪಯಣ ಮಸುಕಿನಲ್ಲಿಯೇ ಸಾಗಿದೆ.

ಅಧ್ಯಾಯ ೧೦ (ಸರ್ಗಗಳು ೪)
ದ್ವಿವಿಧ ಸಂಧಿಪ್ರಕಾಶದ ಅಧ್ಯಾಯ
(The Book of the Double Twilight)

[೧. ಆದರ್ಶದ ಸ್ವಪ್ನಮಯ ಸಂಧ್ಯಾಪ್ರಕಾಶ: The Dream Twilight of the Ideal; ೨. ಮೃತ್ಯುವಿನ ಆಚಾರ ನಿಷ್ಠೆ ಮತ್ತು ಆದರ್ಶದ ಜಂಭ: the Gospel of Death and Vanity of the Ideal; ೩. ಪ್ರೇಮ ಮೃತ್ಯುಗಳ ಸಂಭಾಷಣೆ: The Debate of Love and Death; ೪. ಜಾಗತಿಕ ಸದ್ವಸ್ತುವಿನ ಸ್ವಪ್ನಮಯ ಸಂಧ್ಯಾ ಪ್ರಕಾಶ: The Dream Twilight-of the Earthly Real.]

ಈ ಅಧ್ಯಾಯದಲ್ಲಿ ಮೃತ್ಯು ಮುಂದೆ ಮುಂದೆ ಸಾಗುತ್ತಾನೆ. ಸಾವಿತ್ರಿ ಹಿಂಬಾಲಿಸುತ್ತಾಳೆ. ಆ ಕತ್ತಲೆಯ ಪ್ರದೇಶದಲ್ಲಿ 'a great Negation was the Real's face-ಘನವಾದ ನಿರಾಕರಣೆಯೇ ಸದ್ವಸ್ತುವಿನ ಮುಖವಾಗಿತ್ತು." ಆಗ ಸಾವಿತ್ರಿಗೆ ಅನಿಸಿತು: 'Night is not our beginning nor our end...... by Light we live and to light-

We go-ಅಂಧಕಾರವು ನಮ್ಮ ಆದಿಯೂ ಅಲ್ಲ....ಅಂತ್ಯವೂ ಅಲ್ಲ.......ಪ್ರಕಾಶದಿಂದಲೆ ನಾವು ಬದುಕುತ್ತೇವೆ ಮತ್ತು ಪ್ರಕಾಶಕ್ಕೇನೇ ನಾವು ಹೋಗಿ ತಲುಪುತ್ತೇವೆ" ಎಂಬುದಾಗಿ. ಇಷ್ಟು ಹೊತ್ತಿಗೆ ದೇವತೆಗಳ ಪ್ರಾತಃಸಂಧ್ಯಾಪ್ರಕಾಶವು (a morning Twilight of the gods) ಆ ಕತ್ತಲೆಯು ಮೇಲೆ ಎರಗಿತು. ಸಾವಿತ್ರಿಗೆ ಮಧುರ ಧ್ವನಿಗಳು ಕೇಳ ತೊಡಗಿದವು. ಈ ಮಧುರ ಪ್ರದೇಶದಲ್ಲಿ ಸತ್ಯವಾನನೇ ಆಕರ್ಷಣೆಯು ಕೇಂದ್ರವಾಗಿದ್ದನು. ಊರ್ಧ್ವಲೋಕದ ಶ್ಲಿಯು ಪರತತ್ತ್ವ (the spirit)ವು ಎಲ್ಲವನ್ನೂ ಸಾಕ್ಷಿಯಾಗಿ ನೋಡುತ್ತ ಅದರ ಪರಾತ್ಪರತೆಗಾಗಿ ಬಾಳತೊಡಗಿತು. ಇಲ್ಲಿಗೆ ೧ನೇ ಸರ್ಗ ಮುಗಿಯುತ್ತದೆ.— ೨ನೇ ಸರ್ಗದಲ್ಲಿ ಮೃತ್ಯು ಮತ್ತೆ ಮಾತನಾಡುತ್ತದೆ: "ಎಲೌ ಸಾವಿತ್ರಿಯೇ ಭೂಲೋಕದ ಮೋಹಗಳಿಗೆ ತುತ್ತಾಗಲು ಸತ್ಯವಾನನನ್ನು ಮರಳಿ ಏಕೆ ಕರೆಯುತ್ತೀಯೆ? ಮಾನವೀಯ ಹಂಬಲಗಳನ್ನು ತೊರೆದುಬಿಡು."— ಆಗ ಸಾವಿತ್ರಿ ಮರುನುಡಿದಳು: "my love is not a craving of the flesh.... It came to me from God, to God it returns- ಎಲೈ ತಮೋಬಲನೇ. ನನ್ನ ಪ್ರೇಮ ಭಗವಂತನಿಂದ ಬಂದಿದ್ದು, ಭಗವಂತನೆಡೆಗೇ ಹೊರಟಿದೆ; ಈ ಪ್ರೇಮವು ದೇಹಕ್ಕಾಗಿ ಕಾತರಿಸುವುದಿಲ್ಲ..... I cherish God the Fire and not God the Dream – ಅಗ್ನಿಸ್ವರೂಪನಾದ ದೇವರನ್ನು ನಾನು ಬಯಸುವೆ; ಕೇವಲ ಕನಸಿನ ದೇವರನ್ನು ನಾನು ಬಯಸಿಲ್ಲ"

ಎಂಬುದಾಗಿ. ಆಗ ಮೃತ್ಯು ಇಂತು ಮರುನುಡಿಯಿತು:
"Vain is thy onging to lbuild heaven on earth—
ಭೂಲೋಕದಲ್ಲಿ ಸ್ವರ್ಗ ರಚಿಸುವ ನಿನ್ನ ಹಂಬಲವೆಲ್ಲಾ ಹುಸಿ
ಹಂಬಲ..... ಆದುದರಿಂದ ವಿಧಿಯ ನಿಯಮಕ್ಕೆ ನೀನು ತಲೆ
ಬಾಗಬೇಕು.... The Ideal is a malady of thy mind
ಈ ಆದರ್ಶವೆಂಬುದೆಲ್ಲಾ ನಿನ್ನ ಚಿತ್ತದ ವಿಕಾರವೇ ಸರಿ"
ಇಲ್ಲಿಗೆ ೩ನೇ ಸರ್ಗ ಮುಗಿಯುತ್ತದೆ.

೩ನೇ ಸರ್ಗದಲ್ಲಿ ಸಾವಿತ್ರಿ ಅಮೃತಮಯ ಪ್ರೇಮದ
ಪ್ರತಿನಿಧಿಯಾಗಿ ಮೃತ್ಯುವಿನೊಡನೆ ವಾದಹಾಕುತ್ತಾಳೆ.
ಅವರ ವಾದ-ವಿವಾದದ ಸಾರವು ಇಂತಿದೆ:—

ಪ್ರೇಮ(ಸಾವಿತ್ರಿ): ಎಲೈ ಮೃತ್ಯುವೇ ನಿನ್ನ ಮಾತಿನಲ್ಲಿ ಸತ್ಯದ ಸೋಂಗಿದೆ. ನಿನ್ನದು ಕೊಲ್ಲುವ ಸತ್ಯವದು; ಬದುಕಿಸುವ ಸತ್ಯವು ನನ್ನದಾಗಿದೆ. ಇದುವೇ ಆತ್ಮತತ್ತ್ವ.

ಮೃತ್ಯು(ಯಮ): ಎಲೈ ಸ್ತ್ರೀಯೇ, ನಿನ್ನೀ ಮಾನವೀಯ ಮುಸುಕು ನಿನ್ನ ಚಿತ್ತದ ಚಿತ್ರ. ಆ ದೇವರ ರೂಪವನ್ನೂ ಮುಖವನ್ನೂ ಕಂಡವರಾರು ? ನೀನು ಹೇಳುವ ಆತ್ಮವೆಂಬುದೆಲ್ಲಾ ದೇಹದಿಂದ ಬಂದ ಉತ್ಪತ್ತಿಯೇ ಸರಿ.

ಪ್ರೇಮ :— ಹೌದು, ನಾನು ಮಾನವಳು. ಮನುಕುಲವು ನಿನ್ನನ್ನು ತುಳಿದು ಅಮೃತತ್ವದ

ಶಿಖರಗಳನ್ನು ತಲುಪುವುದು. ನಿರಾಕಾರವಾದ ಆತ್ಮವು ಮಾನವನಲ್ಲಿ ಆಕಾರಗೊಂಡಿತು.

ಮೃತ್ಯು:— ಕಲ್ಪನೆಯಲ್ಲಿ ಮನೆ ಕಟ್ಟಿದ ಓ ಪುರೋಹಿತಳೆ, ಜಡವೇ ಸಮಸ್ತವೂ ಆಗಿದೆ. ನಿನ್ನ ಆತ್ಮವೆಂಬುದು ಸ್ವಪ್ನ. ನಾನು ಕಾಲಸ್ವರೂಪನಾದ ಮೃತ್ಯು. ಎಂಥೆಂಥಾ ಋಷಿಗಳೇ ನನಗೆ ತುತ್ತಾಗಿದ್ದಾರೆ. ಬೇರೆ ಭಗವಂತನೆಲ್ಲಿದ್ದಾನೆ ? ನಾನೇ ದೇವರು.

ಪ್ರೇಮ :— ನನ್ನ ಹೃದಯವು ನಿನ್ನ ಪಾಶಗಳಿಗಿಂತಲೂ ಬಲಿಷ್ಠವಾಗಿದೆ. ವಿಶ್ವದ ದುಃಖವೆಲ್ಲವನ್ನೂ ಅದು ಹೊರಬಲ್ಲದು.

ಮೃತ್ಯು:— ಹಾಗಾದರೆ ನಿನ್ನ ಸಾಮರ್ಥ್ಯವನ್ನು ತೋರಿಸು.

ಪ್ರೇಮ :— ಭಗವಂತನನ್ನು ಟೀಕಿಸುವ ಓ ತಮೋಮೂರ್ತಿಯೆ, ನನ್ನೊಡನೆ ವ್ಯರ್ಥವಾಗಿ ಏಕೆ ಸೆಣಸುತ್ತೀಯೆ ? ಗ್ರಹಗಳೆಲ್ಲಾ ನನ್ನ ಅವಿಶ್ರಾಂತ ಅಗ್ನಿಬಲದಿಂದಲೇ ಬೆಳಗುತ್ತಲಿವೆ. ಸಮಸ್ತವೂ ನನ್ನ ಮುಷ್ಟಿಯಲ್ಲಿ ಹಿಡಿಯಲ್ಪಟ್ಟು ಅದನ್ನೆಲ್ಲಾ ಮೀರಲಾಗುವುದು.

ಇಂತು ವಾಗ್ಬಾಣಗಳಿಂದ ಪ್ರತಿಸ್ಪರ್ಧಿಗಳಾದ ಅವರಿಬ್ಬರಲ್ಲಿ ವಾದ-ವಿವಾದ ನಡೆಯಿತು. (Thus with armed speech the great opponents strove)— ಆ ಮೂವರೂ ಮತ್ತೆ ಮುಂದೆ ಸಾಗಿದರು. ಮೊದಲಿಗಿಂತ ವೇಗವು ಅತಿ ತೀವ್ರವಾಯಿತು. ಸಾವಿತ್ರಿ-ಸತ್ಯವಾನರ ಎದುರಿನಲ್ಲಿಯೇ ಮೃತ್ಯು ಕಳೆಗುಂದುತ್ತಿರುವ ನಕ್ಷತ್ರದಂತೆ ತೋರಿತು. ಸಾವಿತ್ರಿಯ ಆತ್ಮತೇಜವು ಸ್ಪಷ್ಟವಾಗಿ ಹೊಳೆಯುತ್ತಿತ್ತು.

ಹೀಗೆ ಸರ್ಗದ ಆರಂಭಕ್ಕೆ ಒಂದು ಇಳಿಜಾರಾದ ಪ್ರದೇಶಕ್ಕೆ ಅವರು ಬರುತ್ತಾರೆ. ಆಗ ಸಾವಿತ್ರಿ ತನ್ನ ಅವತಾರದ ಉದ್ದೇಶವನ್ನು ಸ್ಪಷ್ಟಗೊಳಿಸುತ್ತಾಳೆ: ತಾನು ಜಗತ್ತಿನ ಅಭೀಪ್ಸೆಯ ಪ್ರತಿನಿಧಿ ಎಂಬುದನ್ನು.

"I am a deputy of the aspiring world,
My spirits liberty 1 ask for all".

ತನಗಿದ್ದ ಆತ್ಮದ ಸ್ವಾತಂತ್ರ್ಯ ಸಕಲರಿಗೂ ಇರಲೆಂದು ಕೇಳುತ್ತಾಳೆ. ಕೊನೆಯಲ್ಲಿ ಆಕೆ ಯಾವ ಉತ್ತರವನ್ನೂ ಕೊಡದೆ ತನ್ನ ತೇಜೋಮಯವಾದ ದಿವ್ಯ ಸ್ವರೂಪವನ್ನು ಪ್ರಕಟಿಸುತ್ತಾಳೆ. ಮೃತ್ಯು ತತ್ತರಿಸುತ್ತಾನೆ. ಮೃತ್ಯುವೂ ದೈವೀಶಕ್ತಿಯ ಒಂದು ಉಪಕರಣ ಮಾತ್ರ ಎಂದು ಸಾವಿತ್ರಿ ಹೇಳುತ್ತಾಳೆ. "Release the soul of the world called Satyavan– ಜಗದಾತ್ಮನಾದ ಸತ್ಯವಂತನನ್ನು ಬಿಡುಗಡೆಗೊಳಿಸು" ಎಂದು ಆಜ್ಞೆ ಮಾಡುತ್ತಾಳೆ. ಮೃತ್ಯು ತನ್ನೆಲ್ಲಾ ಬಲವನ್ನು ಕರೆಯುತ್ತ ಆ ಆಜ್ಞೆಯನ್ನು ಪಾಲಿಸದಿರಲು ಪ್ರಯತ್ನಿಸು

ತ್ತಾನೆ. ಆ ಕರೆಗೆ ಯಾವ ಬಲವೂ ಅವನಲ್ಲಿ ಉಳಿಸುವುದಿಲ್ಲ. 'His body was eaten by light - ಮರ್ತ್ಯನ ದೇಹವನ್ನು ದೇವಪ್ರಕಾಶವು ತಿಂದುಬಿಟ್ಟಿತು. ಸಾವಿನ ನೆರಳು ಶೂನ್ಯದಲ್ಲಿ ಕರಗಿಹೋಯಿತು. 'Satyavan and Savitri were alone — ಆ ದಂಪತಿಗಳು ಮಾತ್ರ ತೇಜೋರೂಪದಲ್ಲಿ ಅಲ್ಲಿ ಉಳಿದರು ಎಂಬಲ್ಲಿಗೆ ೪ನೇ ಸರ್ಗದೊಡನೆ ೧೦ನೇ ಅಧ್ಯಾಯವು ಮುಗಿಯುತ್ತದೆ.

ಅಧ್ಯಾಯ ೧೧ (ಸರ್ಗ ೧)
ಶಾಶ್ವತ ಹಗಲಿನ ಅಧ್ಯಾಯ
(The Book of Ever lasting Day)

[೧. ಶಾಶ್ವತ ಹಗಲು: ಆತ್ಮರೂಪದಲ್ಲಿದ್ದ ಸಾವಿತ್ರಿಯ ಆಯ್ಕೆ ಮತ್ತು ಪರಮಪೂರ್ಣತೆ: The Eternal Day. 'The Soul's Choice And The Supreme Consummation]

ಈ ಅಧ್ಯಾಯದಲ್ಲಿ ಸೂಕ್ಷ್ಮ ಆತ್ಮರೂಪದಲ್ಲಿದ್ದ ಆ ದಿವ್ಯ ದಂಪತಿ ನೇರವಾಗಿ ಭೂಲೋಕಕ್ಕೆ ಬರದೆ ಪರಮೋಚ್ಚ ಪುರುಷೋತ್ತಮನ ಸತ್ಯಲೋಕದಲ್ಲಿ ಪ್ರವೇಶಿಸುತ್ತಾರೆ. ಆ ಪುರುಷೋತ್ತಮನು ಸಾವಿತ್ರಿ-ಸತ್ಯವಾನರಿಗೆ ಪೃಥ್ವಿಯನ್ನು ಅದರ ಪಾಡಿಗೆ ಬಿಟ್ಟುಕೊಟ್ಟು ಅದೇ ಆ ಸತ್ಯಲೋಕದಲ್ಲಿ ಶಾಶ್ವತ ಆನಂದದೊಡನೆ ಬಾಳಲು ಹೇಳುತ್ತಾನೆ. ಎರಡು ಸಲ ಹೇಳುತ್ತಾನೆ. ಆಗ ಸಾವಿತ್ರಿಗೆ ಪ್ರಪಂಚದಲ್ಲಿಯ ಲಕ್ಷೋಪಲಕ್ಷ ಜೀವಿಗಳ ಆರ್ತಸ್ವರ ಕೇಳಿಬರುತ್ತದೆ. ಮೂರನೇ ಸಲವೂ ಭಗವಂತನು ತನ್ನ ಆ ಸತ್ಯಲೋಕದಲ್ಲೇ

ಇರಲು ಮನಸವಲಿಸುತ್ತಾನೆ; ಒರೆಗೆ ಹಚ್ಚುತ್ತಾನೆ. ಆಗ ಸಾವಿತ್ರಿ "Thy Sweetness give me for earth and men-ಭಗವನ್ ನಿನ್ನ ಮಾಧುರ್ಯವನ್ನು ಭೂಲೋಕಕ್ಕಾಗಿ, ಮನುಕುಲಕ್ಕಾಗಿ ಹಂಚಲು ನನಗೆ ನೀಡು" ಎನ್ನುತ್ತಾಳೆ, ಸತ್ಯಲೋಕದಲ್ಲಿಯ ವಾಸದ ಆಮಿಷವನ್ನು ನಿರಾಕರಿಸುತ್ತಾಳೆ. ಪೃಥ್ವಿಯ ಮೇಲೆ ರೂಪಾಂತರ ಸಾಧಿಸಬೇಕಾಗಿದೆಯೆಂದು ಅರಿಕೆಮಾಡಿಕೊಳ್ಳುತ್ತಾಳೆ. ಆಗ ಪರಾತ್ಪರ ಪುರುಷನು "My will is thine, what thou hast chosen I choose All thou hast asked I give to earth and men- ನನ್ನ ಸಂಕಲ್ಪವೇ ನಿನ್ನ ಸಂಕಲ್ಪ, ನಿನ್ನ ಆಯ್ಕೆಯೇ ನನ್ನ ಆಯ್ಕೆ; ನೀನು ಕೇಳಿದ್ದೆಲ್ಲವನ್ನೂ ಭೂಲೋಕಕ್ಕೂ ಮನುಕುಲಕ್ಕೂ ಕೊಡುವೆ" ಎಂದು ಅಭಯದ ಆಶ್ವಾಸನ ನೀಡುತ್ತಾನೆ. ತನ್ನ ಶಕ್ತಿಯನ್ನೇ ನೀಡುತ್ತಾನೆ. ಮರಳಿ ಪೃಥ್ವಿಗೆ ತೆರಳೆಂದು ಆದೇಶವೀಯುತ್ತಾನೆ. ಸಾವಿತ್ರಿ ಮರಳಿ ಸಾಮಾನ್ಯ ಪ್ರಜ್ಞೆಗೆ ಬರುತ್ತಾಳೆ. ಅರಣ್ಯದಲ್ಲಿ ಎಚ್ಚತ್ತ ಪತಿಯ ಜೊತೆಗೆ ಇರುತ್ತಾಳೆ.

ಅಧ್ಯಾಯ ೧೨ (ಸರ್ಗ ೧)

ಮುಕ್ತಾಯ (Epilogue)

[೧. ಭೂಲೋಕಕ್ಕೆ ಪುನರಾಗಮನ: Return to Earth]

ಕೊನೆಯ ಈ ಅಧ್ಯಾಯವು ಮುಕ್ತಾಯದ ಮಂಗಲವನ್ನು ಒಳಗೊಂಡಿದೆ. ಸತ್ಯವಾನನು ನಿದ್ರೆಯಿಂದ ಎಚ್ಚತ್ತವನಂತೆ ಏಳುತ್ತಾನೆ. ಈಗ ಸುತ್ತಲೆಲ್ಲಾ ಕತ್ತಲೆಯಾಗಿದೆ.

ಅರ್ಥಾತ್ ಪ್ರಥಮ ಅಧ್ಯಾಯದ ಪ್ರಥಮ ಸರ್ಗದಲ್ಲಿ ಹೇಳಿದ ದಿನ ಕಳೆದು ಸಂಜೆಯಾಗಿ ಕತ್ತಲೆ ಆವರಿಸಿದೆ. ಈರ್ವರೂ ಮರಳಿ ತಪೋವನಕ್ಕೆ ಹೊರಡುತ್ತಾರೆ. "Let us give joy to all, for joy is ours ನಮ್ಮೀ ಹರುಷವನ್ನ ಎಲ್ಲರಿಗೂ ಹಂಚಿಕೊಡುವಾ" ಎಂದು ಸಾವಿತ್ರಿ ತನ್ನ ಪ್ರಿಯ ಪತಿಗೆ ಹೇಳುತ್ತಾಳೆ. ಇವರಿಬ್ಬರು ಅರ್ಧದಾರಿ ಬರುವಷ್ಟರಲ್ಲಿ ತಪೋವನದ ನಿವಾಸಿಗಳು ಹಾಗೂ ಸತ್ಯವಾನನ ತಾಯ್ತಂದೆಗಳು ಕಾತರರಾಗಿ ಅವರನ್ನೇ ಹುಡುಕುತ್ತ ಹೊರಟಿರುತ್ತಾರೆ. ಈಗ ದ್ಯುಮತ್ಸೇನನ ಕಣ್ಣು ಸ್ವಚ್ಛವಾಗಿ ಕಾಣುತ್ತಿವೆ. ಅವರೆಲ್ಲರ ಸುಖದ ಸಂಮಿಲನವಾಗುತ್ತದೆ. ಒಬ್ಬ ಹಿರಿಯ ತಪಸ್ವಿ 'ಇದೇನು ಸಾವಿತ್ರಿ, ಯಾವ ಮಂಗಲತರ ಮನ್ವಂತರವನ್ನು ನಮಗಾಗಿ ಒಡಮೂಡಿಸಿದೆಯಮ್ಮಾ?' ಎಂದು ಕೇಳಿದ್ದಕ್ಕೆ ಆಕೆ ಇಂತು ಪಡಿನುಡಿಯುತ್ತಾಳೆ:

"That to feel love and oneness is to live
Is ali the truth I know or Seek"

ಪ್ರಾಜ್ಯರೇ. ಪ್ರೇಮವನ್ನೂ ಏಕತೆಯನ್ನೂ ಅನುಭವಿಸುವುದೇ ಜೀವನವೆನಿಸುತ್ತದೆ ಎಂಬೀ ಸತ್ಯವನ್ನು ಮಾತ್ರ ನಾನು ಬಲ್ಲೆ; ಅದನ್ನೇ ಅರಸುತ್ತೇನೆ. ಇದುವೇ ಸಮಸ್ತ ಸತ್ಯ" ಇಲ್ಲಿಗೆ ಕಥೆ ಮುಗಿಯುತ್ತದೆ. ಕೊನೆಯ ಸಾಲು ಇಂತಿದೆ "And in her bosom nursed a greater dawn" ಆಕೆಯ ಹೃದಯದಲ್ಲಿ ಘನತರ ಅರುಣೋದಯವೊಂದನ್ನು ಆಕೆ ಲಾಲಿಸುತ್ತಿದ್ದಳು.

೪. ನೂರೊಂದು ನಲ್ನುಡಿಗಳು

[ಈ ಪ್ರಕರಣದಲ್ಲಿ ಶ್ರೀ ಅರವಿಂದರ ಈ ಕಾವ್ಯದಿಂದ ಆಯ್ದ ೧೦೧ ಶ್ರೀ ವಚನಗಳನ್ನು ಏಳು ಭಾಗಗಳಲ್ಲಿ ವಿಭಾಗಿಸಿ ಕೊಡಲಾಗಿದೆ. ಅವರ ಆಂಗ್ಲ ನುಡಿಗಳಿಗೆ ಇದು ಕನ್ನಡದ ಕನ್ನಡಿ.]

i) ದೈವಿಕತೆ

೧. ಭಗವತ್ ಸ್ಪರ್ಶವೊಂದಿದ್ದರೆ ಎಲ್ಲವನ್ನೂ ಮಾಡಲಾಪುದು.

೨. ದೇವರು ಪೃಥ್ವಿಯನ್ನು ಹುಟ್ಟಿಸಿದ್ದಾನೆ; ಆದ್ದರಿಂದ ಪೃಥ್ವಿಯು ತನ್ನಲ್ಲಿ ತನ್ನ ದೇವರನ್ನು ಹುಟ್ಟಿಸಿಕೊಳ್ಳಬೇಕು. ಪೃಥ್ವಿ ತನ್ನ ಎದೆಯಲ್ಲಿ ಅಡಗಿ ಇದ್ದುದನ್ನು ಪ್ರಕಟಗೊಳಿಸಬೇಕು.

೩. ಅಸ್ತಿತ್ವದ ಪ್ರಭು ನಮ್ಮಲ್ಲಿ ಅವಿತುಕೊಂಡಿದ್ದಾನೆ ಮತ್ತು ತನ್ನ ಸ್ವಂತ ಶಕ್ತಿಯೊಂದಿಗೇನೇ ಕಣ್ಣುಮುಚ್ಚಾಲೆ ಆಟವಾಡುತ್ತಿದ್ದಾನೆ.

೪. ನಾವು ದೇವರ ಮಕ್ಕಳಿದ್ದು ಅವನಂತೆಯೇ ಆಗಲೇಬೇಕು; ಆತನ ಮಾನವೀಯ ಅಂಶವಾದ ನಾವು

ದಿವ್ಯತೆಯಲ್ಲಿ ಬೆಳೆಯಬೇಕು-ನಮ್ಮ ಜೀವನವೋ ಪರಿಹಾರದ ಬೇಗದ ಕೈ ಹುಡುಕಹೊರಟಿದ್ದು ದೇವರೊಡನೆ ವಿರೋಧಾಭಾಸವಾಗಿ ಬಿಟ್ಟಿದೆ.

೫. ದೇವರು ಬಾಹ್ಯದಲ್ಲಿ ತನ್ನನ್ನು ಪ್ರಕಟಿಸಿಕೊಂಡಿರುವುದೇ ಈ ಪ್ರಪಂಚವೆಂದೆನಿಸಿದೆ.

೬. ದೇವರಲ್ಲಿ ಅಡಗಿಕೊಂಡು ಇರತೊಡಗಿದ ಪ್ರಪಂಚವು ಪ್ರಕಟ ದೇವತ್ವದೆಡೆಗೆ ನಿಧಾನವಾಗಿ ಪಯಣಗೈಯುತ್ತಿದೆ: ನಮ್ಮ ಅಪೂರ್ಣತೆ ಪೂರ್ಣತ್ವದೆಡೆಗ ಕ್ರಮಿಸುತ್ತದೆ: ದೇಹವೆಂದರೆ ರೆಕ್ಕೆಯನ್ನು ಪಡೆವ ಮುನ್ನ ಆತ್ಮನೆಂಬ ಪತಂಗವು ಧರಿಸಿದ ಕೋಶಾವಸ್ಥೆಯಾಗಿದೆ.

೭. ಎಲ್ಲ ವಿರೋಧಗಳೂ ಭಗವಂತನ ಮುಖದ ನೋಟಗಳೇ.

೮. ಯಾವನಿಗೆ ದೇವರೇ ನಾಯಕನಾಗಿರುವನೋ ಅಂಥವನ ಸೋಲು ಸೋಲಲ್ಲ.

೯. ಯಾವನು ಈ ಜಗವನ್ನು ರೂಪಿಸಿರುವನೋ ಅವನೇ ಎಂದೆಂದಿಗೂ ಇದರ ಪ್ರಭುವಾಗಿದ್ದಾನೆ.

೧೦ .... ವಿಶ್ವಾತ್ಮ ತತ್ತ್ವವು ವಿಶ್ವತೋಮುಖವಾಗಿದೆ: ದೈವದ ನಿಶ್ಚಿತ ಪ್ರಯಾಣವನ್ನು ಒಂದೇ ಒಂದು ಸ್ಫುರಣವು ಪಲ್ಲಟಿಸಬಲ್ಲದು.

೧೧. ದೇವರು ಮಾನುಷ ಮನವನ್ನು ತಾನು ಹೊಂದುತ್ತಲೂ ಮರ್ತ್ಯಲೋಕದ ಅಜ್ಞಾನವನ್ನು ತನ್ನ

ನಿಲುವಂಗಿಯನ್ನಾಗಿ ತೊಡುತ್ತಲೂ ಕುಬ್ಜ ವಾಮನ ರೂಪದಲ್ಲಿಯೆ ತ್ರಿವಿಕ್ರಮನಾಗಬಲ್ಲನಾದರೆ ಮಾತ್ರ ಅವನು ಮಾನವನಿಗೆ ದೇವನಾಗಿ ಬೆಳೆಯಲು ನೆರವಾಗ ಬಲ್ಲ.

೧೨. ಹಿರಿಯ ದೇವತೆಗಳು ಮಾನವಹೃದಯಗಳಲ್ಲಿಯ ವ್ಯಥೆಯನ್ನು ವಿಶ್ವದಲ್ಲಿ ರಾಜಮಾರ್ಗ ರಚಿಸಲು ಹರಿತಾದ ಕೊಡಲಿಯಂತೆ ಬಳಸುತ್ತಾರೆ; ತಮ್ಮ ಕ್ರೂರ ಕಾರ್ಯವನ್ನು ಒಂದೇ ಒಂದು ಕ್ಷಣದಲ್ಲಿ ನೆರವೇರಿಸುವ ಉದ್ದೇಶಕ್ಕಾಗಿ ಅವರು ಮಾನವರ ರಕ್ತವನ್ನೂ ಅಶ್ರುಗಳನ್ನೂ ಸೂರೆಗೈಯುತ್ತಾರೆ.

೧೩. ನನ್ನ ದೇವರು ಸಂಕಲ್ಪ ರೂಪ ತಾಳಿ, ತನ್ನ ಪಥಗಳಲ್ಲಿ ವಿಜಯಿಯಾಗುತ್ತಾನೆ; ಹಾಗೂ ನನ್ನ ದೇವರು ಪ್ರೇಮ ರೂಪ ತಾಳಿ, ಬಂದ ದುಃಖವನ್ನೆಲ್ಲಾ ಮಧುರವಾಗಿ ತಾಳಿಕೊಳ್ಳುತ್ತಾನೆ.

೧೪. ದೇವರು ಪೃಥಿವಿಯಲ್ಲಿ ಹುಟ್ಟಿಬಂದು ಮಾನವನಂತೆ ಇರಬೇಕು; ಅಂದರೇನೇ ಮಾನವನು ಮಾನವೀಯತೆ-ಯೊಳಗಿಂದಲೇನೇ ದೇವನಾಗಿ ಕೂಡ ಬೆಳೆದಾನು.

ii) ಭೂಲೋಕ–ಸ್ವರ್ಲೋಕ

೧೫. ಅನಂತವು ಸಾಂತವನ್ನು ತನ್ನ ತೋಳತೆಕ್ಕೆಯಲ್ಲಿ ಹಿಡಿದಿದೆ; ಕಾಲವು ಪ್ರಕಟಿತ ನಿತ್ಯತೆಯತ್ತ ಪಯಣಗೈಯುತ್ತಿದೆ.

೧೬. ಗುಪ್ತಕೃಪೆಯ ಆಕಸ್ಮಿಕ ರಹಸ್ಯವೊಂದು ಆ ರಕ್ತ ಇಚ್ಛೆಯುಳ್ಳ ನಮ್ಮೀ ಪೃಥ್ವಿಯನ್ನು ಸುವರ್ಣಮಯಗೊಳಿಸುತ್ತ ತಾನೆ ಅರಳುತ್ತದೆ.

೧೭. ಸ್ವರ್ಗೀಯ ಜ್ಯೋತಿಯೊಂದರಿಂದ ನಾವು ಅವಳ (ಭೂಮಿತಾಯಿಯ) ಬಳಿಗೆ ಬಂದೆವು; ಜ್ಯೋತಿಯಿಂದಲೇ ನಾವು ಜೀವಿಸಿದ್ದು ಜ್ಯೋತಿಯ ಕಡೆಗೇನೇ ಸಾಗುತ್ತೇವೆ.

೧೮ ನಮ್ಮ ತಿಳಿವಳಿಕೆಗಳ ಆಚೆಗಿದ್ದುದನ್ನೆಲ್ಲ ತಿಳಿದುಕೊಳ್ಳುವಂಥ ಶಕ್ತಿಯೊಂದು ಒಳಗುಂಟು. ನಮ್ಮ ವಿಚಾರಗಳಿಗಿಂತಲೂ ನಾವು ದೊಡ್ಡವರಾಗಿದ್ದೇವೆ. ಒಮ್ಮೊಮ್ಮೆ ಪೃಥ್ವಿ ಆ ಕಣಸನ್ನು ಇಹದಲ್ಲಿ ಬಿಚ್ಚಿ ತೋರಿಸುತ್ತದೆ.

೧೯ ನಮ್ಮ ಜೀವಾತ್ಮದ ವಿಶ್ರಾಮವು ಅನಂತದಲ್ಲಿದೆ; ಅದು ಮುಗಿಯಲಾರದು. ಪರಮಜೀವನವೇ ಅದರ ಕೊನೆ.

೨೦ ಅಮರ ಪ್ರೇಮದ ಚೈತನ್ಯವು ನಮ್ಮೊಳಗೆ ಮೃದಾಳಿ ಮನುಕುಲವನ್ನು ಅಪ್ಪಿಕೊಳ್ಳಲು ತನ್ನ ತೋಳ್ಗಳನ್ನು ಚಾಚುತ್ತಿದೆ.

೨೧. ... ದೇವ ಮುಹೂರ್ತವು ಯಾವಾಗ ಬಳಿಸಾರುವುದೋ ಆಗ, ಮಹಾಕಾಳೀಮಾತೆ ಕಾಲಗರ್ಭದಲ್ಲಿ ಜನಿಸಿ ಬರುವಳು ಮತ್ತು ಭಗವಂತನು ಮಾನವದೇಹದ ಮಣ್ಣಿನೊಳಗಿಂದ ನಮ್ಮ ಮಾನವೀಯ ಪ್ರಾಣಗಳಿಂದ

ಸಜ್ಜುಗೊಳಿಸಲ್ಪಟ್ಟ ರೂಪಗಳಲ್ಲಿ ಮೂಡಿಬರುವನು. ಆಗ ತಾನೆ ಪರಮಸತ್ಯವು ಮನುಸಂತಾನಕ್ಕೆ ದತ್ತಿಯಾಗಿ ಕೊಡಲ್ಪಡುವುದು.

೨೨ ಮಾನವೀಯ ಆಯುಷ್ಯಕಾಲದಲ್ಲಿ ನಿನ್ನ ಸಮಸ್ತಕಾರ್ಯ ಮುಗಿದಾಗ ಪೃಥ್ವಿಯ ಮನವು ಪ್ರಕಾಶದ ತವರ್ಮನೆಯಾಗುವುದು, ಪೃಥ್ವಿಯ ಪ್ರಾಣವು ಸ್ವರ್ಲೋಕಾಭಿಮುಖವಾಗಿ ಬೆಳೆದ ವೃಕ್ಷವಾಗುವುದು ಹಾಗೂ ಪೃಥ್ವಿಯ ದೇಹವು ಭಗವಂತನ ಬೀಡಾಗುವುದು.

೨೩. ಮಾನವನು ಪ್ರಪಂಚದ ಜೀವನದಲ್ಲಿ ದೇವರ ಕನಸುಗಳನ್ನು ಈಡೇರಿಸುತ್ತಾನೆ.

೨೪. ಸ್ವರ್ಲೋಕದ ಸಂಸ್ಪರ್ಶವು ಭೂಲೋಕವನ್ನು ರಹಿತಗೊಳಿಸದೆ ಅದರ ಇಚ್ಛೆಗಳನ್ನು ಈಡೇರಿಸುತ್ತದೆ.

೨೫. ಭೂದೇವಿ ತನ್ನ ಮೊದನೊದಲಿನ ಸೊಬಗನ್ನು ಪ್ರಸನ್ನತೆಯನ್ನೂ ಇನ್ನೂವರೆಗೆ ಕಾಯ್ದುಕೊಂಡಿದ್ದಾಳೆ, ವೈಭವ ಸೌಂದರ್ಯಗಳು ಇನ್ನೂ ಆಕೆಯ ಸೊತ್ತುಗಳಾಗಿವೆ; ಆದರೆ ದೈವೀ ಅಂತರ್ಯಾಮಿ ಒಳಗೆ ಮುಚ್ಚಿಕೊಂಡೇ ಇದ್ದಾನೆ.

೨೬. ಭೂಲೋಕವು ಪರಿಶುದ್ಧವಾಗಿದ್ದರೆ ದೇವಲೋಕದ ಹರುಷಗಳು ಭೂಲೋಕದ ಹರುಷಗಳೂ ಆಗಬಹುದಾಗಿತ್ತು.

೨೭. ಭೂಲೋಕವು ಸ್ವರ್ಲೋಕದ ಪ್ರಕಾಶದೆಡೆಗೆ ದೃಷ್ಟಿಯನ್ನು ಚೆಲ್ಲುತ್ತ ತನ್ನ ಏಕಾಂತದ ಮೊರೆಗೆ ಆ ಸ್ವರ್ಲೋಕ ಓಗುಡುವುದನ್ನು ಆಲಿಸಬಲ್ಲುದಾದರೆ ಉಭಯ ಲೋಕಗಳ ಮಿಲನವು ವ್ಯರ್ಥವಾದುದಲ್ಲ. ಅದರಂತೆ ಸ್ವರ್ಲೋಕದ ಸ್ಪರ್ಶವೂ ಒಂದು ಜಾಲವಲ್ಲ.

೨೮. ಸ್ವರ್ಲೋಕವು ತನ್ನ ಹರ್ಷನಿರ್ಭರದಲ್ಲಿ ಪರಿಪೂರ್ಣ ಭೂಲೋಕದ ಕನಸನ್ನು ಕಾಣುತ್ತದೆ; ಹಾಗೂ ಭೂಲೋಕವು ತನ್ನ ದುಃಖದಲ್ಲಿ ಪರಿಪೂರ್ಣ ಸ್ವರ್ಲೋಕದ ಕನಸನ್ನು ಕಾಣುತ್ತದೆ.

೨೯. ಪ್ರೇಮವು ತಾನು ಭೂಲೋಕದಲ್ಲಿ ವಾಸಿಸುವುದನ್ನು ನಿಲ್ಲಿಸಬಾರದು; ಏಕೆಂದರೆ ದ್ಯಾವಾ-ಪೃಥಿವಿಗಳನ್ನು ಜೋಡಿಸುವ ಉಜ್ವಲ ಕೊಂಡಿಯೇ ಪ್ರೇಮವು, ಪರಾತ್ಪರ ಶಕ್ತಿ ಬಹುದೂರದ ಆಚೆಯ ಲೋಕದಿಂದ ಕಳಿಸಿದ ದೂತನೇ ಪ್ರೇಮವು. ಕೈವಲ್ಯವನ್ನು ಭೋಗಿಸುವ ಬಾಧ್ಯತೆ ಮಾನವನಿಗೆ ದೊರೆತಿದ್ದು ಅದರ ಹೆಸರೇ ಪ್ರೇಮ.

೩೦. ದೇವಲೋಕದ ರೂಪರೇಷೆಯ ಒಂದು ತುಣುಕು ಇಲ್ಲಿ ದೊರೆತಿದೆ; ಇಲ್ಲದಿದ್ದರೆ ಮಹತ್ತರ ಜೀವನಕ್ಕಾಗಿ ನಮ್ಮಲ್ಲಿ ಆಸೆಯೇ ಹುಟ್ಟುತ್ತಿರಲಿಲ್ಲ ಹಾಗೂ ಆನಂದೋತ್ಕರ್ಷವೂ ವೈಭವವೂ ಇರುತ್ತಲೇ ಇರಲಿಲ್ಲ.

೩೧. ನಾವು ಆಲೋಚಿಸಿ ಕಂಡುದಕ್ಕಿಂತ ಬೇರೆಯಾಗಿಯೇ ಈ ಜಗವಿದೆ. ನಮ್ಮ ಬಾಳುಗಳು ನಾವು ಕನಸು ಕಂಡುದಕ್ಕಿಂತ ಹೆಚ್ಚು ಆಳವಾದ ರಹಸ್ಯವಾಗಿವೆ. ನಮ್ಮ ಮನಗಳೋ ದೇವರೊಡನೆ ಮೇಲಾಟವಾಡುವ ಸ್ಪರ್ಧಾಳುಗಳಾಗಿವೆ ಹಾಗೂ ನಮ್ಮ ಜೀವಾತ್ಮಗಳೆಂದರೆ ಪುರುಷೋತ್ತಮನು ಕಳುಹಿದ ಪ್ರತಿನಿಧಿಗಳಾಗಿವೆ.

೩೨. ಎತ್ತರದಲ್ಲಿರುವ ದೇವತೆಗಳು ಮಾನವನನ್ನು ನಿಟ್ಟಿಸಿ ನೋಡುತ್ತ ಕಾವಲಾಗಿರುತ್ತ ಬೇಕಾದುದನ್ನು ಆಯ್ದುಕೊಳ್ಳುತ್ತಾರೆ; ಇಂದಿನ ಅಸಾಧ್ಯತೆಗಳೇ ನಾಳಿನ ಅಡಿಗಲ್ಲು.

೩೩. ಪೃಥಿವಿ ತನ್ನನ್ನೆ ತಾನು ಪರಿವರ್ತಿಸಿಕೊಳ್ಳುತ್ತ ದೇವಲೋಕಕ್ಕೆ ಸಮಾನವಾಗಬೇಕು ಇಲ್ಲವೇ ದೇವಲೋಕವೇ ಪೃಥಿವಿಯ ಮರ್ತ್ಯ ಅವಸ್ಥೆಯಲ್ಲಿ ಇಳಿದು ಬರಬೇಕು.

೩೪. ಆತ್ಮವು ಸ್ವರ್ಲೋಕವನ್ನು ಗೆಲ್ಲಲು ಭೂಲೋಕವನ್ನು ಪಾವಟಿಗೆಯನ್ನಾಗಿ ಮಾಡಿಕೊಂಡು ಅದೇ ಸ್ವರ್ಲೋಕದ ಸಾಂತ ಸೀಮೆಗಳ ಅಚೆಗೆ ಇರುವುದನ್ನೆಲ್ಲ ಕಂಡುಕೊಂಡಿತು. ಅಜ್ಞೇಯದತ್ತಣಿಂದ ಬರುವ ಮಹಾಪ್ರಕಾಶವೊಂದನ್ನು ಕೂಡಿಕೊಂಡಿತು ಹಾಗೂ ಪರಾತ್ಪರದ ಕರ್ಮವಲಯವನ್ನು ಕನಸಿನಲ್ಲಿ ಕಂಡಿತು.

iii) ಆತ್ಮದ ಅಭೀಪ್ಸೆ ಮತ್ತು ಅಂತಃಸತ್ತ್ವ

೩೫. ದೈವೀ ಆನಂದ ಮತ್ತು ಏಕತೆ ನಮ್ಮ ಅಂತಃಸ್ಥ ಬಾಧ್ಯತೆಯಾಗಿವೆ.

೩೬. ನಿನ್ನ ಹೃದಯದ ಸ್ಪಂದನೆಗಳನ್ನು ಜಯಿಸು. ನಿನ್ನ ಹೃದಯವು ದೇವರಲ್ಲಿಯೆ ಮಿಡಿಯಲಿ.

೩೭. ಆಗಿಹೋಗುವ ಆಕಾರಗಳಲ್ಲಿ ಕೆಲವನ್ನು ಹಿಡಿಯುವುದು, ಕಾಲಕೃತ ಸಂಗತಿಗಳಲ್ಲಿ ಶಾಶ್ವತತೆಯನ್ನು ಸ್ಪರ್ಶಿಸುವುದು—ಇದುವೆ ಇಲ್ಲಿಯ ಎಲ್ಲಾ ಪೂರ್ಣತೆಯ ನಿಯಮವಾಗಿದೆ.

೩೮. ಏನು ಬರಲಿರುವುದೋ ಅದು ಮಾನವನ ಅಂತರಂಗದಲ್ಲಿ ಹೇಗೋ ಹಾಗೆ ಅವನ ಗೃಹದಲ್ಲೂ ವಾಸವಾಗಿರುತ್ತದೆ; ಅವನು ವಿಶ್ವವನ್ನು ತನ್ನ ಆಡುಂಬೊಲವನ್ನಾಗಿ, ತನ್ನ ಅದ್ಭುತಕೃತಿಗಳ ಮಲ್ಲಸಾಲೆಯನ್ನಾಗಿ ಮಾಡಿದ್ದಾನೆ.

೩೯. ಆತ್ಮದ ಹಿರಿಮೆಯೆ ನಮ್ಮ ಕಾಲರಹಿತ ಉಗಮವಾಗಿದೆ; ಅದುವೆ ಅನಂತ ಕಾಲದಲ್ಲಿ ನಮ್ಮ ಕಿರೀಟವಾಗುವುದು.

೪೦. ದೇಹಕ್ಕಿರುವ ನಿಯಮಗಳು ಆತ್ಮದ ಶಕ್ತಿಗಳನ್ನು ಬಂಧಿಸಲಾರವು.

೪೧. ರೂಪರಹಿತ ಆತ್ಮಶಕ್ತಿ ನನ್ನಲ್ಲಿ ತನ್ನ ಆಕಾರ ಬರೆಯಿತು; ನಾಮರಾಹಿತ್ಯವೂ ಗುಪ್ತನಾಮವೂ ನನ್ನಲ್ಲಿ ಉಂಟು.

೪೨. ಜೀವಿಸುವುದೂ ಪ್ರೀತಿಸುವುದೂ ಅನಂತಕೋಟಿಯು ಚಿಹ್ನಗಳಾಗಿವೆ.

೪೩. ಹೌದು, ದೇವರ ಸೂರ್ಯನ ಬಳಿಸಾರಲು ಸುಖ ಮಯ ಮಾರ್ಗಗಳುಂಟು; ಆದರೆ ಸೂರ್ಯಪ್ರಕಾಶಿತ ಪಥವನ್ನು ತುಳಿವವರು ಎಲ್ಲಿಯೋ ಕೆಲ ಜನ, ಅಂತ ರಂಗದಲ್ಲಿ ಪರಿಶುದ್ಧರಾದವರೇ ಪ್ರಕಾಶದಲ್ಲಿ ನಡೆಯ ಬಲ್ಲರು.

೪೪. ಸ್ವರ್ಗೀಯ ಹರ್ಷ-ಸಮಾಧಾನಗಳು ಉಕ್ಕೇರಿಬಂದಾಗ ಪ್ರಾಣವು ಅಂತಃಸ್ಥ ದೇವತ್ವಕ್ಕೆ ತಲೆಬಾಗುತ್ತ ತನ್ನ ಸರ್ವಸ್ವವನ್ನೆಲ್ಲಾ ಸಂತೋಷ ನಿರ್ಭರದ ರೂಪದಲ್ಲಿ ಅರ್ಪಿಸುತ್ತದೆ; ಆಗ ಆತ್ಮವು ಪರಮಸುಖಕ್ಕೆ ತನ್ನನ್ನು ತೆರೆದಿಟ್ಟುಕೊಳ್ಳುತ್ತದೆ.

೪೫. ಜ್ಯೋತಿಯು ಮೆಲ್ಲಮೆಲ್ಲನೆ ಪೂರ್ವ ದಿಕ್ಕಿನಲ್ಲಿ ಹೆಚ್ಚು ಹೆಚ್ಚು ದೊಡ್ಡದಾಗುತ್ತದೆ: ಜಗತ್ತು ಮೆಲ್ಲಮೆಲ್ಲನೆ ದೇವಮಾರ್ಗದಲ್ಲಿ ಮುನ್ನಡೆಯುತ್ತದೆ.

೪೬. ಒಂದು ಪ್ರಾರ್ಥನೆ, ಒಂದು ಕೃತಿರತ್ನ, ಒಂದು ರಾಜ ವಿಚಾರ ಇವು ಮಾನವನ ಸಾಮರ್ಥ್ಯವನ್ನು ಪರಾತ್ಪರ ಶಕ್ತಿಯೊಡನೆ ತಳಕು ಹಾಕುವವು. ಆಗ ಪವಾಡವೇ ನಿತ್ಯನಿಯಮವೆನಿಸುವುದು. ಒಂದೇ ಒಂದು ಮಹಾ ಕ್ರಮ ಕೃತಿಯು ಘಟನೆಗಳ ಕ್ರಮಗತಿಯನ್ನೆ ಬದ ಲಿಸಬಲ್ಲದು; ಏಕಾಂತದ ಏಕಾಕಿ ವಿಚಾರವು ಸರ್ವ ಸಮರ್ಥವಾಗುತ್ತದೆ.

೪೭. ಓ ಆತ್ಮನೆ ಜಾಗ್ರತನಾಗು. ಕಾಲ-ಮರಣಗಳನ್ನು ಜಯಿಸು.

೪೮. ನಿನ್ನ ಚೈತನ್ಯವನ್ನು ಹಿಡಿದುಗೊಳಿಸುವ ಒಂದೇ ಒಂದು ವರವನ್ನು ಕೋರೈಸು; ನಿನ್ನ ವಂಶವನ್ನು ಎತ್ತರಿಸುವ ಒಂದೇ ಒಂದು ವರವನ್ನು ಹಾರೈಸು.

೪೯. ಆತ್ಮತತ್ತ್ವದ ಬಲಿಷ್ಠತೆ ತನ್ನ ಮುಸುಕನ್ನು ಹರಿದೊಗೆವುದು; ಜಗದ ಮಾರ್ಗಕ್ರಮವನ್ನು ರೂಪಿಸುವಾಗ ಅದರ ಹಿರಿಮೆಯು ಅನುಭವವಾಗುವುದು.

೫೦. ಆತ್ಮನ ಕಣ್ಣುಗಳು ಪ್ರಕೃತಿಯ ಕಣ್ಣುಗಳ ಮುಖಾಂತರ ನೋಡುವವು; ಆತ್ಮಶಕ್ತಿಯು ಪ್ರಕೃತಿಶಕ್ತಿಯ ಸ್ಥಳವನ್ನೇ ತೆಗೆದುಕೊಳ್ಳುವುದು.

೫೧. ತೊಳಲಾಡುವ ಈ ಜಗದ ಗೊಡವೆಯನ್ನೆ ಬಿಟ್ಟುಕೊಟ್ಟರೂ ಒಬ್ಬನೇ ಒಬ್ಬ ಮಾನವನ ಪರಿಪೂರ್ಣತೆ ಸಹ ಜಗವನ್ನು ರಕ್ಷಿಸಬಲ್ಲದು.

೫೨. ಒಮ್ಮೊಮ್ಮೆ ಒಂದು ಜೀವಾತ್ಮದ ಆಯುಷ್ಯದಲ್ಲಿ ಪೃಥ್ವಿಯು ದೈವಬಲವನ್ನು ತುಂಬಲಾಗುತ್ತದೆ. ಆ ಜೀವಾತ್ಮವು ಕಾಲಸೀಮಿತ ಬಲಗಳಿಂದ ನೆರವನ್ನು ಕೇಳಿಕೊಳ್ಳುವುದಿಲ್ಲ.

೫೩. ಆತ್ಮದ ಮಿಂಚುಗಳೊಂದಿಗೆ ಗರ್ಜಿಸುವ ಓ ಮೇಘನಾದನೆ, ಕತ್ತಲೆಗೂ ಸಾವಿಗೂ ನಿನ್ನ ರವಿತೇಜವನ್ನು ಕೊಡಬೇಡ; ನಿನ್ನ ಜ್ಞಾನದ ಸ್ಥಿರಶಾಸನವನ್ನು ವಿಸ್ತ

ವ್ಯಾಪಿಯಾಗಿ ಇರುವ ನಿನ್ನ ಗುಪ್ತ ಪ್ರೇಮದ ರಾಯಸವನ್ನು ಕೈವಶಪಡಿಸಿಕೋ.

೫೪. ಓ ಜೀವಾತ್ಮನೆ, ಕಾಲರಹಿತವಾದ ನಿನ್ನ ಆತ್ಮತತ್ತ್ವದಲ್ಲಿ ಮೇಲೇರು; ದೈವರೇಷೆಗಳನ್ನು ಅರಿಸಿಕೊಂಡು ಕಾಲಪುರುಷನ ಮೇಲೆ ನಿನ್ನ ಸಂಕಲ್ಪದ ಮುದ್ರೆಯೊತ್ತು.

೫೫. ನೀನು ಏನೂ ಆಗದಿರಲು, ಯಾರೂ ಆಗದಿರಲು ಒಪ್ಪಿಕೋ; ಕಾಲರಾಯನ ಕೃತಿಯನ್ನು ವಿಸರ್ಜಿಸಿಬಿಡು; ನಿನ್ನ ಚಿತ್ತವನ್ನು ಚೆಲ್ಲಿಬಿಡು, ನಾಮ-ರೂಪಗಳತ್ತಣಿಂದ ಹಿಂದಕ್ಕೆ ಹೆಜ್ಜೆಯಿಡು, ದೇವರೊಬ್ಬನೇ ಇದ್ದುದು ಎದ್ದು ತೋರುವಂತೆ ನಿನ್ನನ್ನು ಇಲ್ಲದಂತೆ ಮಾಡಿಕೋ.

೫೬. ಸಣ್ಣದೊಂದು ಬಡಕಲು ಬೀಜದಲ್ಲಿ ಹೆಮ್ಮರವೊಂದು ಅವಿತುಕೊಂಡಿರುತ್ತದೆ; ಚಿಕ್ಕದೊಂದು ಜನನಶೀಲ ಜೀವಾಣುವಿನಲ್ಲಿ ಮನೀಷಿಯೊಬ್ಬ ಅಡಗಿರುತ್ತಾನೆ; ಒಂದು ಸಣ್ಣ ವೀರ್ಯಬಿಂದುವಿನಲ್ಲಿ ಚಿಕ್ಕದೊಂದು ಮಹಾಭೂತವೇ ಅಡಕವಾಗಿದ್ದು ಅದುವೇ ಬೆಳೆದು ಜೀತಾರನಾಗುತ್ತದೆ. ಋಷಿಯಾಗುತ್ತದೆ.

೫೭. ಗುಪ್ತ ಆತ್ಮವೊಂದು ಹಿಂದಿದ್ದು ಎಲ್ಲಕ್ಕೂ ಆಧಾರವಾಗಿರುತ್ತದೆ; ನಮ್ಮ ಅಜ್ಞಾನಮಯ ಜೀವನಕ್ಕೆ ಆ ಆತ್ಮವು ಪ್ರಭುವಾಗಿಯೂ ಸಾಕ್ಷಿಯಾಗಿಯೂ ಇರುತ್ತ.

ಪುರುಷನ ದೃಷ್ಟಿಯನ್ನೂ ಪ್ರಕೃತಿಯ ಪಾತ್ರವನ್ನೂ ಒಪ್ಪಿಕೊಳ್ಳುತ್ತದೆ.

೫೮. ವಸ್ತುಗಳ ಮೂಲದಲ್ಲಿ ಗುಪ್ತ ಆನಂದವೊಂದುಂಟು. ಮೂಕ **ಸಂತೋಷವೊಂದು ಕಾಲಪುರುಷನ** ಅಸಂಖ್ಯಾಕ ಕೃತಿಗಳನ್ನು ಹೊಂದಿಕೊಂಡಿರುತ್ತದೆ: ವಸ್ತುಗಳಲ್ಲಿ ದೇವರ ಹರ್ಷವನ್ನು ನೆಲೆಗೊಳಿಸಲು ದಿಕ್ಕು ವಿಶಾಲಸ್ಥಳವನ್ನಿತ್ತಿತು. ಆತ್ಮತತ್ತ್ವದಲ್ಲಿ ದೇವರ ಹರ್ಷವನ್ನು ನೆಲೆಗೊಳಿಸಲು ನಮ್ಮ ಆತ್ಮಗಳು ಜನ್ಮ ತಾಳಿದವು.

iv) ಮನುಕುಲದ ಉದ್ಧರಣ ಮತ್ತು ಜಗತ್ತಿನ ಧಾರಣ

೫೯. ಮಾನವನು ಅದೇ ತಾನೆ ತೊಡಗಿದ ಈಷತ್-ಪ್ರಾರಂಭಗಳೊಳಗಿಂದಲೇನೇ ನಾವು ಏರಬೇಕಾಗಿದೆ, ಪೃಥ್ವಿಯ ಜಡವಾದ ಅಲ್ಪತೆಯನ್ನು ಒಡೆಯುತ್ತಲೇನೇ ನಾವು ಹೊರಗೆ ಬರಬೇಕಾಗಿದೆ. ನಾವು ನಮ್ಮ ಸ್ವಭಾವವನ್ನು ಆಧ್ಯಾತ್ಮಿಕ ಅಗ್ನಿದ್ವಾರಾ ಅರಸಬೇಕಾಗಿದೆ.

೬೦. ಪರಿತ್ಯಕ್ತ ಜನಾಂಗವನ್ನು ಪಲಾಯನವು ಉದ್ಧರಿಸಲಾರದು. ಅಥವಾ ಅಂಥ ಜನಾಂಗಕ್ಕೆ ಜಯವನ್ನಾಗಲಿ ದೇವರ ಆಳಿಕೆಯನ್ನಾಗಲಿ ಆ ಪಲಾಯನವು ಒದಗಿಸಲಾರದು. ಮಹತ್ತರ ಬಲವೊಂದು, ಘನತರ ಪ್ರಕಾರವೊಂದು ಬರಲೇಬೇಕು.

೬೧. ಒಬ್ಬಾನೊಬ್ಬನು ಅವತರಿಸಿ ಬಂದು ವಜ್ರಶಾಸನವನ್ನು ಮುರಿದೇ ಮುರಿಯುವನು; ಆತ್ಮದ ಏಕಮಾತ್ರ ಬಲದಿಂದ ಅವನು ಪ್ರಕೃತಿ ನಾಶವಾಗದಂತೆ ಅದನ್ನು ಪಲ್ಲಟಿಸುವನು.

೬೨. ಜಗತ್ತನ್ನೆ ಧರಿಸಬಲ್ಲ ಸೀಮಾರಹಿತ ಮನವೂ ಉತ್ಸಾಹ ಭರಿತ ಶಾಂತಿ-ಸ್ಥೈರ್ಯಗಳನ್ನುಳ್ಳ ಮಧುರ ಮತ್ತು ಉಗ್ರ ಹೃದಯವೂ ದೇವತೆಗಳ ಚಿತ್ತಕ್ಷೋಭೆಗಳ ಮೂಲಕ ಉದಿಸಿ ಬರುವವು.

೬೩. ವಿಶ್ವದಲ್ಲಿಯ ವಾಹಕಶಕ್ತಿಗಳು (Agencies) ತಮ್ಮ ಕಾರ್ಯವನ್ನು ಯಾರೂ ಒರೆಗೆ ಹಚ್ಚಲಾರದ ರೀತಿಯಲ್ಲಿ ಜರುಗಿಸುತ್ತವೆ.

೬೪. ಕಾಲರಹಿತ ರಹಸ್ಯವೊಂದು ಕಾಲಚಕ್ರದಲ್ಲಿ ಕಾರ್ಯವೆಸಗುತ್ತಿದೆ.

೬೫. ಈ ಪೃಥ್ವಿ ದೇವತೆಗಳ ಕಾತರದಿಂದ ತುಂಬಿದೆ; ಅವರು ಕಾಲಪುರುಷನ ಪ್ರೇರೇಪಣೆಯ ಮೂಲಕ ಸಮಾಪಯಣಿಸುತ್ತಾರೆ ಹಾಗೂ ಮರ್ತ್ಯರೂಪಗಳಲ್ಲಿ ದಿವ್ಯ ಜೀವನವನ್ನು ಮಾಡಿಸುತ್ತಾರೆ.

೬೬. ಎಲ್ಲರೊಡನೆ ಪಾಲುಗೊಳ್ಳದ ಹರುಷವು ಅಪೂರ್ಣವೇ ಸರಿ.

೬೭. ಒಮ್ಮೆ ಉಚ್ಚಾರಿತವಾದ ಸತ್ಯವು ಪೃಥ್ವಿಯ ವಾತಾವರಣದೊಳಗಿಂದ ಅಳಿಸಿಹೋಗಿದ್ದರೂ, ಮನವು

ಅದನ್ನು ಮರೆತಿದ್ದರೂ, ಕಾಲಪುರುಷನ ಸ್ಮರಣೆಯಲ್ಲಿ ಅದು ಅಮರವಾಗಿದ್ದು ಕೊನೆವರೆಗೂ ನಿನದಿಸುತ್ತಿರುತ್ತದೆ

೧೮. ಒಳಗಿನ ಬೆಳಗಿನ ಮೇಲೆಯೆ ಹೊರಗಿನ ಹಂಚಿಕೆಯು ತೂಗಾಡುತ್ತಿರುತ್ತದೆ.

೧೯. ಅಧಿಕ ಬಲಶಾಲಿ ಜನಾಂಗವೊಂದು ಮರ್ತ್ಯಲೋಕದಲ್ಲಿ ನೆಲೆಗೊಳ್ಳುವುದು.

೨೦. ಈ ಪೃಥ್ವಿಯೊಂದೇ ನಮ್ಮ ಗುರು ಮತ್ತು ದಾಯಿಯಲ್ಲ; ಎಲ್ಲ ಲೋಕಗಳ ಬಲಗಳಿಗೂ ಇಲ್ಲಿ ಪ್ರವೇಶವುಂಟು.

೨೧. ಬೋಧಕ್ಕೂ ಜನ್ಮಕ್ಕೂ ಕೊನೆಯಿಲ್ಲ. ಮರಣಕ್ಕೂ ಪುನರ್ಜನ್ಮಕ್ಕೂ ಕೊನೆಯಿಲ್ಲ; ತನ್ನ ಗುರಿಯನ್ನು ಪಡೆದ ಜೀವನವು ಹೆಚ್ಚಿನ ಗುರಿಗಳನ್ನು ಬೇಡುತ್ತದೆ, ಸೋತು ಅಳಿದ ಪ್ರಾಣಶಕ್ತಿ ಮತ್ತೆ ಜೀವಿಸಬೇಕು, ತಾನು ಅಳಿಯಲಾರೆನೆಂದು ಕಂಡುಬರುವವರೆಗೂ ಪುನಃಪುನಃ ಜೀವಿಸಬೇಕು.

೨೨. ಪೃಥ್ವಿಯೆಂಬುದು ಬಲಿಷ್ಠ ಆತ್ಮಗಳು ಆರಿಸಿಕೊಂಡ ಸ್ಥಳವಾಗಿದೆ; ಈ ಪೃಥ್ವಿ ಪರಾಕ್ರಮಶಾಲಿ ಆತ್ಮಶಕ್ತಿಯ ಕುರುಕ್ಷೇತ್ರವಾಗಿದೆ. ಆತ್ಮನೆಂಬ ಕಂಬಾರನು ತನ್ನ ಕಬ್ಬಿಣವನ್ನು ರೂಪುಗೊಳಿಸುವ ಕುಲುಮೆಯಾಗಿದೆ ಈ ಪೃಥ್ವಿ.

೭೩. ದೇವರು ಸ್ವರ್ಗಗಳನ್ನೇನೊ ಸುಲಭವಾಗಿ ರಚಿಸಿದನು. ಪೃಥ್ವಿಯನ್ನು ರಚಿಸುವುದೇ ಅವನಿಗೆ ಕಠಿಣವೆನಿಸಿತು; ಅಂತೆಯೇ ಅದು ವೈಭವಶಾಲಿಯಾಗಿದೆ. ಎಂಥೆಂಥ ಸಮಸ್ಯೆ ಎಂಥೆಂಥ ಕುಲರಚನೆ, ಎಂಥೆಂಥ ಸಂಘರ್ಷಣೆ!

೭೪. ದೇವರು ಮಾನವಕುಲದಲ್ಲಿ ಯಾವ ಯಾವ ರೂಪಗಳಿಂದ ಬೆಳೆದು ಬರುವನೋ ಅಂಥವು ಅನೇಕವಾಗಿವೆ; ಅವು ಮಾನವನ ವಿಚಾರ-ಆಚಾರಗಳಿಗೆ ದೇವತ್ವದ ಅಚ್ಚು ಹಾಕುತ್ತವೆ, ಮಾನವೀಯ ದೇಹದ ಗಾತ್ರವನ್ನು ಎತ್ತರಿಸುತ್ತವೆ ಅಥವಾ ಅದನ್ನು ಸ್ವರ್ಗೀಯ ಸುವರ್ಣವನ್ನಾಗಿ ಮೆಲ್ಲನೆಮೆಲ್ಲನೆ ಪರಿವರ್ತಿಸುತ್ತವೆ.

೭೫. ಯಾವುದೋ ದೈವ ಎಲ್ಲಿಂದಲೋ ಆಕಸ್ಮಿಕವಾಗಿ ತಂದ ಇಟ್ಟಿಗೆಗಳಿಂದ ಈ ಲೋಕ ರಚಿತವಾಗಿಲ್ಲ. ಕುರುಡು ದೇವತೆಯೊಂದು ಭಾಗ್ಯಶಿಲ್ಪಿಯಾಗಿಲ್ಲ; ಪ್ರಜ್ಞಾಯುಕ್ತವಾದ ಒಂದು ಬಲವೇ ಪ್ರಾಣಶಕ್ತಿಯ ಯೋಳಹನ್ನು ಹಾಕಿದೆ. ಒಂದೊಂದು ಸರಳ ಇಲ್ಲವೆ ವಕ್ರ ರೇಷೆಯಲ್ಲೂ ಒಂದೊಂದು ಅರ್ಥವಿದೆ.

೭೬. ಮನುಕುಲವು ಬಾಳಲೆಂದೂ ದೇವರು ಜನಿಸಿ ಬರಲೆಂದೂ ಮಾನವರು ಸಾಯುತ್ತಾರೆ.

೭೭ ದೈವೀ ಸಾಮರಸ್ಯವೇ ಪೃಥ್ವಿಯ ಧರ್ಮಶಾಸನವಾಗುವುದು. ಸೌಂದರ್ಯ-ಸಂತೋಷಗಳು ಪೃಥ್ವಿಯ ಜೀವನ ವಿಧಾನವನ್ನು ಹೊಸ ಪರಿಯಚ್ಚಿನಲ್ಲಿ ಎರಕ ಹೊಯ್ಯುತ್ತವೆ.

೨೮. ಲೋಕೋದ್ಧಾರಕನ ಗುರುತರ ಕಾರ್ಯ ಕಠಿಣವಾಗಿದೆ, ಈ ಲೋಕವೇ ಅವನಿಗೆ ವಿರೋಧಿಯಾಗುತ್ತದೆ; ಆತನು ಯಾರನ್ನು ಉದ್ಧರಿಸಲು ಬಂದಿರುವನೊ ಆ ಜನರೇ ಅವನಿಗೆ ಹಗೆಗಳಾಗುತ್ತಾರೆ.

೨೯. ದೇವಮಾನವನು ಜೀವಿತದ ರಾಜನಂತೆ ಆಳುವವನು, ಪೃಥ್ವಿಯನ್ನು ಸ್ವರ್ಗಕ್ಕೆ ಬಹುಮಟ್ಟಿಗೆ ಸಮಾನಸ್ಕಂಧ ಸಹಯೋಗಿಯನ್ನಾಗಿ ಮಾಡುವವನು ಮತ್ತು ಮಾನವನ ಅಜ್ಞಾನಿ ಹೃದಯವನ್ನು ಭಗವಂತನೆಡೆಗೂ ಸತ್ಯದೆಡೆಗೂ ಕರೆದೊಯ್ಯುವವನು, ಅದರಂತೆಯೆ ಅವನ ಮರ್ತ್ಯತೆಯನ್ನು ದೇವತ್ವಕ್ಕೆ ಅಭಿಮುಖಗೊಳಿಸುತ್ತ ಉದ್ಧಾರಗೈಯುವನು.

೩೦. ಕಠಿಣ ಬಲಿದಾನದಿಂದ ಮಾತ್ರವೇ ಉನ್ನತ ಸ್ವರ್ಗವು ಪ್ರಾಪ್ತವಾಗುತ್ತದೆ: ನರಕವನ್ನು ಗೆಲ್ಲಬಯಸುವವನು ಸಂಗ್ರಾಮವನ್ನೂ ವೇದನೆಯನ್ನೂ ಸ್ವತಃ ಎದುರಿಸಲೇ ಬೇಕು.

v. ಶ್ರೀಮಾತೃಶಕ್ತಿ

೩೧. ಶ್ರೀಮಾತೆಯ ಗಭೀರ ಜಾಗತಿಕ ಲಹರಿಯಲ್ಲಿಯೂ ಯೋಜನೆಯೊಂದು ಉಂಟು......ಈ ನಿತ್ಯಸಂಕಲ್ಪವನ್ನು ಆಕೆ ತನ್ನ ಲೀಲೆಯ ಹೊದಿಕೆಯಿಂದ ಮುಚ್ಚಿದಳು ಏಕೆ ಗೊತ್ತೇ?- ಪುರುಷನನ್ನು ಅಪೌರುಷೇಯದೆಡೆಗೆ ಕರೆದೊಯ್ಯಬೇಕೆಂದು.

ಪೃಥ್ವಿಯು ಸಮಾಧಿ ಮೂಲಗಳ ಮೊತ್ತವೇ ಕಿತ್ತೆಸೆಯು ವಂತೆ ನೀವಾದರೂ ಖಂತಜ್ಯೋತಿಯು ನೆರವಿನಿಂದ ಪ್ರಹಾರ ಗೈಯಿರಿ.

೮೨. ಯುಗಯುಗಗಳು ಆಕೆಯ ತುಳಿತದ ಹೆಜ್ಜೆಗಳು, ಅವುಗಳಲ್ಲಿಯ ಘಟನೆಗಳು ಆಕೆಯ ವಿಚಾರಗಳ ಆಕೃತಿಯೇ ಸರಿ, ಮತ್ತು ಸಮಸ್ತ ಸೃಷ್ಟಿ ಆಕೆಯ ಎಂದೂ ಮುಗಿಯದ ಕೃತಿಯಲ್ಲದೆ ಮತ್ತೇನು?

೮೩. ಅಜ್ಞಾತದ ತೇಜಸ್ವಿ ಹೃದಯವೇ ಆಕೆ, ಭಗವಂತನ ಗಭೀರತೆಗಳಲ್ಲಿಯ ಮೌನದ ಬಲವೂ ಆಕೆ.

೮೪. ಆಕೆಯೇ ಶಕ್ತಿ. ಆಕೆಯೇ ಅನಿವಾರ್ಯ ಮಂತ್ರವಾಣಿ; ನಮ್ಮ ಕಠಿನ ಆರೋಹಣಕ್ಕೆ ಆಕೆ ಚುಂಬಕ ಶಕ್ತಿ; ನಮ್ಮೆಲ್ಲಾ ರವಿಗಳಿಗೆ ಪ್ರಕಾಶವನ್ನೀವ ಮಹಾ ರವಿಯಾಕೆ; ಇನ್ನೂ ಅಳವಡದ ಭೂಮ (Vastness) ಗಳತ್ತಣಿಂದ ಒಲಿದು ಬರುವ ಜ್ಯೋತಿಯಾಕೆ.

೮೫. ಓ ಜ್ಞಾನದೀಪ್ತಿಯೇ, ವಿಶ್ವಮಾತೆಯೆ. ಸೃಷ್ಟಿ ಕರ್ತಾರಳೆ, ನಿತ್ಯತೆಯ ಕುಶಲಶಿಲ್ಪಿ ವಧುವೆ, ಕಾಲದ ಸುವರ್ಣಮಯ ತುಂಡಿನೊಂದರ ಮೇಲೆಯೆ ನಿನ್ನ ರೂಪಾಂತರಶೀಲ ಹಸ್ತವನ್ನು ಜಂಭದಿಂದ ಒತ್ತಿ ಅಲ್ಲಿಯೆ ಬಹುಕಾಲ ವಿಲಂಬಿಸಬೇಡ.

೮೬. ಆಕೆಯ ತುಟಿಗಳು ದೇವರ ಜೇನುಹುಟ್ಟುಗಳಾಗುವವು, ಆಕೆಯ ಅವಯವಗಳು ಆತನ ಹರ್ಷೋತ್ಕ

ರ್ಷದ ಕುಂಭಗಳಾಗುವವು, ಆಕೆಯ ವಕ್ಷಗಳು ಸ್ವರ್ಗೀಯ ಸಂಭ್ರಮದ ಪುಷ್ಪಗಳಾಗುವವು.

೮೭. ಆಕೆ ತನ್ನ ಧ್ವನಿರಹಿತ ಹೃದಯದಲ್ಲಿ ಜ್ಞಾನವನ್ನು ಧರಿಸುವಳು. ಸಾಮರ್ಥ್ಯವು ಜೇತಾರನ ಖಡ್ಗದಂತೆ ಆಕೆಯ ಸಂಗಾತಿಯಾಗಿ ಇರುವುದು ಮತ್ತು ಆಕೆಯ ಕಂಗಳೊಳಗಿಂದ ನಿತ್ಯತೆಯ ಆನಂದವು ನಿಟ್ಟಿಸಿ ನೋಡುವುದು.

೮೮. ಆಕೆ ಹುಟ್ಟುವಾಗಲೆ ಹೊಳಪನ್ನು ಪಸರಿಸುವ ಸುಖದ ಜ್ವಾಲೆಯಾಗಿದ್ದಳು. ಮತ್ತು ಖಂಡಿತವಾಗಿಯೂ ಆ ಜ್ವಾಲೆ ಪೃಥ್ವಿಯನ್ನು ಬೆಳಗಿಸತೊಡಗುವುದು....

೮೯. ಆಕೆಯ ಗಭೀರತೆಗಳೊಳಗಿನ ಕಾಲರಹಿತ ಉಚ್ಚಾರ-ವನ್ನು ಬಿಚ್ಚಿ ತೋರಿಸುತ್ತ ಯಾವ ಮೌನಗಳು ಸತ್ಯ ವನ್ನು ಆಲಿಸುವವೋ ಅಂಥವು ತೀರ ಸ್ವಲ್ಪ; ದ್ರಷ್ಟಾರರ ದಿವ್ಯ ಕ್ಷಣಗಳೂ ತೀರ ಸ್ವಲ್ಪ.

೯೦. ಕರಾಳ ಕಾಳಿಕಾದೇವಿ ಬೇಡುವ ಯಾವ ಬಲಿಯನ್ನೂ ಯಾರೂ ಇಲ್ಲೆನ್ನಲಾರರು. ಆಕೆಯ ನೇತ್ರಗಳು ತನ್ನ ಹಿರಿಗುರಿಯತ್ತ ನಿರಿಯನ್ನು ಇಟ್ಟಿವೆ; ಯಾರು ಅಳಲಿ, ಯಾರು ಬೇಡಿಕೊಳ್ಳಲಿ, ಆಕೆ ತನ್ನ ಪಥದಿಂದ ಚಲಿಸ ಲಾರಳು.-ಆಕೆ ದೇವರ ಧನುಸ್ಸನ್ನು ಟಂಕಾರಗೊಳಿ ಸುತ್ತ ಬಾಣವನ್ನು ಹೂಡಿ ಎಸೆದಿದ್ದಾಳೆ.

೯೧. ಭಯಾನಕ ಸ್ಮಿತವೊಂದು ಆಕೆಯ ತುಟಿಗಳ ಸುತ್ತಲೂ ಸುಳಿಯಿತು. ಸ್ವರ್ಗಾಗ್ನಿ ಆಕೆಯ ಕಣ್ಣಕುಡಿಗಳಲ್ಲಿ

ನಕ್ಕಿತು; ಆಕೆಯ ಶರೀರವು ಧೈರ್ಯದ ಮತ್ತು ದಿವ್ಯ ಸಾಮರ್ಥ್ಯದ ಮೊತ್ತವಾಗಿ ಪರಿಣಮಿಸಲು ಆಕೆ ಅತಲ ಲೋಕದ ದೇವತೆಗಳ ಗೆಲವಿಗೆ ಭಯವನ್ನು ಒಡ್ಡಿದಳು.

೯೨. ಪರಮ ಸತ್ಯಮಾತೆ, ಸರ್ವ ಸಮರ್ಥಳೂ ಸರ್ವಜ್ಞಾನಿಯೂ ಏಕಾಕಿಯೂ ಆಗಿದ್ದುಕೊಂಡು ತನ್ನ ನಿತ್ಯಪ್ರಕಾಶದ ವೈಭವಶಾಲಿ ರಾಜ್ಯದಲ್ಲಿ ಯಾರಿಗೂ ಅಧೀನಳಾಗದೆ ಸರ್ವರಿಗೂ ಪ್ರಭುವಾಗಿದ್ದಾಳೆ. ತನ್ನ ಆ ಸುವರ್ಣಮಯ ದೇಶದಲ್ಲಿ ಆಕೆ ಅಳಿಯಲಾರದೊಂದು ನಿಲಯವನ್ನು ನಿರ್ಮಿಸಿದ್ದಾಳೆ.

೯೩. ಆ ಮಹಾ **ಜಗನ್ಮಾತೆ** ತನ್ನ ಬಲಿದಾನದಿಂದ ತನ್ನ ಆತ್ಮವನ್ನು ನಮ್ಮಂಥ ದೇಹವನ್ನಾಗಿ ಮಾಡಿದ್ದಾಳೆ: ದುಃಖವನ್ನೂ ಅಚೇತನತೆಯನ್ನೂ ದಿವ್ಯತೆಯು ಸ್ವೀಕರಿಸುತ್ತ ತನ್ನ ಸ್ವಂತ ಪ್ರದೀಪ್ತಿಗಳನ್ನು ಕಳೆದುಕೊಂಡು ನಮ್ಮೆಲ್ಲರ ಪಡಿಯಚ್ಚುಗಳನ್ನುಳ್ಳ ಆಧಾರವನ್ನು ನೆಯ್ದಿತು.

೯೪. ಸರ್ವಸಾಕ್ಷಿಯಾದ ಶಕ್ತಿಯೊಂದು ಉಂಟೆಂದು ನಮ್ಮ ಕೃತಿಗಳೇ ಭಾಷ್ಯ ಬರೆಯುತ್ತಿವೆ: ಆ ಶಕ್ತಿಯು ವಸ್ತುಗಳ ದುರ್ದಮ್ಯ ಸತ್ತ್ವದಲ್ಲಿ ವಾಸಮಾಡುತ್ತಿದೆ. ಈ ವಿಶ್ವದ ಲೀಲೆಯಲ್ಲಿ ತನ್ನ ಕಾಲವು ಒದಗದ ಹೊರತು, ಮುಂಗಾಣದ ಸ್ಥಳದಲ್ಲಿ ಯಾವುದೂ ಸಂಭವಿಸುವುದಿಲ್ಲ.

೯೫. ಸರ್ವಾದ್ಭುತ ಶಕ್ತಿಯು ಪ್ರತಿ ಘಟನೆಯನ್ನೂ ಒಂದೊಂದು ಮಹದಾಶ್ಚರ್ಯವನ್ನಾಗಿ ಮಾರ್ಪಡಿಸುತ್ತದೆ. ಸರ್ವಸುಂದರ ಶಕ್ತಿಯು ಪ್ರತಿರೂಪದಲ್ಲಿ ಒಂದೊಂದು ಮಹದಾಶ್ಚರ್ಯವನ್ನು ತುಂಬಿರುತ್ತದೆ, ಸರ್ವಾನಂದಶಕ್ತಿಯು ಹೃದಯದ ಪ್ರತಿಸ್ಪಂದನೆಯಲ್ಲಿ ಅದ್ಭುತ ರೋಮಹರ್ಷವನ್ನೇ ಉಂಟುಮಾಡುತ್ತಿದೆ, ಶುದ್ಧ ಸ್ವರ್ಗೀಯ ಹರುಷವನ್ನು ಪ್ರತಿ ಇಂದ್ರಿಯವೂ ಬಳಸಿಕೊಳ್ಳುತ್ತದೆ.

೯೬. ರಾತ್ರಿಯು ನಮ್ಮ ಆದಿಯೂ ಅಲ್ಲ, ಅಂತ್ಯವೂ ಅಲ್ಲ: ರಾತ್ರಿಯೋ ಕೃಷ್ಣವರ್ಣದ ಮಾತೆಯಾಗಿದ್ದು ಅವಳ ಗರ್ಭದಲ್ಲಿ ನಾವು ಸುರಕ್ಷಿತವಾಗಿ ಅಡಗಿಕೊಂಡಿರುವುದರಿಂದಲೇ ಪ್ರಪಂಚದ ವ್ಯಥೆಯು ಎಚ್ಚರವು ಬಹು ತೀವ್ರವಾಗಿ ನಮಗೆ ಆಗುವುದಿಲ್ಲ.

vi. ಸುಪ್ರಮಾನಸ ತತ್ತ್ವ (Super-Mind)

೯೭. ಸುಪ್ರಮಾನಸ ತತ್ತ್ವವು ಜ್ಯೋತಿಗಾಗಿ ಜಗದ ಬಾಧ್ಯತೆಯನ್ನು ಪ್ರಸ್ಥಾಪಿಸುತ್ತ ಮೆಚ್ಚಿದ ಹೃದಯದಲ್ಲಿ ದೇವರ ಪ್ರೀತಿಯಿಂದ ರೋಮಹರ್ಷವನ್ನು ಉಂಟುಮಾಡುವುದು; ಹಾಗೂ ಪ್ರಕೃತಿಯ ಉಚ್ಚ ಶೀರ್ಷದಲ್ಲಿ ಜ್ಯೋತಿಯ ಕಿರೀಟವನ್ನು ಇಡುತ್ತ ಅವಳ ಭದ್ರ ಬುನಾದಿಯಲ್ಲಿ ಆ ಜ್ಯೋತಿಯ ಆಳಿಕೆಯನ್ನು ಪ್ರಸ್ಥಾಪಿಸುವುದು.

೯೮. ಪ್ರಕೃತಿಯು ರಾಜನೆಂದು ಸುಪ್ರಮಾನವನು (Superman) ಜನಿಸಿ ಬಂದಾಗ ಅವನ ಸಾಂನಿಧ್ಯವು ಜಡ ಪ್ರಪಂಚವನ್ನು ಪರಿವರ್ತನೆಗೊಳಿಸುವುದು: ಪ್ರಕೃತಿಯು ರಾತ್ರಿಕಾಲದಲ್ಲಿ ಅವನು ಪರಮಸತ್ಯದ ಅಗ್ನಿಯನ್ನು ಬೆಳಗಿಸುವನು ಹಾಗೂ ಪೃಥ್ವಿಯಲ್ಲಿ ಅವನು ಆ ಪರಮ ಸತ್ಯದ ಮಹತ್ತರ ಶಾಸನವನ್ನು ನೆಲೆಗೊಳಿಸುವನು.

vii. ನವ ಪ್ರಭಾತ

೯೯. ಪ್ರಭಾತದ ತಿಳಿಬೆಳಕು ದೇವತೆಗಳ ಬದುಕು: ನಿದ್ರೆಯೊಳಗಿಂದ ಅತ್ಯದ್ಭುತ ರೀತಿಯಲ್ಲಿ ಅವರ ರೂಪಗಳು ಉದಿಸುತ್ತವೆ. ದೇವರ ಆ ದೀರ್ಘರಾತ್ರಿಗಳಿಗೆ ಪ್ರಭಾತವೇ ಪ್ರಮಾಣ.

೧೦೦. ಕೆಲವರನ್ನು ದೈವೀವಿಭೂತಿಯ ಪಾತ್ರಧಾರಿಗಳನ್ನಾಗಿಯೂ ಶಾಶ್ವತ ಸತ್ಯದ ಜ್ಯೋತಿರ್ಮಯ ಬಲದ ವಾಹಕರನ್ನಾಗಿಯೂ ಮಾಡಲಾಗುವುದು. ಇವರೇ ಉಚ್ಚ ಶ್ರೇಣಿಯಲ್ಲಿಯ ದೇವದೂತರು, ಕಾಲಪುರುಷನ ವಿಜೇತಾಮಣಿಗಳು, ನವ ಅಭಿನವನವ ಕುಲದ ಜೊಚ್ಚಲು ಶಿಶುಗಳು.

೧೦೧. ಸೃಷ್ಟಿಮಾತೆಯ ಗುಪ್ತಸ್ತನಗಳಿಂದ ಹಾಲನುಂಡು ಪೋಷಣೆಗೊಂಡ ಶಿಶುವೊಂದು. ಐಂದ್ರಜಾಲಿಕ ವನದಲ್ಲಿ ಅಂತರಾತ್ಮದ ಪ್ರವಾಹಗಳ ಬಳಿಯಲ್ಲಿ ಸಂತೋ

ಷದ ಉನ್ಮಾದದೊಂದಿಗೆ ಕೊಳಲನೂದುತ್ತಲಿರುವುದು; ನಾವು ತನ್ನ ಆ ವೇಣುನಾದವನ್ನು ಯಾವಾಗ ಆಲಿಸುವೆವೋ ಎಂದು ಆ ಶಿಶು ನಮ್ಮನ್ನು ನಿಟ್ಟಿಸಿ ನೋಡುತ್ತಲಿದೆ.

೫. ಮೇರುಕೃತಿಗೆ ಮಂಗಳ

"The earliest formula of wisdom promises to be its last-God, Light, Freedom, Immortality"

—Sri Aurobindo

"ಜ್ಞಾನದ ಸೂತ್ರ ಆದಿಕಾಲದಿಂದ ಅಂತ್ಯದ ವರೆಗೂ ಇದುವೇ ಆಗಿದೆ—ಭಗವಂತ, ಪ್ರಕಾಶ, ಸ್ವಾತಂತ್ರ್ಯ, ಅಮೃತತ್ವ"

ಎಂದು ಶ್ರೀ ಅರವಿಂದರು ತಮ್ಮ ಗದ್ಯ ರೂಪದ ಮೇರುಕೃತಿ 'Life Divine'ದ ಪ್ರಾರಂಭದಲ್ಲಿ ಹೇಳುತ್ತಾರೆ. ಪದ್ಯ ರೂಪದ ಈ ಮೇರುಕೃತಿಯಲ್ಲೂ ಅದೇ ಸೂತ್ರವನ್ನು ಅವರು ಹಿಡಿದಿದ್ದಾರೆ. ಪಾತ್ರಗಳ ಸಾಂಕೇತಿಕತೆಯ ಸ್ವಾರಸ್ಯವನ್ನು ನಾವು ಅರಿತರೆ ಈ ಕಾವ್ಯದಲ್ಲಿಯ ಏಕಸೂತ್ರತೆ ವಾಚಕರಿಗೆ ಅರ್ಥವಾಗುತ್ತದೆ. ವಾಚಕರಾದರೂ ತಮ್ಮಲ್ಲಿ ಒಂದು ಬಗೆಯ ವಿಶಿಷ್ಟ ಅರ್ಹತೆಯನ್ನು ಬೆಳೆಸಿಕೊಂಡು ಓದಿದರೆ ಚೆನ್ನಾಗುವುದು. ಏಕೆಂದರೆ ಈ ಕಾವ್ಯ

ಸಾಮಾನ್ಯ ಸ್ತರದ ಶ್ರೀಸಾಮಾನ್ಯ ವಾಚಕರಿಗಾಗಿ ತಾವು ಬರೆದಿಲ್ಲವೆಂದು ಕವಿಗಳೇ ಒಂದೆಡೆ ಸ್ಪಷ್ಟವಾಗಿ ಹೇಳಿದ್ದಾರೆ.

ಸಾಂಕೇತಿಕ ಸ್ವಾರಸ್ಯ

ಪಾತ್ರಗಳಲ್ಲಿ, ಪ್ರಕೃತಿಯಲ್ಲಿ ಕವಿ ಹುದುಗಿಸಿಟ್ಟ ಸಂಕೇತಗಳನ್ನು ಅರಿಯಲು ಅವರದೇ ಆದ ಟಿಪ್ಪಣಿಯೊಂದು ನಮಗೆ ಬಹಳೇ ನೆರವು ನೀಡುತ್ತವೆ. ೧೯೭೧ ಅಗಸ್ಟ ೧೫ಕ್ಕೆ ಶ್ರೀ ಅರವಿಂದಾಶ್ರಮದಿಂದ ಪ್ರಕಟವಾದ 'Bulletin'' ದಿಂದ ಆ ಟಿಪ್ಪಣಿಯನ್ನು ಇಲ್ಲಿ ಉದ್ಧರಿಸುತ್ತೇನೆ. ಕನ್ನಡ ಅನುವಾದವನ್ನು ನಿರೂಪಣೆಯಲ್ಲಿ ಅಲ್ಲಲ್ಲಿ ಸೂಚ್ಯವಾಗಿ ಉಲ್ಲೇಖಿಸಲಾಗಿದೆ.

The Tale of Satyavan and Savitri

(An unpublished note by Sri Aurobindo)

The tale of Satyavan and Savitri is recited in the Mahabharata as a story of conjugal love conquering death. But this legend is, as shown by features of the human tale, one of the many symbolic myths of the vedic cycle. Satyavan is the soul of carrying the divine truth of being within itself but descended into the grip of death and ignorance; Savitri is the Divine word, daughter of the sun, goddess of the Supreme Truth who comes down and is born to save,

Ashwapati, the Lord of the Horse. her human father, is the lord of Tapasya, the concentrated energy of spiritual endeavour that helps us to rise from the mortal to the immortal planes; Dyumatsena, Lord of Shining Hosts, father of Satyavan is the divine mind, here fallen blind, losing its celestial Kingdom of vision, and through that loss its Kingdom of the glory. Still this is not mere allegory, the characters are not personified qualities, but incarnations of loving and conscious Forces with whom we can enter into concrete touch and they takehuman bodies in order to help man and show him the way from his mortal state to a divine consciousness and immortal life."

—Bulletin of Sri Aurobindo
International Centre of Education,
Vol. XXIII, No. 3,August 1971

i) ಸತ್ಯವಾನನೆಂದರೆ ದಿವ್ಯ ಸತ್ಯವನ್ನು ಒಳಗಿಟ್ಟು ಕೊಂಡಿದ್ದರೂ ಮೃತ್ಯು-ಅಜ್ಞಾನಗಳ ಪಾಶದಲ್ಲಿ ಸಿಲುಕಿದ ಜಗದಾತ್ಮನವನು.

ii) ಸಾವಿತ್ರಿಯೋ ಪರಾಮಾತೆಯ ಮಂತ್ರವಾಣಿ. ಜಗತ್ತನ್ನು ಉದ್ಧರಿಸಲು ಇಲ್ಲಿ ಇಳೆಯಲ್ಲಿ ಇಳಿದ ದಿವ್ಯವಾಣಿ.

iii) ಅಶ್ವಪತಿ ತಪಸ್ಯೆಯ ಪ್ರಭು, ಮರ್ತ್ಯರು ಅಮೃತತ್ವದೆಡೆಗೆ ಸಾಗಲು ನೆರವು ನೀಡುವ ಆಧ್ಯಾತ್ಮಿಕ ಪ್ರಯತ್ನದ ಕೇಂದ್ರೀಕೃತ ಶಕ್ತಿ.

iv) ದ್ಯುಮತ್‌ಸೇನನೋ ಸ್ವರ್ಲೋಕದ ದಿವ್ಯ ಮನವು ಭೂಮಿಗೆ ಬರುವಾಗ ಯೋಗಭ್ರಷ್ಟವಾಗಿ ಜ್ಞಾನ ದೃಷ್ಟಿ ಕಳೆದುಕೊಂಡು ದೇವಲೋಕದ ವೈಭವಕ್ಕೆ ಎರವಾದ ಪಾತ್ರ.

v) ನಾರದರು ಭೂಲೋಕ—ಸ್ವರ್ಲೋಕಗಳನ್ನು ತಮ್ಮ ಜ್ಞಾನಬಲದಿಂದ ಮಿಲನಗೊಳಿಸುವ ಸೇತುವೆ.

vi) ಕಾವ್ಯದ ಪ್ರಾರಂಭಕ್ಕೂ ಕೊನೆಗೂ ಉಲ್ಲೇಖಿಸಲ್ಪಟ್ಟ ಅರುಣೋದಯವು ಕೇವಲ ಭೌತಿಕ ಅರುಣೋದಯವಲ್ಲ. ರಾತ್ರಿಯೆಂಬುದು ವಿಶ್ವ ಜನಿಸುವುದಕ್ಕಿಂತ ಮುಂಚೆ ಇದ್ದ ಪ್ರಜ್ಞಾಶೂನ್ಯ ಸಂಕೇತ; ಮತ್ತು ಅರುಣೋದಯವು ಪ್ರಜ್ಞೆಯ ಆವಿರ್ಭಾವದ ಸಂಕೇತ.

vii) ಸೃಷ್ಟಿ ಪೂರ್ವದ ಘನನಿಬಿಡ ತಮವೇ ಅಚೇತನವು. ಅಚೇತನದಿಂದ ಅಜ್ಞಾನ ಉದಿಸುತ್ತದೆ. ಆ ಬಳಿಕ ಜಡದ್ರವ್ಯ, ನಂತರ ಪ್ರಾಣಶಕ್ತಿ, ಆ ಮೇಲೆ ಮನಸ್ತತ್ತ್ವ- ಹೀಗೆ ವಿಕಾಸದ ಕ್ರಮವಿದೆ.

vii) ವೇದದಲ್ಲಿ 'ಉಷೆ' ಅರುಣೋದಯದ ದೇವತೆ. ಆಕೆ ಮನೋಮಯ ಜಾಗೃತಿಯ ಹಾಗೂ ದಿವ್ಯಜ್ಞಾನದ ಸಂಕೇತವಾಗಿದ್ದಾಳೆ. ಕತ್ತಲೆ ದಿವ್ಯಜ್ಞಾನದ ಪ್ರಕಟಣೆಗೆ

ಆತಂಕವಾಗುತ್ತದೆ. ಉಷೆ ಆಗಮಿಸಿ ಉಳಿದ ದೇವತೆಗಳನ್ನು ಎಚ್ಚರಿಸುವಳು. ವಿವಿಧ ದೇವತೆಗಳು ವಿಶ್ವದ ವಿವಿಧ ಚಟುವಟಿಕೆಗಳ ಸಂಕೇತವಾಗಿದ್ದಾರೆ. ಈ ವೈದಿಕ ಪ್ರತಿಮಾನಿಷ್ಠೆ ಈ ಮಹಾಕಾವ್ಯದಲ್ಲಿ ಎಲ್ಲೆಲ್ಲೂ ಕಂಡುಬರುತ್ತದೆ.

viii) ಈ ಕಾವ್ಯದಲ್ಲಿ ಅಲ್ಲಲ್ಲಿ ಬರುವ ಸ್ತ್ರೀಪುರುಷರು, ಕನಸು, ಅಲೌಕಿಕ ದರ್ಶನ, ಅಭೀಪ್ಸೆ, ಭಾವನೆ, ಭೌತಾತೀತ ಶಕ್ತಿಗಳು- ಇವೆಲ್ಲವೂ ಜೀವಕಳೆಯಿಂದ ಬೆಳಗುತ್ತ 'ಮಾನಸಾತೀತ ಕಾವ್ಯ'ದ ಹಿಂದೆ ಕಾರ್ಯ ಮಾಡುವ ಸಾಂಕೇತಿಕ ಶಕ್ತಿಗಳಾಗಿವೆ.

ix) ಇಲ್ಲಿ ಬರುವ ಆಕಾಶ ಹಾಗೂ ಸಾಗರಗಳು ವಿಶಾಲತೆಯ ಪ್ರತೀಕ; ಗರುಡಪಕ್ಷಿ ವೇಗದ ಪ್ರತೀಕ; ಹೂಗಳು ಆನಂದದ ಪ್ರತೀಕ;

x) ಇಲ್ಲಿಯ ಯಮನೋ ಅಜ್ಞಾನ-ಅಹಂಕಾರಗಳ ಪ್ರತೀಕ. ಹೀಗೆ ಈ ಮಹಾಕಾವ್ಯದಲ್ಲಿಯ ಸಂಕೇತಗಳಲ್ಲಿ ಸ್ವಾರಸ್ಯವು ಅಡಗಿದೆ.

ಕಾವ್ಯದ ಗುರಿ

ಈ ಕುರಿತು ಡಾ. ಪ್ರೇಮಾ ನಂದಕುಮಾರರು ಇಂತು ಹೇಳುತ್ತಾರೆ: "ಮಾನವನಿಗೆ ದಿವ್ಯ ಜೀವನದ ಮಾರ್ಗವನ್ನು ತೋರಿಸುವುದೇ ಶ್ರೀ ಅರವಿಂದರ ಗುರಿಯಾಗಿದೆಯೆಂಬುದು ಸ್ಪಷ್ಟವಿದೆ. ಈ ಮಾರ್ಗವು ಈ ಮಹಾಕಾವ್ಯದಲ್ಲಿ ದೃಷ್ಟಾಂತ ಕುಶಲತೆಯೊಂದಿಗೆ ಎದ್ದಾಗಿ ಚಿತ್ರಿತವಾಗಿದೆ. ಕಾವ್ಯವು

ಯೋಗಮಾರ್ಗ ಪ್ರದೀಪವಾಗಬೇಕು. ಪೂರ್ಣಯೋಗದ ಮಾರ್ಗದರ್ಶಿಕೆಯಾಗಬೇಕು ಎಂಬುದು ಇಲ್ಲಿ ಅವರ ಗುರಿಯಾಗಿದೆ. ಮಹಾಕಾವ್ಯವಲ್ಲದೆ ವಿಶ್ವಕಾವ್ಯವೂ ಇದು ಆಗಿರಬೇಕೆಂಬ ಉದ್ದೇಶವೂ ಇಲ್ಲಿದೆ. ಮನಕ್ಕಿಂತಲೂ ಊರ್ಧ್ವ ಶ್ರೇಣಿಯಲ್ಲಿಯ ಬೋಧಿಮಯ ಮಾನಸ (Intuitive Mind) ಹಾಗೂ ಅಧಿಮಾನಸ (Overmind)ದ ಮಹಾಕಾವ್ಯವಾಗಬೇಕು. ಅದು ಮುಂಬರುವ ಯುಗದ ಮಹಾಕಾವ್ಯ (Future Poetry) ವೂ ಆಗಬೇಕು. ವೇದೋಪನಿಷತ್ತುಗಳಲ್ಲಿ ಕಾಣುವ ಮಂತ್ರದ ದಿವ್ಯಚಲನೆ, ವಾಲ್ಮೀಕಿ-ಕಾಳಿದಾಸರಲ್ಲಿ ಕಾಣುವ ಉನ್ನತಗತಿ ಸಾವಿತ್ರಿಯಲ್ಲಿ ಮೂಡಿಬರಬೇಕು—ಇವೆಲ್ಲಾ ತಮ್ಮ ಗುರಿಗಳನ್ನು ಕುಶಲಶಿಲ್ಪಿಯಾಗಿ ಶ್ರೀ ಅರವಿಂದರು ಈ ಮೇರುಕೃತಿಯಲ್ಲಿ ಸಾಧಿಸಿದ್ದಾರೆ.

ಅವರು 'ದಿವ್ಯಜೀವನ Life Divine' ಎಂಬ ಗ್ರಂಥದಲ್ಲಿ ತಾರ್ಕಿಕ ಬುದ್ಧಿಗೆ ಸರಿದೋರುವ, ಒಂದು ತರ್ಕಬದ್ಧವಾದ ವಿಚಾರ ಸರಣಿಯಿಂದ ಯಾವ ಸಂಗತಿ ಸಾಧ್ಯವೆಂದು ಪ್ರತಿಪಾದಿಸಿದ್ದಾರೋ, 'ಯೋಗಸಮನ್ವಯ-Synthesis of Yoga' ಎಂಬ ಗ್ರಂಥದಲ್ಲಿ ಯಾವ ಸಂಗತಿಯನ್ನು ಆಚರಣೆಯಲ್ಲಿ ತರುವುದು ಸಾಧ್ಯವಿದೆಯೆಂದು ತೋರಿಸಿದ್ದಾರೋ, ಅದನ್ನೇ 'ಸಾವಿತ್ರಿ' ಮಹಾಕಾವ್ಯದಲ್ಲಿ ಸ್ಪಷ್ಟವಾದ, ಚೈತನ್ಯಪೂರ್ಣವಾದ ಸ್ಫೂರ್ತಿದಾಯಕವಾದ ನೈಜಘಟನೆ

ಎಂಬುದರಿಂದ ನಿರೂಪಿಸಿದ್ದಾರೆ"*

ಮಂಗಲ ಪ್ರಾರ್ಥನೆ

ಈ ಮಹಾಕಾವ್ಯವೆಂಬುದು, 'ದಿವ್ಯ ಪ್ರಬಂಧ'ವೆಂಬುದನ್ನು ಕನ್ನಡದ ಕಾವ್ಯರ್ಷಿ 'ಅಂಬಿಕಾತನಯದತ್ತ'ರು ಇಂತು ವರ್ಣಿಸುತ್ತಾರೆ; ಅದನ್ನೋದಿ ಅರಿತುಕೊಂಡು ಅಮೃತತ್ವವನ್ನು ಪಡೆಯುವಾ ಎಂಬ ಮಂಗಲ ಪ್ರಾರ್ಥನೆಯೊಂದಿಗೆ ಈ ಮೇರುಕೃತಿಯು 'ಮಂಗಳ'ವನ್ನು ಮುಗಿಸಲು ವಾಚಕರ ಅಪ್ಪಣೆ ಕೇಳುವೆ.

"ಅಬ್ಬಾ ಬಾಬಾ ಎನ್ನುತ್ತಿದೆ ಗೋಪುರ ಶಿಖರಾ;
ಏಳೇಳೋ ಏರೇರೊ ದನಿ ಮೌನವೆ ಮುಖರಾ.

ಗರ್ಭಿತ ಗೃಹ ದಿವ್ಯಸ್ಥಳ ಅವಧಾನದ ನಿಷ್ಠೆ;
ಅನುಭಾವಿಸಿ ಮಾಡಲ್ಲಿಯೆ ನವಲಿಂಗ ಪ್ರತಿಷ್ಠೆ.

ಸಪ್ತ ಸಪ್ತಿ ತೆರೆ ಸುಷುಪ್ತಿ ಘೋಷಿಸು ತೂರ್ಯರವ;
ಸತ್ಯವಾನ-ಸಾವಿತ್ರಿಯು ಭವ ಭವ ಮಂಗಲವ.

ಸುದರ್ಶನಕೆ ಅವತರಿಸಿತು ಈ ದಿವ್ಯ ಪ್ರಬಂಧ;
ಊರ್ಧ್ವಗತಿಯ ಮೀನಾರದ ಪ್ರಾರ್ಥನೆ ಘುಣ್-ಘಂಟ"

*'ದೀಪ್ತಿ' ಸಂಪುಟ ೮, ಸಂಚಿಕೆ ೩ ನೋಡಿರಿ.

ಸಂದರ್ಭ ಗ್ರಂಥಸೂಚಿ ಮತ್ತು ಗ್ರಂಥಋಣ

i) Sri Aurobindo's **Savitri** — An Approach and a study; by A. B. Purani, Sri Aurobindo Ashram, Pondicherry-2.

ii) **Savitri** (Doctorate Thesis) by Dr. Mrs. Prema Nandakumar, Sri Aurobindo Ashram, Pondicherry-2

iii) "ದೀಪ್ತಿ" (ಕನ್ನಡ ತ್ರೈಮಾಸಿಕ) ಶ್ರೀ ಅರವಿಂದಾಶ್ರಮದ ಪ್ರಕಟನೆ — ೧೯೬೪ (ಸಂಪುಟ ೮) ರಿಂದ ೧೯೭೧ (ಸಂಪುಟ ೧೫)ರ ವರೆಗೆ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವ, ಗುರುಬಂಧು ಶ್ರೀ ಎಂ. ಆರ್. ಜಹಾಗಿರ್ದಾರ. ಜಡಭರತ ಇವರಿಂದ ಬರೆಯಲ್ಪಟ್ಟ 'ಸಾವಿತ್ರಿ ಲೇಖನ ಮಾಲೆ'.

iv) ಶ್ರೀ ಅರವಿಂದಾಶ್ರಮದ ಪತ್ರಿಕೆಗಳು: Advent, Bulletin of Education, Mother India ಮತ್ತು ಮುಂಬೈ-ಕಲಕತ್ತೆಗಳ Sri Aurobindo Annuals ಈ ಎಲ್ಲಾ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಶ್ರೀಅರವಿಂದರ ಶಿಷ್ಯರು ಬರೆದ ಹಲವಾರು ಲೇಖನಗಳು.

v) **ಮಹಾಯೋಗಿ :** ಡಾ. ರಂ. ರಾ. ದಿವಾಕರರು, ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ ಮತ್ತು ಬೆಂಗಳೂರು,

vi) **ಶ್ರೀ ಅರವಿಂದ ಸ್ಮರಣೆ:** ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ಪುಷ್ಪ; ಲೇಖಕರು: ಶ್ರೀ ಸ. ಸ. ಮಾಳವಾಡ, ಧಾರವಾಡ.

vii) **ಶ್ರೀ ಅರವಿಂದರು:** ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆಯ ಪುಷ್ಪ; ಲೇಖಕರು: ಶ್ರೀ ಉ. ಕಾ. ಸುಬ್ಬರಾಯಾಚಾರ್, M.A.

viii) **ಅರಳುಮರಳು :** (ಕಾವ್ಯಗುಚ್ಛ) ಡಾ. ಪದ್ಮಶ್ರೀ ದ. ರಾ. ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ.

ix) **ವಚನಭಾರತ :** ದಿವಂಗತ ಡಾ. ಎ. ಆರ್. ಕೃಷ್ಣಶಾಸ್ತ್ರಿ, M.A. ಶಾರದಾಮಂದಿರ, ಮೈಸೂರು ೪.

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೩	೨	ಅವರ	ಅವರು
೮	೪	(world-soul)	(world-stair)
೨೫	೮	ಯುುವರಾಜನಿಂದ	ಯುವರಾಜನಿಂದ
೨೭	೧ನೇ ಮತ್ತು ೨ನೇ ಸಾಲುಗಳ ನಡುವೆ		'ಅಧ್ಯಾಯ ೧ ಎಂಬ ಶೀರ್ಷಿಕೆ (ಸರ್ಗಗಳು ೪)' ಸೇರಿಸಬೇಕು
೨೮	೪	ಉತ್ತಮವಾದ	ಉಕ್ತವಾದ
೩೮	೮	ಅಂತರಂಗ	ಅಂತರಂಗದ
೪೦	೨೦	consmic	cosmic
೪೮	೨	onging to lbuild	longing to build
೫೭	೧	ಆ ರಕ್ತ	ಆರಕ್ತ
೬೭	೧೬	by features	by many features
"	೧೮	the soul of	the soul
"	೨೨	to save,	to save;
೬೮	೮	the glory	glory
"	೯	not mere	not a mere
"	೧೦	loving	living

ಉಪನ್ಯಾಸ ಗ್ರಂಥಮಾಲೆ

ಇತ್ತೀಚಿನ ಪ್ರಕಟನೆಗಳು

ಹಳ್ಳಿಗರೇಳ್ಗೆ ಸಾಧಿಸುವ ಬಗೆ
—ಬಿ. ಆರ್. ಪಾಟೀಲ

ಸಾಮಾಜಿಕ ಭದ್ರತೆ
—ಎಚ್. ವ್ಹಿ. ನಾಗೇಶ

ಸಾಮಾಜಿಕ ಸಮಸ್ಯೆಗಳು
—ಕೆ. ಜಿ. ಜೋಶಿ

ಕರ್ನಾಟಕದಲ್ಲಿ ನವಶಿಲಾಯುಗ
—ಬಾ. ರಾ. ಗೋಪಾಲ್

ಜೀವಾವಶೇಷಗಳು
—ಎಂ. ಎಸ್. ಮನ್ನಿಕೇರಿ

ವಿಜಯನಗರ ಕಾಲದ ಧಾರ್ಮಿಕ ಜೀವನ
—ಸದ್ಯೋಜಾತ ಸ್ವಾಮೀಜಿ

ಡಾ॥ ಬೊರಾನಾ ಅವರ ಸಂಶೋಧನೆಗಳು
—ಎಚ್. ಕೆ. ಮಲ್ಲಿಕಾರ್ಜುನಪ್ಪ

ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ
—ಎಲ್. ಜಿ. ಜೋಶಿ

ಕಾರ್ಮಿಕ ಮತ್ತು ಯೋಜನೆ
—ಟಿ. ಕೆ. ಮೇಟಿ

ಭಾರತೀಯ ಹಬ್ಬಗಳು
—ಸಿ. ವ್ಹಿ. ಕೆರಿಮನಿ

ಕುಷ್ಠರೋಗ ನಿವಾರಣೆ
—ಡಾ॥ ಎಸ್. ಜೆ. ನಾಗಲೋಟಿಮಠ

ಶ್ರವಣಾತೀತ ಧ್ವನಿ
—ಪ್ರೊ॥ ಡಿ. ಆರ್. ಬಳೂರಗಿ

ಸಿಮೆಂಟ್ ಕಾಂಕ್ರೀಟ್
—ಪ್ರೊ॥ ಬಸವರಾಜ ಪುರಾಣಿಕ

ಜನಪದ ಕಾವ್ಯ
—ಗಿರಡ್ಡಿ ಗೋವಿಂದರಾಜ

ಜಂತುರೋಗಗಳು
—ಡಾ॥ ಪಿ. ಎಸ್. ಶಂಕರ

ವ್ಯಾಸಂಗವಿಸ್ತರಣ ಮತ್ತು ಪ್ರಕಟನವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩